ಸೋಮವಾರ, ಅಕ್ಟೋಬರ್ 4, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೆಲುವಿನ ಸಂಭ್ರಮ

ಉಪ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕೋಲ್ಕತ್ತದಲ್ಲಿ ಬೆಂಬಲಿಗರೊಬ್ಬರು ಮಮತಾ ಭಾವಚಿತ್ರವಿರುವ ಕನ್ನಡಕ ಧರಿಸಿ ಸಂಭ್ರಮಿಸಿದರು

ಆಕರ್ಷಕ ವಿನಿಮಯ ಪ್ರಯೋಜನಗಳೊಂದಿಗೆ ನಿಮ್ಮ ಅಸ್ತಿತ್ವದಲ್ಲಿರುವ ಕಾರನ್ನು ಅಪ್‌ಗ್ರೇಡ್ ಮಾಡಿ*

- 100% ವರೆಗೆ ಆನ್ ರೋಡ್ ಫಂಡಿಂಗ್.*
- ಸಂಬಳದ ಗ್ರಾಹಕರಿಗೆ ವಿಶೇಷ ಬಡ್ಡಿ ದರ 7.65%*
- ಇ.ಎಮ್.ಐ ಪ್ರಾರಂಭ ₹1 111/ಲಕ್ಷ*

SANTRO	Grand i10 NIOS	i20	AURA
Benefits up to ₹40 000*	Benefits up to ₹50 000*	Benefits up to ₹40 000*	Benefits up to ₹50 000*

HYUNDAI

Buy your favourite Hyundai online.

Hyundai Cl!ck to Buy

To know more, give a missed call on 7829150968

UPTO 5 YEARS Wonder Warranty^

Complete peace of mind
3 Years road side assistance (RSA)

Lowest cost of maintenance.##

Hyundai Mobility Membership

25 years of Hyundai

*Terms and conditions apply. Benefits include Cash discount, Exchange bonus and Corporate / Government employee offer as available. Offers may vary basis of variant selected. Features shown may not be part of standard equipment and are subject to change without prior notice. 3 year / unlimited warranty or up to 5 year wonder warranty available as standard on select models. All offers valid till 31st Oct 2021. Visit your nearest Hyundai dealer for more details. Hyundai urges you to follow traffic rules, these are meant to keep you safe on roads.

Trident Hyundai: Sankey Road: 43433333, 9844266882, Old Airport Road: 43433111, 9743786943, Hosur Road: 43433222, 9844266876, Whitefield (K R Puram): 67879191, 9964187952, Yelahanka: 9844701457, Yeshwanthpur: 9844701452; **Advaith Hyundai:** Residency Road: 9606076450, Marathalli ORR: 9606076452, Vasanth Nagar: 9606076453, Bannerghatta Road: 9606076454, Koramangala: 9606076455, Old Madras Road-Avalahalli: 9606076456, Bilekahalli - BG Road: 9606076457, Sarjapur: 9606076458; **Blue Hyundai:** Magadi Road: 9513200033; New BEL Road: 9513000800, 9513580320, Basavanagudi: 9591211118, 9686115155, Rajajinagar: 9591200001, 9611186804, Mysore Road: 9591100001, 26984000, Nelamangala: 9008917888, 9742245636; **Lakshmi Hyundai:** Hebbal, Bellary Road: 9900037900, Whitefield (Hopefarm Signal): 8884497700, Kalyan Nagar: 8884441111, 8095544666, Devanahalli: 8884499037; **Pavan Hyundai:** Kanakapura Road: Opp Metro Cash and Carry 7483033704, 080-66020266.

ನಾಗಚೈತನ್ಯ, ಸಮಂತಾ ವಿಚ್ಛೇದನ ಘೋಷಣೆ

ಸಮಂತಾ ಅಕ್ಕಿನೇನಿ

ನಾಗಚೈತನ್ಯ

ಬೆಂಗಳೂರು: ತೆಲುಗು ಸಿನಿಮಾ ನಟ ನಾಗಚೈತನ್ಯ ಹಾಗೂ ಖ್ಯಾತ ನಟಿ ಸಮಂತಾ ಅವರು ಬೇರೆಯಾಗಿರುವುದಾಗಿ ಘೋಷಿಸಿದ್ದಾರೆ.

ಸ್ವತಃ ಈ ವಿಷಯವನ್ನು ಟ್ವಿಟರ್‌ನಲ್ಲಿ ಪ್ರಕಟಿಸಿರುವ ನಾಗಚೈತನ್ಯ, 'ಹೆಚ್ಚು ಆಲೋಚನೆಯ ನಂತರ ಸಮಂತಾ ಮತ್ತು ನಾನು ಸ್ವಂತ ದಾರಿಯನ್ನು ಅನುಸರಿಸಲು ಹೆಜ್ಜೆ ಇಟ್ಟಿದ್ದೇವೆ. ಈ ಮೂಲಕ ಪತಿ-ಪತ್ನಿ ಸಂಬಂಧದಿಂದ ಬೇರೆಯಾಗಲು ನಿರ್ಧರಿಸಿದ್ದೇವೆ' ಎಂದು ಘೋಷಿಸಿದ್ದಾರೆ.

'ಒಂದು ದಶಕದ ಈ ಸ್ನೇಹವನ್ನು ಅನುಭವಿಸಲು ನಾವು ಅದೃಷ್ಟಶಾಲಿಯಾಗಿದ್ದೆವು. ಅದು ನಮ್ಮ ಸಂಬಂಧದ ತಳಹದಿ. ಈ ಸ್ನೇಹಕ್ಕೆ ಯಾವಾಗಲೂ ವಿಶೇಷ ಮಹತ್ವ ಇರುತ್ತದೆ. ಈ ಕಷ್ಟದ ಸಮಯದಲ್ಲಿ ನಮ್ಮ ಅಭಿಮಾನಿಗಳು, ಹಿತೈಷಿಗಳು ಮತ್ತು ಮಾಧ್ಯಮಗಳು ನಮ್ಮನ್ನು ಬೆಂಬಲಿಸಬೇಕು' ಎಂದು ನಾಗಚೈತನ್ಯ ಟ್ವೀಟ್ ಮಾಡಿದ್ದಾರೆ.

ಅಲ್ಲದೇ, 'ನಮ್ಮ ಖಾಸಗಿತನ ಗೌರವಿಸಬೇಕು' ಎಂದು ಅವರು ಅಭಿಮಾನಿಗಳಿಗೆ ಹಾಗೂ ಮಾಧ್ಯಮಗಳಿಗೆ ಮನವಿ ಮಾಡಿದ್ದಾರೆ. ಸಮಂತಾ ಅವರು ವಿಚ್ಛೇದನ ಬಗ್ಗೆ ಇನ್‌ಸ್ಟಾಗ್ರಾಂನಲ್ಲಿ ಘೋಷಣೆ ಮಾಡಿದ್ದಾರೆ.

ಹಲವು ಯಶಸ್ವಿ ಚಿತ್ರಗಳಲ್ಲಿ ಒಟ್ಟಿಗೆ ನಟಿಸಿದ್ದ ಸಮಂತಾ ಹಾಗೂ ನಾಗಚೈತನ್ಯ 2017ರಲ್ಲಿ ವಿವಾಹವಾಗಿದ್ದರು. ಕೆಲ ದಿನಗಳ ಹಿಂದೆ ಸಮಂತಾ ಅವರು ತಮ್ಮ ಟ್ವಿಟರ್ ಖಾತೆಯ ತಮ್ಮ ಹೆಸರಿನೊಂದಿಗಿದ್ದ 'ಅಕ್ಕಿನೇನಿ' ಎಂಬುದನ್ನು ತೆಗೆದುಹಾಕಿದ್ದರು. ಇದು ಅವರು ಶೀಘ್ರವೇ ವಿಚ್ಛೇದನ ಪಡೆಯಲಿದ್ದಾರೆ ಎಂಬ ವದಂತಿಗಳಿಗೆ ಕಾರಣವಾಗಿತ್ತು.

'ಪಠ್ಯದಲ್ಲಿ ಚುಟುಕು ಸಾಹಿತ್ಯ ಅಳವಡಿಸಿ'

ಶಿರಸಿ: ಹೊಸ ಶಿಕ್ಷಣ ನೀತಿಯಲ್ಲಿ ಕನ್ನಡ ಭಾಷೆಗೆ ಪ್ರಾಶಸ್ತ್ಯ ನೀಡಿ ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಬೇಕು. ಈ ಪಠ್ಯದಲ್ಲಿ ಚುಟುಕು ಸಾಹಿತ್ಯವನ್ನೂ ಸೇರ್ಪಡೆಗೊಳಿಸಬೇಕು ಎಂದು ನೆಲಮಂಗಲ ಹೆಗ್ಗುಂದದ ವನಕಲ್ಲು ಮಲ್ಲೇಶ್ವರ ಮಠದ ಪೀಠಾಧ್ಯಕ್ಷ ಬಸವ ರಮಾನಂದ ಸ್ವಾಮೀಜಿ ಹೇಳಿದರು.

ಇಲ್ಲಿನ ರುದ್ರದೇವರ ಮಠದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ 9ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ವಚನ ಸಾಹಿತ್ಯ, ಜಾನಪದ ತ್ರಿಪದಿಯಲ್ಲಿ ಚುಟುಕು ಸಾಹಿತ್ಯ ಸೇರಿದೆ. ನವಿರಾದ ಹಾಸ್ಯ ಮತ್ತು ವಿಡಂಬನೆ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಸಾಹಿತ್ಯ ಇದಾಗಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸುವ ಮನಸ್ಥಿತಿ ಇಲ್ಲದಿರುವುದು ಬೇಸರದ ಸಂಗತಿ' ಎಂದರು.

ಚೀನಾ ಬೆದರಿಕೆಗೆ ಬಗ್ಗಲ್ಲ: ಭಾರತೀಯ ಸೇನಾಪಡೆ ಮುಖ್ಯಸ್ಥ ಎಂ.ಎಂ. ನರವಣೆ ಹೇಳಿಕೆ

'ವಿವಾದಿತ ಗಡಿಯಲ್ಲಿ ಸೇನೆ ಜಮಾವಣೆ'

ನವದೆಹಲಿ (ಎಎಫ್‌ಪಿ): ಚೀನಾ ವಿವಾದಿತ ಗಡಿ ಪ್ರದೇಶದಲ್ಲಿ ಗಣನೀಯ ಸಂಖ್ಯೆಯಲ್ಲಿ ಸೇನೆಯನ್ನು ಜಮಾವಣೆ ಮಾಡುತ್ತಿದೆ. ಪ್ರತಿಕ್ರಿಯೆಯಾಗಿ ಭಾರತವೂ ಸಮನಾಗಿ ತನ್ನ ಸೇನೆಯನ್ನು ನಿಯೋಜಿಸುತ್ತಿದೆ ಎಂದು ಭಾರತೀಯ ಸೇನಾಪಡೆ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ತಿಳಿಸಿದರು.

3,500 ಕಿ.ಮೀ (2,200 ಮೈಲಿ) ಉದ್ದದ ಗಡಿಯಲ್ಲಿ ಚೀನಾ ಸೈನ್ಯದ ಉಪಸ್ಥಿತಿ ಗಣನೀಯ ಸಂಖ್ಯೆಯಲ್ಲಿ ಹೆಚ್ಚಾಗಿದೆ. ಇದಕ್ಕೆ ಪ್ರತಿಯಾಗಿ ಭಾರತವೂ ತನ್ನ ಪಡೆಯನ್ನು ಅಲ್ಲಿ ಜಮಾವಣೆ ಮಾಡುತ್ತಿದೆ ಎಂದು ಅವರು ಶನಿವಾರ ಲಡಾಖ್‌ನಲ್ಲಿ ಸುದ್ದಿಗಾರರಿಗೆ ಹೇಳಿದರು.

'ನಾವೂ ಬಲಿಷ್ಠರಾಗಿದ್ದು ಗಡಿಯಲ್ಲಿ ಸುಧಾರಿತ ಶಸ್ತ್ರಾಸ್ತ್ರಗಳನ್ನು ಕೂಡ ಅಳವಡಿಸಿದ್ದೇವೆ. ಯಾವುದೇ ಸಂದರ್ಭವನ್ನು


ನರವಣೆ

ಎದುರಿಸಲು ಸಜ್ಜಾಗಿದ್ದೇವೆ' ಎಂದರು.

ಕಳೆದ ವರ್ಷ ಜೂನ್ ತಿಂಗಳಲ್ಲಿ ನಡೆದ ಘರ್ಷಣೆಯ ಬಳಿಕ ಭಾರತ ಮತ್ತು ಚೀನಾ ನಡುವೆ ಉನ್ನತ ಮಟ್ಟದ ಮಿಲಿಟರಿ ಮಾತುಕತೆಗಳು ನಡೆಯುತ್ತಿವೆ. ಮುಂದಿನ ವಾರ ಇನ್ನೊಂದು ಸುತ್ತಿನ ಸಭೆಯ ನಿರೀಕ್ಷೆಯಲ್ಲಿದೆ ಎಂದು ತಿಳಿಸಿದರು.

ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಹುವಾ ಚುನಿಂಗ್ ಅವರು ಭಾರತೀಯ ಸೈನಿಕರು ಅಕ್ರಮವಾಗಿ ಗಡಿ ದಾಟಿ ಚೀನಾದ ಭೂಪ್ರದೇಶಕ್ಕೆ ಬಂದಿದ್ದಾರೆ ಎಂದು ಕೆಲ ದಿನಗಳ ಹಿಂದೆ ಆರೋಪಿಸಿದ್ದರು. 'ಇದು ಆಧಾರರಹಿತ' ಎಂದು ಭಾರತ ಪ್ರತಿಕ್ರಿಯಿಸಿತ್ತು.

ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ನವದೆಹಲಿ: ಲಡಾಖ್ ಹಾಗೂ ಉತ್ತರಾಖಂಡ ಗಡಿಯಲ್ಲಿ ಚೀನಾ ಭದ್ರತಾ ಪಡೆಗಳ ಅತಿಕ್ರಮಣವನ್ನು ಪ್ರಸ್ತಾಪಿಸುವ ಮೂಲಕ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು, ಕೇಂದ್ರ ಸರ್ಕಾರದ ವಿರುದ್ಧ ಮತ್ತೊಮ್ಮೆ ಭಾನುವಾರ ವಾಗ್ದಾಳಿ ನಡೆಸಿದರು.

ರಾಹುಲ್ ಗಾಂಧಿ

2014ರ ಲೋಕಸಭಾ ಚುನಾವಣೆ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಹೇಳುತ್ತಿದ್ದ '56 ಇಂಚಿನ ಎದೆ' ಹೇಳಿಕೆಗಳನ್ನು ಸಹ ಪ್ರಸ್ತಾಪಿಸಿದ ಅವರು, ಪ್ರಧಾನಿ ವಿರುದ್ಧವೂ ಟೀಕಾಪ್ರಹಾರ ಮಾಡಿದರು.

'ಚೀನಾ ಪ್ಲಸ್ ಪಾಕಿಸ್ತಾನ ಪ್ಲಸ್ ಮಿಸ್ಟರ್ 56 ಇಂಚು ಎಂದರೆ ಚೀನಾದಿಂದ ಭಾರತ ಭೂಪ್ರದೇಶದ ಅತಿಕ್ರಮಣದಲ್ಲಿ ಹೆಚ್ಚಳ ಎಂಬುದಕ್ಕೆ ಸಮ' ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ. ಲಡಾಖ್ ಹಾಗೂ ಉತ್ತರಾಖಂಡ ಎಂಬ ಹ್ಯಾಶ್ ಟ್ಯಾಗ್‌ಗಳನ್ನು ಹಂಚಿಕೊಂಡರು. ಚೀನಾದ ಪೀಪಲ್ ಲಿಬರೇಶನ್ ಆರ್ಮಿಯ (ಪಿಎಲ್‌ಎ) 100ಕ್ಕೂ ಅಧಿಕ ಯೋಧರು ಆಗಸ್ಟ್ 30ರಂದು ಉತ್ತರಾಖಂಡದ ಬಾರಾಹೋತಿ ಸೆಕ್ಟರ್‌ಗೆ ಹೊಂದಿಕೊಂಡಿರುವ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಅತಿಕ್ರಮಣ ಮಾಡಿದ್ದರು.

ಕೆಲಕಾಲ ಭಾರತದ ಗಡಿಯೊಳಗಿದ್ದ ಚೀನಾ ಯೋಧರು, ನಂತರ ಹಿಂದಿರುಗಿದ್ದರು. ಘಟನೆ ಕುರಿತು ಈವರೆಗೆ ಕೇಂದ್ರ ಸರ್ಕಾರದಿಂದ ಅಧಿಕೃತ ಪ್ರತಿಕ್ರಿಯೆ ಹೊರಬಿದ್ದಿಲ್ಲ.



ಜಾಲಹಳ್ಳಿ ವೃತ್ತದ 'ಗ್ರೇಡ್ ಸಪರೇಟರ್' ಕಾಮಗಾರಿಗೆ ಚಾಲನೆ

ಅಭಿವೃದ್ಧಿಯಲ್ಲಿ ಪಕ್ಷ ರಾಜಕಾರಣ ಬೇಡ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿಯ ಹಾದಿಯಲ್ಲಿ ಪಕ್ಷ ರಾಜಕಾರಣವನ್ನು ಮರೆಯೋಣ. ಪಕ್ಷಾತೀತವಾಗಿ ಕೆಲಸ ಮಾಡಿ, ಕೊನೆಯ ತಿಂಗಳು ಚುನಾವಣೆಗಾಗಿ ಪಕ್ಷ ರಾಜಕಾರಣ ಮಾಡೋಣ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ಹಲವು ಕಾಮಗಾರಿಗಳಿಗೆ ಚಾಲನೆ ನೀಡಿ, ಕೋವಿಡ್ ಚಿಕಿತ್ಸಾ ಕೇಂದ್ರ, ಕ್ರೀಡಾಂಗಣ ಉದ್ಘಾಟಿಸಿದ ಅವರು, ಜಾಲಹಳ್ಳಿ ವೃತ್ತದಲ್ಲಿ 'ಗ್ರೇಡ್ ಸಪರೇಟರ್' ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

'ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಅಭಿವೃದ್ಧಿ ಕಾಮಗಾರಿಗಳು ಬೇಗ ಪೂರ್ಣಗೊಳ್ಳುತ್ತವೆ. ಬೆಳೆಯುತ್ತಿರುವ ಬೆಂಗಳೂರಿನ ಅಗತ್ಯಕ್ಕೆ ತಕ್ಕಂತೆ ಯೋಜನೆಗಳನ್ನು ರೂಪಿಸಬೇಕು. ಅದರಲ್ಲಿ ಪಕ್ಷ ರಾಜಕಾರಣ ಇರಕೂಡದು. ಯೋಜನಾಬದ್ಧವಾಗಿ ನಗರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು' ಎಂದು ಮನವಿ ಮಾಡಿದರು.

'ನಗರದಲ್ಲಿ ಅತಿ ದಟ್ಟಣೆಯ 12 ಮಾರ್ಗಗಳಲ್ಲಿ ವಿಸ್ತರಣಾ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದರಿಂದ ರಾಜಧಾನಿಯ ಸಂಚಾರ ದಟ್ಟಣೆ ತಗ್ಗುವ ನಿರೀಕ್ಷೆ ಇದೆ. ₹ 450 ಕೋಟಿ ವೆಚ್ಚದ ಈ ಕಾಮಗಾರಿಗಳು ಪೂರ್ಣಗೊಂಡರೆ ನಗರವನ್ನು ಸಂಪರ್ಕಿಸುವ ಎಲ್ಲ ಪ್ರಮುಖ ಮಾರ್ಗಗಳೂ ದಟ್ಟಣೆಯಿಂದ ಮುಕ್ತಿ ಪಡೆಯಲಿವೆ' ಎಂದರು.

'ಜಾಲಹಳ್ಳಿ ವೃತ್ತದಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿದ್ದವು. ದುರ್ಘಟನೆಗಳನ್ನು ತಪ್ಪಿಸಲು ಇಲ್ಲಿ 'ಗ್ರೇಡ್ ಸಪರೇಟರ್' ನಿರ್ಮಾಣ ಅನಿವಾರ್ಯವಾಗಿತ್ತು. ಈ ಹಿಂದೆ ತೆಗೆದುಕೊಂಡಿದ್ದ ತೀರ್ಮಾನವನ್ನು ಈಗ ಅನುಷ್ಠಾನಕ್ಕೆ ತರಲಾಗುತ್ತಿದೆ. ನಿರ್ದಿಷ್ಟ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ಗೊರಗುಂಟೆ ಪಾಳ್ಯ ವೃತ್ತದಲ್ಲಿ ಸಂಚಾರ ದಟ್ಟಣೆ ಮತ್ತು ಅಪಘಾತ ತಪ್ಪಿಸಲು ಮತ್ತಷ್ಟು ಕ್ರಮಗಳ ಅಗತ್ಯವಿದೆ. ಸಚಿವ ಮುನಿರತ್ನ ಮತ್ತು ಸಂಸದ ಡಿ.ಕೆ. ಸುರೇಶ್ ಸೇರಿದಂತೆ ಹಲವರು ಈಗಾಗಲೇ ಗಮನಕ್ಕೆ ತಂದಿದ್ದಾರೆ. ಸಮಗ್ರ ಯೋಜನೆ ರೂಪಿಸಿ ತ್ವರಿತವಾಗಿ ಕಾರ್ಯರೂಪಕ್ಕೆ ತರಲಾಗುವುದು' ಎಂದರು.

ಚಿತ್ರಣ ಬದಲಾವಣೆಗೆ ಸಜ್ಜು: ಲಗ್ಗೆರೆಯ ರಾಕ್ಷಸಿ ಹಳ್ಳದಲ್ಲಿ ₹ 25 ಕೋಟಿ ವೆಚ್ಚದಲ್ಲಿ ಅಂಬರೀಷ್ ಈಜುಕೊಳ, ಡಾ. ರಾಜ್‌ಕುಮಾರ್ ಉದ್ಯಾನ ಮತ್ತು ವಿಷ್ಣುವರ್ಧನ್ ಆಟದ ಮೈದಾನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಬೊಮ್ಮಾಯಿ, 'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯನ್ನು ₹ 6,000 ಕೋಟಿ ವೆಚ್ಚದಲ್ಲಿ ಅನುಷ್ಠಾನಕ್ಕೆ ತರಲು ಸಿದ್ಧತೆ ನಡೆದಿದೆ. ಈ ಯೋಜನೆಯಡಿ ಬೆಂಗಳೂರಿಗೆ ಹೆಚ್ಚಿನ ಅನುದಾನ ಲಭಿಸಲಿದೆ. ರಾಜಧಾನಿಯ ಚಿತ್ರಣವನ್ನೇ ಬದಲಿಸಲು ಸರ್ಕಾರ ಸಜ್ಜಾಗಿದೆ' ಎಂದು ಹೇಳಿದರು.

'ಕುಡಿಯುವ ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ ಸೇರಿದಂತೆ ದೀರ್ಘ ಕಾಲದಿಂದ ಬಾಕಿ ಉಳಿದಿರುವ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಲಾಗುವುದು. ಜನಸ್ನೇಹಿ ಆಡಳಿತವನ್ನು ನೀಡಲಾಗುವುದು. ಇದಕ್ಕಾಗಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಲಾಗುವುದು' ಎಂದು ತಿಳಿಸಿದರು.

ಸ್ಥಳೀಯ ಶಾಸಕರೂ ಆಗಿರುವ ಸಚಿವ ಮುನಿರತ್ನ, ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬೈರತಿ ಬಸವರಾಜ, ಕೆ. ಗೋಪಾಲಯ್ಯ, ಸಂಸದ ಡಿ.ಕೆ. ಸುರೇಶ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಉಪಸ್ಥಿತರಿದ್ದರು.

ಲಗ್ಗೆರೆಯ ರಾಕ್ಷಸಿ ಹಳ್ಳದ ಬಳಿ ಭಾನುವಾರ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವ ಮುನಿರತ್ನ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಯೋಜನೆಯ ಕುರಿತು ಮಾಹಿತಿ ನೀಡಿದರು. ಸಂಸದ ಡಿ.ಕೆ. ಸುರೇಶ್, ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಬೈರತಿ ಬಸವರಾಜ, ಕೆ. ಗೋಪಾಲಯ್ಯ ಇದ್ದರು – ಪ್ರಜಾವಾಣಿ ಚಿತ್ರ

₹ 361.81 ಕೋಟಿ ವೆಚ್ಚದ ಕಾಮಗಾರಿ

ತೋಟಗಾರಿಕಾ ಸಚಿವ ಮುನಿರತ್ನ ಪ್ರತಿನಿಧಿಸುವ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ಐದು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಮುಖ್ಯಮಂತ್ರಿಯವರು ಹಲವು ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಕೋವಿಡ್ ಚಿಕಿತ್ಸಾ ಕೇಂದ್ರ, ಕ್ರೀಡಾಂಗಣ ಸೇರಿದಂತೆ ಈಗಾಗಲೇ ಸಿದ್ಧವಾಗಿರುವ ಸೌಲಭ್ಯಗಳನ್ನು ಉದ್ಘಾಟಿಸಿದರು. ಈ ಎಲ್ಲವುಗಳ ಒಟ್ಟು ಮೊತ್ತ ₹ 361.81 ಕೋಟಿ ಆಗಲಿದೆ.

ಕೋವಿಡ್ ಚಿಕಿತ್ಸಾ ಕೇಂದ್ರ ಉದ್ಘಾಟನೆ

ಯಶವಂತಪುರದಲ್ಲಿ ₹ 36.91 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮಲ್ಟಿ ಸ್ಪೆಷಾಲಿಟಿ ಕೋವಿಡ್ ಚಿಕಿತ್ಸಾ ಕೇಂದ್ರವನ್ನು ಬಸವರಾಜ ಬೊಮ್ಮಾಯಿ ಭಾನುವಾರ ಉದ್ಘಾಟಿಸಿದರು.

ನಾಲ್ಕು ಮಹಡಿಯ ಈ ಚಿಕಿತ್ಸಾ ಕೇಂದ್ರದಲ್ಲಿ ಎಲ್ಲ ಹಾಸಿಗೆಗಳಿಗೂ ಆಮ್ಲಜನಕದ ಸೌಲಭ್ಯ ಕಲ್ಪಿಸಲಾಗಿದೆ. ಸ್ಥಳದಲ್ಲೇ 10 ಕಿಲೋ ಲೀಟರ್ ಸಾಮರ್ಥ್ಯದ ಆಮ್ಲಜನಕ ಸಂಗ್ರಹಣಾ ಘಟಕವನ್ನು ಅಳವಡಿಸಲಾಗಿದೆ. ಒಂದು ತಿಂಗಳ ಅವಧಿಗೆ ದಿನದ 24 ಗಂಟೆಯೂ ಎಲ್ಲ ಹಾಸಿಗೆಗಳಿಗೆ ಆಮ್ಲಜನಕ ಒದಗಿಸುವ ಸಾಮರ್ಥ್ಯವನ್ನು ಈ ಕೇಂದ್ರ ಹೊಂದಿದೆ.

ಷಟಲ್ ಬ್ಯಾಡ್ಮಿಂಟನ್ ಆಡಿದ ಸಿ.ಎಂ

ಮತ್ತೀಕೆರೆಯ ಜೆ.ಪಿ. ಉದ್ಯಾನದಲ್ಲಿ ₹ 5.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಬ್ಯಾಡ್ಮಿಂಟನ್ ಕೋರ್ಟ್ ಉದ್ಘಾಟಿಸಿದ ಮುಖ್ಯಮಂತ್ರಿ, ಸಚಿವರ ಜತೆ ಷಟಲ್ ಬ್ಯಾಡ್ಮಿಂಟನ್ ಆಡಿದರು. ಈ ಒಳಾಂಗಣ ಕ್ರೀಡಾಂಗಣದಲ್ಲಿ ಮಹಿಳೆಯರು ಮತ್ತು ಪುರುಷರಿಗಾಗಿ ಆರು ಅಂಕಣಗಳನ್ನು ನಿರ್ಮಿಸಲಾಗಿದೆ.

ಕೋವಿಡ್: 29.77 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 664 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.77 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.26 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.52 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕಲಬುರ್ಗಿ ಹಾಗೂ ರಾಯಚೂರಿನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ಮೈಸೂರಿನಲ್ಲಿ 101, ದಕ್ಷಿಣ ಕನ್ನಡದಲ್ಲಿ 76 ಹಾಗೂ ಕೊಡಗಿನಲ್ಲಿ 52 ಪ್ರಕರಣಗಳು ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಕೋವಿಡ್ ಪೀಡಿತರಲ್ಲಿ 8 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 6 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಮೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮೈಸೂರು ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,819ಕ್ಕೆ ತಲುಪಿದೆ. ಸೋಂಕಿತರಲ್ಲಿ 711 ಮಂದಿ ಚೇತರಿಸಿಕೊಂಡಿದ್ದಾರೆ.



ಮೇಕೆದಾಟು ಯೋಜನೆ ಜಾರಿ ಶತಸಿದ್ಧ: ಬೊಮ್ಮಾಯಿ

ಬಳ್ಳಾರಿ: 'ತಮಿಳುನಾಡು ಎಷ್ಟೇ ವಿರೋಧ ಮಾಡಿದರೂ ತಲೆಕೆಡಿಸಿಕೊಳ್ಳದೆ ಮೇಕೆದಾಟು ಯೋಜನೆಯನ್ನು ಮಾಡೇ ತೀರುತ್ತೇವೆ. ಈ ಕುರಿತ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಸ್ಪಷ್ಟಪಡಿಸಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಬೊಮ್ಮಾಯಿ, 'ಮೇಕೆದಾಟು ಕುರಿತಂತೆ ತಮಿಳು ನಾಡು ನಿಲುವು ಗೊತ್ತಿರುವ ವಿಚಾರ. ಈ ವಿಷಯದಲ್ಲಿ ಅವರು ರಾಜಕೀಯ ಮಾಡುತ್ತಿದ್ದಾರೆ. ಈ ಯೋಜನೆಗೆ ನೀರನ್ನು ಕೊಡುವಂತಹದ್ದು ಅಥವಾ ಯೋಜನೆ ಮಾಡುವಂತಹದ್ದು ತಮಿಳುನಾಡಿನವರ ಕೈಯಲಿಲ್ಲ. ಅವರು ಏನೇ ಮಾತಾಡಿದರೂ, ಏನೇ ನಿರ್ಣಯ ಮಾಡಿದರೂ ಅದಕ್ಕೆ ಅರ್ಥ ಇಲ್ಲ. ಈ ಸತ್ಯ ಗೊತ್ತಿದ್ದೂ, ಅಲ್ಲಿನ ಜನರಿಗೆ ದಾರಿ ತಪ್ಪಿಸುವ ಕೆಲಸವನ್ನು ಅಲ್ಲಿನ ಮುಖಂಡರು ಮಾಡುತ್ತಿದ್ದಾರೆ. ಕಾನೂನಾತ್ಮಕ ಹೋರಾಟದಲ್ಲೂ ಬದಲಾವಣೆ ಇಲ್ಲ' ಎಂದು ತಿಳಿಸಿದರು.

ವಿಂಟೇಜ್ ಕಾರುಗಳ ರ್‍ಯಾಲಿ

ವನ್ಯಜೀವಿಗಳ ಸಂರಕ್ಷಣೆ ಸಪ್ತಾಹದ ಅಂಗವಾಗಿ ನಗರದಲ್ಲಿ ಭಾನುವಾರ ಅರಣ್ಯ ಇಲಾಖೆ, ಕರ್ನಾಟಕ ವಿಂಟೇಜ್ ಮತ್ತು ಕ್ಲಾಸಿಕ್ ಕಾರು ಕ್ಲಬ್ ಮತ್ತು ಭಾರತೀಯ ಐತಿಹಾಸಿಕ ವಾಹನಗಳ ಒಕ್ಕೂಟದ ಆಶ್ರಯದಲ್ಲಿ ವಿಂಟೇಜ್ ಕಾರುಗಳ ರ್‍ಯಾಲಿ ನಡೆಯಿತು –ಪ್ರಜಾವಾಣಿ ಚಿತ್ರ

ವಿದ್ಯುತ್ ಅವಘಡ ಅಜ್ಜಿ-ಮೊಮ್ಮಗ ಸಾವು

ಸಂಕೇಶ್ವರ (ಬೆಳಗಾವಿ ಜಿಲ್ಲೆ): ಇಲ್ಲಿನ ಮಡ್ಡಿ ಗಲ್ಲಿಯಲ್ಲಿ ಭಾನುವಾರ ಮನೆಯ ಹಿತ್ತಲಲ್ಲಿ ಬಟ್ಟೆ ಒಣಗಿಸಲು ಹೋದ ಅಜ್ಜಿಗೆ ವಿದ್ಯುತ್ ಪ್ರವಹಿಸಿ, ಆಕೆಯನ್ನು ರಕ್ಷಿಸಲು ಹೋದ ಮೊಮ್ಮಗನಿಗೂ ತಗುಲಿ ಇಬ್ಬರು ಸ್ಥಳದಲ್ಲಿ ಮೃತಪಟ್ಟಿದ್ದಾರೆ.

ಇವರಿಬ್ಬರನ್ನು ವಿದ್ಯುತ್ ಅವಘಡದಿಂದ ತಪ್ಪಿಸಲು ಹೋದ ಸೊಸೆ ಕೂಡ ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತರನ್ನು ಶಾಂತವ್ವಾ ದುಂಡಪ್ಪಾ ಬಸ್ತವಾಡಿ (85) ಹಾಗೂ ಸಿದ್ದಾರ್ಥ ಬಾಪು ಬಸ್ತವಾಡಿ(30) ಎಂದು ಗುರುತಿಸಲಾಗಿದೆ. ಸಂಕೇಶ್ವರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ

ಅಧಿಕಾರಕ್ಕೆ ಬಂದು ಜಾತಿಗಣತಿ ವರದಿ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮುಖ್ಯಮಂತ್ರಿ ಆಗಿದ್ದಾಗ ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿಯನ್ನು ಈಗಿನ ಸರ್ಕಾರ ಸ್ವೀಕರಿಸುವಂತೆ ಕಾಣುತ್ತಿಲ್ಲ. ಹೀಗಾಗಿ, ನಾವು (ಕಾಂಗ್ರೆಸ್) ಮತ್ತೆ ಅಧಿಕಾರಕ್ಕೆ ಬಂದ ಮೇಲೆ ವರದಿ ಸ್ವೀಕರಿಸುತ್ತೇವೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ದೇವನಹಳ್ಳಿಯಲ್ಲಿ ಭಾನುವಾರ ನಡೆದ ಗಾಣಿಗ ಸಮುದಾಯದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ನನ್ನ ಅವಧಿಯಲ್ಲಿ ವರದಿ ಸಿದ್ಧಗೊಂಡಿರಲಿಲ್ಲ. ಈಗ ವರದಿ ಸಿದ್ಧವಾಗಿದೆ. ಆದರೆ, ಈಗಿನ ಯಾವ ಸರ್ಕಾರಗಳಿಗೂ ಅದನ್ನು ಸ್ವೀಕರಿಸುವ ಬದ್ಧತೆ ಇಲ್ಲ' ಎಂದರು.

'ಮೀಸಲಾತಿ ವಿಚಾರ ನ್ಯಾಯಾಲಯದ ಮುಂದೆ ಬಂದಾಗಲೆಲ್ಲ ಜಾತಿ ಜನಸಂಖ್ಯೆಗೆ ಸಂಬಂಧಿಸಿದಂತೆ ನಿಮ್ಮ ಬಳಿಯಿರುವ ಅಧಿಕೃತ ದಾಖಲೆ ಏನು ಎಂದು ನ್ಯಾಯಾಲಯ ಪ್ರಶ್ನಿಸುತ್ತಿತ್ತು. ಈ ಕಾರಣಕ್ಕೆ ನಾನು ಸಮೀಕ್ಷೆ ನಡೆಸಲು ಆದೇಶಿಸಿದ್ದೆ. ಜಾತಿ ಜನಸಂಖ್ಯೆಗೆ ಅನುಗುಣವಾಗಿ ಕಾರ್ಯಕ್ರಮ ರೂಪಿಸುವುದು ಸಮೀಕ್ಷೆ ನಡೆಸಿದ ಉದ್ದೇಶವಾಗಿತ್ತು' ಎಂದರು.

'ನಾನು ಕಷ್ಟಪಟ್ಟು ಮೀಸಲಾತಿ ರಥವನ್ನು ಇಲ್ಲಿಯವರೆಗೆ ಎಳೆದು ತಂದಿದ್ದೇನೆ. ಸಾಧ್ಯವಾದರೆ ಮುಂದಕ್ಕೆ ಎಳೆಯಿರಿ, ಇಲ್ಲವಾದರೆ ಅಲ್ಲಿಯೇ ಬಿಟ್ಟುಬಿಡಿ, ದಯವಿಟ್ಟು ರಥವನ್ನು ಹಿಂದಕ್ಕೆ ಮಾತ್ರ ಎಳೆಯಬೇಡಿ' ಎಂದೂ ಸಿದ್ದರಾಮಯ್ಯ ಮನವಿ ಮಾಡಿದರು.

'ಗಾಣಿಗರು ಬಹಳ ಹಿಂದುಳಿದ ಸಮಾಜದವರು. ಈ ಸಮಾಜದವರು ಬರೀ ಎಣ್ಣೆ ತೆಗೆಯುವ ಉದ್ಯೋಗಕ್ಕೆ ಜೋತುಬೀಳದೆ ಶಿಕ್ಷಣದ ಕಡೆಗೆ ಹೆಚ್ಚು ಮಹತ್ವ ನೀಡಿ, ಎಲ್ಲಾ ಕ್ಷೇತ್ರಗಳಲ್ಲೂ ಉದ್ಯೋಗ ಪಡೆಯುವ ಪ್ರಯತ್ನ ಮಾಡಬೇಕು' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಶ್ರಮದ ಸಂಸ್ಕೃತಿಯ ಪ್ರತೀಕವೇ ಗಾಣಿಗ ಸಮುದಾಯ. ನಾವು ಯಾರೂ ಇಂತಹುದೇ ಜಾತಿ, ಧರ್ಮದಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡು ಹುಟ್ಟಿಲ್ಲ. ಆದರೆ ಜಾತಿಯನ್ನು ನಾವು ಬಿಟ್ಟರೂ, ಅದು ನಮ್ಮನ್ನು ಬಿಡುವುದಿಲ್ಲ. ನಾವು ಜಾತಿ, ಧರ್ಮ ನಂಬುವುದಿಲ್ಲ ಎಂದು ಹೇಳಿದರೂ ಸತ್ತ ನಂತರ ದೇಹ ಮಣ್ಣು ಮಾಡಬೇಕಾ, ಸುಡಬೇಕಾ ಎಂದು ಆಯಾ ಜಾತಿಯವರು ನಿರ್ಣಯ ಕೈಗೊಳ್ಳುತ್ತಾರೆ. ಹೀಗೆ ನಾವು ಜಾತಿ ಬಿಟ್ಟರೂ, ಅದು ನಮ್ಮನ್ನು ಬಿಡುವುದಿಲ್ಲ' ಎಂದರು.

'ನಮ್ಮದು ಸಣ್ಣ ಸಮಾಜ ಎಂಬ ಅಳುಕು ಬೇಡ. ನಾನು ನಿಮ್ಮ ಧ್ವನಿಯಾಗಿ, ನಿಮ್ಮ ಸಮಸ್ಯೆ ತಿಳಿಯಲು ಬಂದಿದ್ದೇನೆ. ನಿಮ್ಮ ಸಮಾಜದ ಕಲ್ಯಾಣಕ್ಕೆ ನಾವು ಯಾವ ದಿಕ್ಕಿನಲ್ಲಿ ಹೋಗಬೇಕು ಎಂಬುದನ್ನು ತಿಳಿಸಿ. ಚುನಾವಣೆಗೆ ಹೋದಾಗ ಈ ಸಮಾಜದ ಏಳಿಗೆಗೆ ಪೂರಕವಾಗಿ ನಮ್ಮ ಪ್ರಣಾಳಿಕೆ ಸಿದ್ಧಪಡಿಸುತ್ತೇವೆ' ಎಂದು ಭರವಸೆ ನೀಡಿದರು.

ಗಾಣಿಗ ಸಮುದಾಯದ ಕಾರ್ಯಾಗಾರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮಿನಾರಾಯಣ

ಇದ್ದರೆ ಸಮರ್ಥ ಸಾರಥಿ, ಕಸಾಪಕ್ಕೆ ಕೀರ್ತಿ

ಪ್ರಜಾವಾಣಿ ವಾರ್ತೆ

ಆಲದಮರ (ಪ್ರಜಾವಾಣಿ ಕ್ಲಬ್‌ಹೌಸ್): ಕನ್ನಡ ಸಾಹಿತ್ಯ ಪರಿಷತ್‌ನ ಚುಕ್ಕಾಣಿ ಹಿಡಿಯುವವರ ಆಯ್ಕೆ ಪ್ರಕ್ರಿಯೆಯಿಂದ ಹಿಡಿದು, ಸದಸ್ಯತ್ವದವರೆಗೆ ಸಮಗ್ರ ಬದಲಾವಣೆ ಆಗಬೇಕು ಎಂಬ ಆಶಯ ಭಾನುವಾರ 'ಆಲದ ಮರ'ದಡಿ ಸೇರಿದ ಸಾಹಿತಿಗಳು, ಚಿಂತಕರಿಂದ ವ್ಯಕ್ತವಾಯಿತು.

ಪರಿಷತ್‌ನಿಂದಾಗಿ ಸಾಹಿತ್ಯ, ಭಾಷೆ, ಹಿತಾಸಕ್ತಿಗಳ ಮೇಲಾಗಿರುವ ಪರಿಣಾಮದಿಂದ ಹಿಡಿದು ಅಲ್ಲೂ ಸೃಷ್ಟಿಯಾಗಿರುವ ರಾಜಕಾರಣ, ಸ್ವಜನಪಕ್ಷಪಾತ, ಹಿಟ್ಲರ್ ಪ್ರವೃತ್ತಿಯಂತಹ ರಾಡಿಯನ್ನೂ ಗಣ್ಯರು ತೆರೆದಿಟ್ಟರು.

ಆಗಬೇಕಾಗಿರುವುದೇನು?: ಸಾಹಿತಿ ಬಸವರಾಜ ಕಲ್ಗುಡಿ ಮಾತನಾಡಿ, 'ಕನ್ನಡ ಜ್ಞಾನ ಪ್ರಸಾರದ ವ್ಯವಸ್ಥೆಯಾಗಬೇಕು. ತಾಲ್ಲೂಕು ಮಟ್ಟದಲ್ಲೂ ಪರಿಷತ್‌ನ ಒಳ್ಳೆಯ ಗ್ರಂಥಾಲಯ ಇರಬೇಕು. ಸಾಹಿತ್ಯ ಸಮ್ಮೇಳನದಂತಹ ಜಾತ್ರೆಯ ದುಡ್ಡನ್ನು ಜ್ಞಾನ ಪ್ರಸಾರಕ್ಕೆ ಬಳಸಬೇಕು. ಅಧ್ಯಕ್ಷರು, ಪದಾಧಿಕಾರಿಗಳನ್ನು ನಾಡಿನ ಧೀಮಂತ ಸಾಹಿತಿ ಗಣ್ಯರು ಶಿಫಾರಸು ಮಾಡಬೇಕು' ಎಂದು ಆಶಿಸಿದರು.

'ಮುಂದಿನ ತಲೆಮಾರಿಗೆ ಬೇಕಾದ ಭಿನ್ನ ಆಲೋಚನೆಗಳು ಬರಬೇಕು. ಯುವ ಸಮುದಾಯವನ್ನು ಒಳಗೊಳ್ಳಬೇಕು. ಪರಿಷತ್‌ನ ಕಾರ್ಯಕ್ರಮಗಳು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಬರಬೇಕು' ಎಂದವರು ಉಪನ್ಯಾಸಕಿ ಪ್ರಜ್ಞಾ ಮತ್ತಿಹಳ್ಳಿ.

ಡಾ. ಬಸವರಾಜ ಕಲ್ಗುಡಿ


ಆರ್.ಜಿ.ಹಳ್ಳಿ ನಾಗರಾಜ್

ಪ್ರಜ್ಞಾ ಮತ್ತಿಹಳ್ಳಿ

ಭುವನಾ ಹಿರೇಮಠ

ಇದೇ ಮಾತಿಗೆ ಧ್ವನಿಗೂಡಿಸಿ ಮಾತನಾಡಿದ ಕವಯಿತ್ರಿ ಭುವನಾ ಹಿರೇಮಠ, 'ಪರಿಷತ್‌ನಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಬೇಕು. ಅದಕ್ಕಾಗಿ ಪರಿಷತ್‌ನ ಸಂರಚನೆಯಲ್ಲಿ ಬದಲಾಗಬೇಕು' ಎಂದರು.

ಪರಿಷತ್‌ನ ನಿಲುವುಗಳ ದಾಖಲೆ ಪ್ರಸ್ತುತಪಡಿಸಿ ಮಾತನಾಡಿದ ಕವಿ, ಸಂಘಟಕ ಆರ್.ಜಿ.ಹಳ್ಳಿ ನಾಗರಾಜ್, 'ಸಾಹಿತ್ಯದ ಅಭಿರುಚಿ ಇಲ್ಲದವರು, ರಾಜಕೀಯ ಹಿನ್ನೆಲೆ ಇರುವವರು ಈ ಪರಿಷತ್ ಪದಾಧಿಕಾರಿಗಳಾಗಿ ಬರುತ್ತಿದ್ದಾರೆ. ಅಧ್ಯಕ್ಷರು ತಮಗೆ ಬೇಕಾದಂತೆ ನಿಯಮ ಬದಲಾಯಿಸುತ್ತಿದ್ದಾರೆ. ಇದೆಲ್ಲಾ ನಿಲ್ಲಬೇಕು. ಪರಿಷತ್ ತನ್ನದೇ ಆದ ಮಾದರಿ ಕನ್ನಡ ಶಾಲೆಗಳನ್ನು ತೆರೆಯಬಹುದಿತ್ತು' ಎಂದರು.

ಶಶಿ ಪಟ್ಟಣ್ ಮಾತನಾಡಿ, 'ಸಾಹಿತ್ಯ ಪರಿಷತ್ ಸಭೆಗೂ ವಿಧಾನಸಭಾ ಅಧಿವೇಶನಕ್ಕೂ ವ್ಯತ್ಯಾಸವೇ ಇಲ್ಲವಾಗಿದೆ. ಒಳ್ಳೆಯ ಆಶಯ ಇರುವವರು ಮುಂದಕ್ಕೆ ಬರಬೇಕಾಗಿದೆ' ಎಂದರು.

ಒಟ್ಟಾರೆ ಆಯ್ಕೆ ವ್ಯವಸ್ಥೆ ಬಗ್ಗೆ ಗುದ್ದು ನೀಡಿ ಮಾತನಾಡಿದವರು ಕಥೆಗಾರ ಬೊಳುವಾರು ಮಹಮದ್ ಕುಂಞಿ.

'ಪರಿಷತ್‌ನ ಪ್ರಾಥಮಿಕ ಸದಸ್ಯತ್ವ ಪಡೆಯಬೇಕಾದರೆ ಕನಿಷ್ಠ ಏಳನೇ ತರಗತಿ ಪಾಸಾಗಿರಬೇಕು. ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಪದಾಧಿಕಾರಿ ಆಗಬೇಕಾದರೆ ಕನ್ನಡ ಮಾಧ್ಯಮದಲ್ಲೇ ಓದಿದ್ದು, ಕನಿಷ್ಠ ಪದವಿ ಶಿಕ್ಷಣ ಪಡೆದಿರಬೇಕು. ರಾಜ್ಯಾಧ್ಯಕ್ಷರಾಗಬಯಸುವವರು ಕನ್ನಡ ನಾಡು, ನುಡಿ ಬಗ್ಗೆ ಆಳವಾದ ಜ್ಞಾನ ಹೊಂದಿದ್ದು ಸ್ನಾತಕೋತ್ತರ ಪದವಿ ಪಡೆದಿರಬೇಕು. ರಾಜ್ಯಮಟ್ಟದ ಪದಾಧಿಕಾರಿಗಳ ಆಯ್ಕೆಯನ್ನು ತಾಲ್ಲೂಕು ಮತ್ತು ಜಿಲ್ಲಾ ಘಟಕದ ಅಧ್ಯಕ್ಷರು ಮತ ನೀಡಿ ಆರಿಸಬೇಕು. ತಾಲ್ಲೂಕು ಮಟ್ಟದ ಅಧ್ಯಕ್ಷರ ಮತಕ್ಕೆ ಒಂದು ಅಂಕ, ಜಿಲ್ಲಾ ಮಟ್ಟದ ಅಧ್ಯಕ್ಷರ ಮತಕ್ಕೆ ಎರಡು ಅಂಕ ನಿಗದಿಪಡಿಸಬೇಕು. ಹೀಗಾದಾಗ ರಾಜ್ಯಾಧ್ಯಕ್ಷರ ಆಯ್ಕೆಯಲ್ಲಿ ಕೊಳಕು ರಾಜಕಾರಣವನ್ನು ತಡೆಯಬಹುದು' ಎಂದರು.

ವಿಜ್ಞಾನ ಸಾಹಿತ್ಯ ಬೆಳೆಸಬೇಕು, ಪುಸ್ತಕಗಳ ಮರು ಮುದ್ರಣವಾಗಬೇಕು, ಡಿಜಿಟಲ್ ವ್ಯವಸ್ಥೆ ಬರಬೇಕು, ಮಕ್ಕಳ ಸಾಹಿತ್ಯ ಪ್ರಕಟಣೆಗಳು ಆಗಬೇಕು ಎಂದು ಚರ್ಚೆಯಲ್ಲಿ ಭಾಗವಹಿಸಿದ ಬೈರೇಗೌಡ, ಡಾ.ಸಾತ್ವಿಕ್ ಎನ್. ವಿ., ವೆಂಕೋಬರಾವ್, ಗೀತಾ, ವಿಜಯಕುಮಾರ್ ಸಹಿತ ಹಲವರು ಆಶಿಸಿದರು.

ಪ್ರಜಾವಾಣಿ ಸಹ ಸಂಪಾದಕ ಬಿ.ಎಂ. ಹನೀಫ್, ದಾವಣಗೆರೆ ಬ್ಯೂರೋ ಮುಖ್ಯಸ್ಥ ವಿಶಾಖ ಎನ್. ಹುಬ್ಬಳ್ಳಿ ಬ್ಯೂರೋ ಮುಖ್ಯಸ್ಥರಾದ ರಶ್ಮಿ ಎಸ್. ಸಂವಾದ ನಡೆಸಿಕೊಟ್ಟರು.

'ಒಟ್ಟಿಗೆ' ಜೀವಿಸಲು ಆಗದಿದ್ದರೆ, ಬೇರೆಯಾಗುವುದೇ ಲೇಸು: 'ಸುಪ್ರೀಂ'

6 ದಿನ ದಾಂಪತ್ಯ, 26 ವರ್ಷ ಕೋರ್ಟ್ 'ಸಾಂಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 1995ರಲ್ಲಿ ವಿವಾಹವಾಗಿದ್ದ ಆ ಜೋಡಿಯ 'ದಾಂಪತ್ಯ ಜೀವನದ' ಅವಧಿ 5-6 ದಿನಗಳಷ್ಟೇ. ಮನೆ ಅಳಿಯನಾಗಿರು ಎಂಬುದು ಪತ್ನಿಯ ಪಟ್ಟು. ವಯಸ್ಸಾದ ತಾಯಿ, ನಿರುದ್ಯೋಗಿ ತಮ್ಮನನ್ನು ಬಿಟ್ಟು ಬರುವುದಿಲ್ಲ ಎಂಬುದು ಆತನ ಮಾತು. ವಿಷಯ ಕೋರ್ಟ್ ಮೆಟ್ಟಿಲೇರಿತು. ಈಗ ಪತಿಗೆ 55, ಪತ್ನಿಗೆ 50 ವರ್ಷ.

ಸುಪ್ರೀಂ ಕೋರ್ಟ್‌ನ ಎದುರು ಈ ಪ್ರಕರಣ ವಿಚಾರಣೆಗೆ ಬಂದಾಗ ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಎ.ಎಸ್.ಬೋಪಣ್ಣ ಅವರಿದ್ದ ನ್ಯಾಯಪೀಠವು ದಂಪತಿಗೆ ಸ್ಪಷ್ಟವಾಗಿ ಹೇಳಿದ್ದು: ನಿಮ್ಮಿಬ್ಬರಿಗೂ 'ಒಟ್ಟಿಗೆ' ಜೀವಿಸಲು ಆಗುವುದೇ ಇಲ್ಲ ಎಂದಾದರೆ, 'ಪ್ರತ್ಯೇಕವಾಗಿ' ವಾಸಿಸುವುದೇ ಲೇಸು.

'ನೀವು ಇಡೀ ಬದುಕನ್ನು ಕೋರ್ಟ್‌ನಲ್ಲಿ ಪರಸ್ಪರ ಹೋರಾಟ ನಡೆಸುವ ಮೂಲಕವೇ ಕಳೆಯಲಾಗದು' ಎಂದೂ ತ್ರಿಪುರಾದ ರಾಜಧಾನಿ ಅಗರ್ತಲಾ ನಿವಾಸಿಗಳಾದ ಈ ದಂಪತಿಗೆ ಪೀಠ ತಿಳಿಸಿತು.

ತ್ರಿಪುರಾ ಹೈಕೋರ್ಟ್ ಈ ಹಿಂದೆ ದಂಪತಿಗೆ ವಿಚ್ಛೇದನ ನೀಡಿ ಆದೇಶಿಸಿತ್ತು.


ಸಾಂದರ್ಭಿಕ ಚಿತ್ರ

ಆದರೆ, ಇದನ್ನು ಪ್ರಶ್ನಿಸಿ ಪತ್ನಿ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.

ಈಗ, 'ಪರಸ್ಪರ ಚರ್ಚಿಸಿ ಜೀವನಾಂಶ ಕುರಿತು ತೀರ್ಮಾನಕ್ಕೆ ಬನ್ನಿ' ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್‌ನಲ್ಲಿ ನಡೆಸಲಾಗುವುದು ಎಂದು ತಿಳಿಸಿದೆ.

ಜೀವನಾಂಶ ಕುರಿತ ವಿಷಯವು ಇತ್ಯರ್ಥವಾಗದ ಕಾರಣ ವಿಚ್ಛೇದನಕ್ಕೆ ಆದೇಶ ನೀಡಿದ ಹೈಕೋರ್ಟ್‌ನ ಕ್ರಮವು ಸರಿಯಾದುದಲ್ಲ ಎಂದು ಮಹಿಳೆ ಪರವಾಗಿ ಹಾಜರಿದ್ದ ವಕೀಲರು ಪ್ರತಿಪಾದಿಸಿದರು.

ಪುರುಷನ ಪರವಾಗಿ ಹಾಜರಿದ್ದ ವಕೀಲ ದುಶ್ಯಂತ್ ಪರಾಶರ್, '1995ರಲ್ಲಿ ಮದುವೆಯಾಗಿದ್ದು, ವ್ಯಕ್ತಿಯ ಬದುಕೇ ಹಾಳಾಗಿದೆ. ಕಿರುಕುಳ ಮತ್ತು ಸರಿಪಡಿಸಲಾಗದು ಎಂಬ ಆಧಾರದಲ್ಲಿ ಹೈಕೋರ್ಟ್ ವಿಚ್ಛೇದನ ನೀಡಿತ್ತು. ಕಕ್ಷಿದಾರರಿಗೆ ಪತ್ನಿ ಜೊತೆ ಜೀವಿಸಲು ಇಷ್ಟವಿಲ್ಲ. ಜೀವನಾಂಶ ಕೊಡಲು ಸಿದ್ಧರಿದ್ದಾರೆ' ಎಂದು ತಿಳಿಸಿದರು.

ಸಂವಿಧಾನದ 142 ವಿಧಿ ಅನ್ವಯ ಇರುವ ಅಧಿಕಾರವನ್ನು ಬಳಸಿ ವಿಚ್ಛೇದನಕ್ಕೆ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

'ಪತ್ನಿ ಸುಶಿಕ್ಷಿತ ಕುಟುಂಬಕ್ಕೆ ಸೇರಿದವರು. ಹೆಚ್ಚು ಓದಿಕೊಂಡಿದ್ದಾರೆ. ಆಕೆಯ ತಂದೆ ಸೇವಾಹಿರಿತನ ಆಧಾರದಲ್ಲಿ ಐಎಎಸ್‌ಗೆ ಬಡ್ತಿ ಪಡೆದಿದ್ದ ಅಧಿಕಾರಿ. ವಯಸ್ಸಾದ ತನ್ನ ತಾಯಿ, ನಿರುದ್ಯೋಗಿಯಾಗಿದ್ದ ತಮ್ಮನನ್ನು ಬಿಟ್ಟು ಮನೆ ಅಳಿಯನಾಗಿರು ಎಂದು ಪಟ್ಟುಹಿಡಿದಿದ್ದರು. ಅವರ ಮನವೊಲಿಸುವ ಯತ್ನ ಫಲಕೊಡಲಿಲ್ಲ' ಎಂದು ವಿವರಿಸಿದರು.

ಸೋಮವಾರ, ಅಕ್ಟೋಬರ್ 4, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ

ನವರಾತ್ರಿ ಉತ್ಸವದ ಅಂಗವಾಗಿ ಬಿಹಾರದ ಪಟ್ನಾದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ದಾಂಡಿಯಾ' ನೃತ್ಯ ಸ್ಪರ್ಧೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು

ಸೂಕ್ತ ನಿರ್ವಹಣೆ, ಸೌಲಭ್ಯದ ಕೊರತೆಯಿಂದ ಸೊರಗಿದ ಕೇಂದ್ರಗಳು • ಕಲಾ ವೈಭವ ಅವಸಾನದತ್ತ ಸಾಗುವ ಕಳವಳ

ಕಲಾ ಪ್ರದರ್ಶನಕ್ಕಿಲ್ಲ ಸುಸಜ್ಜಿತ ರಂಗಮಂದಿರ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಇರುವ ಬೆರಳಣಿಕೆಯಷ್ಟು ರಂಗಮಂದಿರಗಳು ಕೋವಿಡ್ ಕಾಣಿಸಿಕೊಂಡ ಬಳಿಕ ಸೂಕ್ತ ನಿರ್ವಹಣೆ ಇಲ್ಲದೆಯೇ ಕಳೆಗುಂದಿವೆ. ಇದರಿಂದಾಗಿ ನಗರದ ಕಲಾ ವೈಭವ ಅವಸಾನದತ್ತ ಸಾಗುವ ಕಳವಳ ರಂಗಭೂಮಿ ವಲಯದಲ್ಲಿ ವ್ಯಕ್ತವಾಗಿದೆ.

ನಗರದ ಜನಪ್ರಿಯತೆ ಹಾಗೂ ಬ್ರ್ಯಾಂಡ್ ಮೌಲ್ಯ ಹೆಚ್ಚಳಕ್ಕೆ ಸಾಂಸ್ಕೃತಿಕ ಕ್ಷೇತ್ರದ ಚಟುವಟಿಕೆಗಳೂ ಸಹಕಾರಿ. ಆದರೆ, ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದಾಗಿನಿಂದ ಕಲಾ ವಲಯವು ಸಂಪೂರ್ಣ ಸ್ತಬ್ಧವಾಗಿದೆ. ಇದರಿಂದಾಗಿ ಹೊಸ ರಂಗಮಂದಿರಗಳ ನಿರ್ಮಾಣ ಯೋಜನೆಗಳು ನನೆಗುದಿಗೆ ಬಿದ್ದರೆ, ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದ ರಂಗಮಂದಿರಗಳು ಮೂಲಸೌಕರ್ಯಕ್ಕಾಗಿ ಎದುರು ನೋಡಲಾರಂಭಿಸಿವೆ.

ಈ ತಿಂಗಳಿಂದ ಶೇ 100ರಷ್ಟು ಆಸನಗಳ ಭರ್ತಿಗೆ ಸರ್ಕಾರ ಅವಕಾಶ ನೀಡಿದರೂ ಸಣ್ಣ ಕಲಾ ತಂಡಗಳು ಬಾಡಿಗೆ ಪಾವತಿಸಿ, ಪ್ರದರ್ಶನ ನೀಡುವ ಸ್ಥಿತಿಯಲ್ಲಿ ಇಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. ಅಗ್ನಿ ಅವಘಡಕ್ಕೆ ಒಳಗಾಗಿದ್ದ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ ಸ್ಥಗಿತವಾಗಿ ಮೂರು ವರ್ಷಗಳಾಗುತ್ತಾ ಬಂದರೂ ಬಾಗಿಲು ತೆರೆದಿಲ್ಲ.

ನಗರದ ಹೃದಯ ಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಆದ್ಯತೆ ನೀಡಲಾಗುತ್ತಿದೆಯಾದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಿ, ಕಾಯಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದವರೆಗೂ ರಂಗಮಂದಿರ ಸಿಗುವ ಖಚಿತತೆ ಇಲ್ಲದಂತಾಗಿದೆ. 2018ರಲ್ಲಿ ರವೀಂದ್ರ ಕಲಾಕ್ಷೇತ್ರಕ್ಕೆ ₹ 2.24 ಕೋಟಿ ವೆಚ್ಚದಲ್ಲಿ ಸಂಸ್ಕೃತಿ ಇಲಾಖೆಯು ಅತ್ಯಾಧುನಿಕ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಅಳವಡಿಕೆ ಮಾಡಿತ್ತು.

ಕೋವಿಡ್ ಪೂರ್ವ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರತಿ ತಿಂಗಳು ಸರಾಸರಿ 30 ಕಾರ್ಯಕ್ರಮಗಳು ನಡೆಯುತ್ತಿದ್ದವು. 2019–20ನೇ ಸಾಲಿನಲ್ಲಿ 385 ಕಾರ್ಯಕ್ರಮಗಳು ನಡೆದಿವೆ. ಕೋವಿಡ್ ನಿರ್ಬಂಧಗಳನ್ನು ತೆಗೆದಿರುವುದರಿಂದ ಈಗ ಪುನಃ ಕಾಯ್ದಿರಿಸುವಿಕೆ ಪ್ರಾರಂಭವಾಗಿದೆ.

ಬಿಬಿಎಂಪಿಯು 2015ರಲ್ಲಿ ಸರ್ ಪುಟ್ಟಣ್ಣಚೆಟ್ಟಿ ಪುರಭವನವನ್ನು ನವೀಕರಣ ಮಾಡಿ, ಧ್ವನಿವರ್ಧಕ, ಹವಾನಿಯಂತ್ರಣ ಸೇರಿದಂತೆ ವಿವಿಧ ವ್ಯವಸ್ಥೆಯನ್ನು ಅಳವಡಿಕೆ ಮಾಡಿತ್ತು. ₹ 8 ಸಾವಿರ ಇದ್ದ ಬಾಡಿಗೆ ದರವನ್ನು ₹ 1.22 ಲಕ್ಷಕ್ಕೆ ಏರಿಕೆ ಮಾಡಿತ್ತು. ಕಲಾವಿದರು, ಸಂಘ–ಸಂಸ್ಥೆಗಳಿಂದ ಆಕ್ಷೇಪ ವ್ಯಕ್ತವಾದ ಬಳಿಕ ₹ 75 ಸಾವಿರಕ್ಕೆ ಇಳಿಕೆ ಮಾಡಿತ್ತು. ಆದರೆ, ಇಷ್ಟು ಮೊತ್ತದ ಬಾಡಿಗೆಯನ್ನು ಹೊಂದಿಸುವುದು ಸಣ್ಣ ಮತ್ತು ಮಧ್ಯಮ ಗಾತ್ರದ ಸಂಘ–ಸಂಸ್ಥೆ, ರಂಗ ತಂಡಗಳಿಗೆ ಸವಾಲಾಗಿದೆ. ಹೀಗಾಗಿ, ವರ್ಷದ ಬಹುತೇಕ ದಿನಗಳು ಪುರಭವನ ಬಾಗಿಲು ಮುಚ್ಚಿಯೇ ಇರುತ್ತದೆ.

ಕೈಗೆಟಕದ ರಂಗಮಂದಿರ: ಸಂಸ್ಕೃತಿ ಇಲಾಖೆ ಹಾಗೂ ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಬಹುತೇಕ ರಂಗ ಮಂದಿರಗಳು ಮೂಲಸೌಕರ್ಯಕ್ಕಾಗಿ ಕಾದು ಕುಳಿತಿವೆ. ಕಿತ್ತುಹೋಗಿರುವ ನೆಲಹಾಸು, ದೋಷಪೂರಿತ ಧ್ವನಿ–ಬೆಳಕಿನ ವ್ಯವಸ್ಥೆ, ನಿರ್ವಹಣೆ ಇಲ್ಲದ ಶೌಚಾಲಯ, ತಂತ್ರಜ್ಞರ ಕೊರತೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿವೆ. ಖಾಸಗಿ ರಂಗಮಂದಿರಗಳಲ್ಲಿ ದುಬಾರಿ ಬಾಡಿಗೆ ನೀಡಿ ಪ್ರದರ್ಶನ ನೀಡಲು ಎಲ್ಲ ತಂಡಗಳಿಗೂ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಮಧ್ಯಮ ಗಾತ್ರದ ರಂಗಮಂದಿರಗಳನ್ನು ಸರ್ಕಾರ ನಿರ್ಮಿಸಬೇಕೆಂಬ ಕೂಗು ರಂಗ ವಲಯದಲ್ಲಿದೆ.

ಕನ್ನಡ ಭವನದಲ್ಲಿರುವ ನಯನ ಸಭಾಂಗಣವು ಕಿರಿದಾಗಿದ್ದು, ನಾಟ್ಯ, ವಿಚಾರಸಂಕಿರಣ, ಸಂಗೀತ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಮಾತ್ರ ಸಹಕಾರಿಯಾಗಿದೆ. ಜೆ.ಸಿ. ರಸ್ತೆಯಲ್ಲಿರುವ ಎಡಿಎ ರಂಗಮಂದಿರ ಅಮೆಚೂರು ಡ್ರಮಾಟಿಕ್ ಅಸೋಸಿಯೇಷನ್ ಕೊಡುಗೆಯಾಗಿದೆ. ಇಲ್ಲಿ ವಾಹನಗಳ ನಿಲುಗಡೆಗೆ ಸ್ಥಳವಿಲ್ಲದಿರುವುದು ಸಮಸ್ಯೆಯಾಗಿದೆ. ಕುವೆಂಪು ಕಲಾಕ್ಷೇತ್ರದಲ್ಲಿ ಗ್ರೀನ್ ರೂಮ್‌ಗಳು ವೇದಿಕೆಯ ನೆಲಮಹಡಿಯಲ್ಲಿವೆ. ಇದು ಕಲಾವಿದರಿಗೆ ಕಿರಿಕಿರಿ ಉಂಟುಮಾಡಲಿದೆ. ಸಮಾಜ ಕಲ್ಯಾಣ ಇಲಾಖೆಯ ಡಾ. ಅಂಬೇಡ್ಕರ್ ಭವನವು ಅತ್ಯಾಧುನಿಕ ಸೌಲಭ್ಯ ಹೊಂದಿದ್ದರೂ ನಿರ್ವಹಣೆ ಕೊರತೆ ಎದುರಿಸುತ್ತಿದೆ.

ಇದೇ ರೀತಿ, ಗಾಂಧಿನಗರದ ಗುಬ್ಬಿ ವೀರಣ್ಣ ರಂಗಮಂದಿರ, ರಾಜಾಜಿನಗರದ ರಾಜ್‌ಕುಮಾರ್ ರಂಗಮಂದಿರ ಸೇರಿದಂತೆ ವಿವಿಧ ರಂಗಮಂದಿರಗಳು ಸೂಕ್ತ ನಿರ್ವಹಣೆ ಇಲ್ಲದೆಯೇ ಕಳೆಗುಂದಿವೆ.

ರಂಗಮಂದಿರಗಳನ್ನು ನಿರ್ಮಿಸುವ ಜೊತೆಗೆ ಅದರ ನಿರ್ವಹಣೆಗೂ ಸಂಸ್ಕೃತಿ ಇಲಾಖೆ ಹಾಗೂ ಪಾಲಿಕೆ ಆದ್ಯತೆ ನೀಡಬೇಕು ಎನ್ನುವುದು ರಂಗಕರ್ಮಿಗಳ ಆಗ್ರಹವಾಗಿದೆ.

‘ಬಿಬಿಎಂಪಿಯು ವಿವಿಧ ಬಡಾವಣೆಗಳಲ್ಲಿ ರಂಗಮಂದಿರಗಳನ್ನು ನಿರ್ಮಿಸಿದೆ. ಆದರೆ, ಅವುಗಳು ಪಾಲಿಕೆ ಸದಸ್ಯರ ನಿಯಂತ್ರಣದಲ್ಲಿವೆ. ಹೀಗಾಗಿ, ಸದುಪಯೋಗ ಆಗುತ್ತಿಲ್ಲ. ರಂಗಮಂದಿರಗಳ ನಿರ್ವಹಣೆಗೆ ಹಣವನ್ನು ವೆಚ್ಚ ಮಾಡಲಾಗುತ್ತಿದೆಯಾದರೂ ಸಮಸ್ಯೆಗಳು ಮಾತ್ರ ನಿವಾರಣೆಯಾಗುತ್ತಿಲ್ಲ’ ಎಂದು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಬೇಸರ ವ್ಯಕ್ತಪಡಿಸಿದರು.

ಇದೆಲ್ಲದರ ಮಧ್ಯೆ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಮುಂದಿನ ದಿನಗಳಲ್ಲಿ ಕಲಾ ಚಟುವಟಿಕೆಗಳು ಮತ್ತೆ ಗರಿಗೆದರಬಹುದೆಂಬ ಆಶಾವಾದದಲ್ಲಿಯೇ ಸಾವಿರಾರು ಕಲಾವಿದರು ದಿನಗಳನ್ನು ಕಳೆಯುತ್ತಿದ್ದಾರೆ.

ಕಾರ್ಯಕ್ರಮಗಳಿಲ್ಲದೆಯೇ ಬಾಗಿಲು ಮುಚ್ಚಿರುವ ಸರ್ ಪುಟ್ಟಣ್ಣಚೆಟ್ಟಿ ಪುರಭವನ

ನಾಲ್ಕು ರಂಗಮಂದಿರ: ಸ್ಥಳ ಮಾತ್ರ ಗುರುತು

ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೇ ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಿಸುವುದಾಗಿ 2020ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು. ಇದಕ್ಕಾಗಿ ಬಜೆಟ್‌ನಲ್ಲಿ ₹ 60 ಕೋಟಿ ಮೀಸಲಿಡಲಾಗಿತ್ತು. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಎರಡೂವರೆ ಎಕರೆ, ದೇವನಹಳ್ಳಿಯ ಕಸಬಾ ಹೋಬಳಿ, ಕನ್ನಹಳ್ಳಿ ಬಳಿ ಐದು ಎಕರೆ, ಕೆಐಎಡಿಬಿ, ಕೆಎಚ್‌ಬಿಯಲ್ಲಿ ಸಾರ್ವಜನಿಕರಿಗೆ ಮೀಸಲಿಟ್ಟ ಸಿಎ ನಿವೇಶನವನ್ನು ರಂಗಮಂದಿರ ನಿರ್ಮಾಣಕ್ಕೆ ಗುರುತಿಸಿ ವರ್ಷವೇ ಕಳೆದಿದೆ. ಆದರೆ, ಈವರೆಗೂ ಇಲಾಖೆಗೆ ಜಾಗವೇ ಹಸ್ತಾಂತರವಾಗಿಲ್ಲ.

ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ ಸ್ಥಗಿತಗೊಂಡಿರುವುದು – ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ.ಟಿ.

ನನೆಗುದಿಗೆ ಬಿದ್ದ ‘ರಂಗ ಮಂದಿರ ಪ್ರಾಧಿಕಾರ’

ರಂಗಮಂದಿರಗಳ ಕೊರತೆ ಹಾಗೂ ರಂಗಭೂಮಿಯ ಸಮಸ್ಯೆಗಳನ್ನು ನೀಗಿಸಲು ಕರ್ನಾಟಕ ನಾಟಕ ಅಕಾಡೆಮಿಯು ‘ರಂಗ ಮಂದಿರ ಪ್ರಾಧಿಕಾರ’ ರಚಿಸುವ ಪ್ರಸ್ತಾವನೆಯನ್ನು ಈ ಹಿಂದೆ ಸಿದ್ಧಪಡಿಸಿತ್ತು. ನಾಡಿನ ರಂಗಕರ್ಮಿಗಳು ಹಾಗೂ ಸಾಂಸ್ಕೃತಿಕ ವಲಯದ ತಜ್ಞರ ಸಲಹೆಗಳನ್ನು ಪಡೆದಿದ್ದ ಅಕಾಡೆಮಿ, ಪ್ರಾಧಿಕಾರ ರಚನೆಗೆ ಸಂಬಂಧಿಸಿದ ರೂಪುರೇಷೆಗಳನ್ನೂ ಸಿದ್ಧಪಡಿಸಿತ್ತು. ರಂಗ ಮಂದಿರದ ನೀಲ ನಕ್ಷೆಯನ್ನೂ ರಚಿಸಿ, 300 ಆಸನಗಳ ಪ್ರತಿ ರಂಗ ಮಂದಿರಕ್ಕೆ ₹ 1.6 ಕೋಟಿ ವೆಚ್ಚವಾಗಲಿದೆ ಎಂದೂ ಅಂದಾಜಿಸಲಾಗಿತ್ತು. ಆದರೆ, ಈ ಪ್ರಸ್ತಾವನೆ ನನೆಗುದಿಗೆ ಬಿದ್ದಿದೆ.

ಪುನರಾರಂಭವಾಗದ ಸಾಂಸ್ಕೃತಿಕ ಸಮುಚ್ಚಯ

ಅಗ್ನಿ ಅವಘಡದಿಂದ ಹಾನಿಗೊಳಗಾಗಿದ್ದ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯ ಮೂರು ವರ್ಷಗಳಾಗುತ್ತಾ ಬಂದರೂ ಪುನರಾರಂಭವಾಗಿಲ್ಲ. ಇದರಿಂದಾಗಿ ಕಲಾಗ್ರಾಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಸಂಪೂರ್ಣ ಸ್ತಬ್ಧವಾಗಿವೆ. ನಗರದಲ್ಲಿನ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಹಾಗೂ ರಂಗ ತಂಡಗಳಿಗೆ ಸಾಂಸ್ಕೃತಿಕ ಸಮುಚ್ಚಯ ಸುಲಭವಾಗಿ ದೊರೆಯುತ್ತಿತ್ತು. ತಿಂಗಳ ಬಹುತೇಕ ದಿನ ಒಂದಲ್ಲ ಒಂದು ಕಲಾ ಚಟುವಟಿಕೆ ನಡೆಯುತ್ತಿದ್ದವು.

2018ರ ಡಿಸೆಂಬರ್ ತಿಂಗಳಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡ ಪರಿಣಾಮ ಧ್ವನಿ–ಬೆಳಕಿನ ವ್ಯವಸ್ಥೆ ಸಂಪೂರ್ಣ ಸುಟ್ಟು ಕರಕಲಾಗಿತ್ತು. ಎಲೆಕ್ಟ್ರಿಕ್ ಪ್ಯಾನಲ್, ಲೈಟಿಂಗ್ ಮಿಕ್ಸರ್, ಸೌಂಡ್ ಮಿಕ್ಸರ್, ಡಿಮ್ಮರ್ ಪ್ಯಾಕ್, ಮೈಕ್ ಸೇರಿದಂತೆ ವಿವಿಧ ಉಪಕರಣಗಳಿಗೆ ಹಾನಿಯಾಗಿತ್ತು.

ನಯನ ಸಭಾಂಗಣವನ್ನು ಸಿಬ್ಬಂದಿ ಸ್ವಚ್ಛಗೊಳಿಸುತ್ತಿರುವುದು

ಪ್ರಮುಖ ದೊಡ್ಡ ರಂಗಮಂದಿರಗಳು

ರಂಗಮಂದಿರ	ಆಸನಗಳು
ಡಾ. ಅಂಬೇಡ್ಕರ್ ಭವನ	1,345
ಚೌಡಯ್ಯ ಸ್ಮಾರಕ ಭವನ	1,101
ಸೇಂಟ್ ಜಾನ್ ಆಡಿಟೋರಿಯಂ	1,068
ಕುವೆಂಪು ಕಲಾಕ್ಷೇತ್ರ	850
ರವೀಂದ್ರ ಕಲಾಕ್ಷೇತ್ರ	830
ಪುರಭವನ	810
ಎಚ್.ಎನ್. ಕಲಾಕ್ಷೇತ್ರ	750
ಬಯಲು ರಂಗಮಂದಿರ	741
ಗುರುನಾನಕ್ ಭವನ	704
ಎಡಿಎ ರಂಗಮಂದಿರ	525
ಜೆ.ಎಸ್.ಎಸ್. ರಂಗಮಂದಿರ	500

ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಾಗಗಳನ್ನು ಗುರುತಿಸಲಾಗಿದೆ. ಜಾಗ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಲ್ಲಿ ಆದಷ್ಟು ಬೇಗ ನಿರ್ಮಿಸಲಾಗುತ್ತದೆ

ಎಸ್. ರಂಗಪ್ಪ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ


ಕಲಾಕ್ಷೇತ್ರವನ್ನು ನಾಟಕ ಸೇರಿದಂತೆ ವಿವಿಧ ಕಲೆಗಳ ಪ್ರದರ್ಶನಕ್ಕೆ ಮೀಸಲಿಡಬೇಕು. ಪುರಭವನದಲ್ಲಿ ಸರ್ಕಾರಿ ಕಾರ್ಯಕ್ರಮಗಳು ನಡೆಯಲಿ. ತುರ್ತಾಗಿ ಇನ್ನಷ್ಟು ರಂಗಮಂದಿರ ಅಗತ್ಯ

ಶ್ರೀನಿವಾಸ ಜಿ. ಕಪ್ಪಣ್ಣ, ರಂಗಕರ್ಮಿ


300-350 ಆಸನಗಳ ರಂಗಮಂದಿರಗಳು ನಗರಕ್ಕೆ ಅಗತ್ಯವಿದೆ. ಸರ್ಕಾರವು ಕಲಾ ಚಟುವಟಿಕೆಗೆ ಆದ್ಯತೆ ನೀಡಿ, ಎಲ್ಲ ಬಡಾವಣೆಗಳಲ್ಲೂ ಒಂದೊಂದು ರಂಗಮಂದಿರ ನಿರ್ಮಿಸಬೇಕು

ಜಿ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ

ನಿಸರ್ಗ ಬಡಾವಣೆಯ ಪ್ರಬುದ್ಧಾಲಯದಲ್ಲಿ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ನಿರ್ಮಾಣ್ ಸಮೂಹ ಸಂಸ್ಥೆಗಳ ಸ್ಥಾಪಕ ವಿ. ಲಕ್ಷ್ಮೀನಾರಾಯಣ್, ನಿರ್ದೇಶಕಿ ಸುಷ್ಮಾ ಮೂರ್ತಿ ಹಾಗೂ ಪ್ರಬುದ್ಧಾಲಯದ ಹಿರಿಯ ನಿವಾಸಿಗಳು ಪಾಲ್ಗೊಂಡಿದ್ದರು

‘ಹಿರಿಯರ ನಿರ್ಲಕ್ಷ್ಯ ಸಲ್ಲದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ಯುವ ಪೀಳಿಗೆ ಹಿರಿಯರ ಬಗ್ಗೆ ನಿರ್ಲಕ್ಷ್ಯ ಮನೋಭಾವ ಬೆಳೆಸಿಕೊಳ್ಳುತ್ತಿರುವುದು ಅತ್ಯಂತ ಕಳವಳಕಾರಿ’ ಎಂದು ನಿರ್ಮಾಣ್ ಸಮೂಹ ಸಂಸ್ಥೆಗಳ ಸ್ಥಾಪಕ ವಿ.ಲಕ್ಷ್ಮೀನಾರಾಯಣ್ ಅಭಿಪ್ರಾಯಪಟ್ಟರು.

ನವನಿರ್ಮಾಣ್ ವಿಎಲ್‌ಎನ್ ಪ್ರಬುದ್ಧಾಲಯ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಹಿರಿಯರ ಅನುಭವ ಮತ್ತು ಮಾರ್ಗದರ್ಶನ ಪಡೆಯದಿದ್ದಲ್ಲಿ, ಉತ್ತಮ ಸಮಾಜ ನಿರ್ಮಾಣವು ಕನಸಾಗಿ ಉಳಿಯಲಿದೆ. ಹಾಗಾಗಿ ಆರೋಗ್ಯವಂತ ಸಮಾಜಕ್ಕೆ ಹಿರಿಯರ ಮಾರ್ಗದರ್ಶನ ಅತ್ಯಗತ್ಯ’ ಎಂದು ಹೇಳಿದರು.

‘ಉತ್ತಮ ಶಿಕ್ಷಣದ ಜತೆಗೆ ಮಕ್ಕಳಿಗೆ ಉತ್ತಮ ಸಂಸ್ಕಾರ-ಸಂಸ್ಕೃತಿಗಳನ್ನು ಬಾಲ್ಯದಿಂದಲೇ ನೀಡಬೇಕು. ಇದರಿಂದ, ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಹಿರಿಯರ ಬಗ್ಗೆ ಕಾಳಜಿವಹಿಸಲು ಸಾಧ್ಯ’ ಎಂದು ಹೇಳಿದರು.

ದಸರಾ, ತೀರ್ಥೋದ್ಭವ ಕೊಡಗಿನ ಪ್ರವಾಸಿ ತಾಣಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕಾವೇರಿ ತೀರ್ಥೋದ್ಭವ ಹಾಗೂ ಮಡಿಕೇರಿ ದಸರಾ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ನಿರೀಕ್ಷೆಯಿದ್ದು, ಕೊಡಗು ಜಿಲ್ಲೆಯ ಹಲವು ಪ್ರವಾಸಿ ತಾಣಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಅ.7ರಿಂದ 17ರ ಸಂಜೆ 6 ಗಂಟೆವರೆಗೆ ಮಡಿಕೇರಿ ತಾಲ್ಲೂಕು ವ್ಯಾಪ್ತಿಯ ರಾಜಾಸೀಟ್, ಅಬ್ಬಿ ಜಲಪಾತ, ರಾಜರ ಗದ್ದುಗೆ, ಕೋಟೆ, ನೆಹರೂ ಮಂಟಪ ಹಾಗೂ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಪ್ರವೇಶ ಇರುವುದಿಲ್ಲ.

ಉಳಿದ ಪ್ರವಾಸಿ ತಾಣಗಳಲ್ಲಿ ಅಂತರ ಕಾಯ್ದುಕೊಂಡು ಭೇಟಿ ನೀಡಲು ಜಿಲ್ಲಾಡಳಿತ ಅವಕಾಶ ನೀಡಿದೆ.

‘ಪ್ರವಾಸಿ ತಾಣಗಳಲ್ಲಿ ಜನದಟ್ಟಣೆ ಆಗದಂತೆ ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದ್ದಾರೆ.

‘ಸಿದ್ದರಾಮಯ್ಯಗೆ ಇಣುಕಿ ನೋಡುವ ಚಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಜನತಾದಳದ ಅಡುಗೆ ಮನೆ, ಇನ್ನೊಬ್ಬರು ಮಲಗುವ ಕೋಣೆ ಇಣುಕಿ ನೋಡುವ ಚಟ ಅಂಟಿಕೊಂಡಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಟೀಕಿಸಿದರು.

ಸಿ.ಟಿ.ರವಿ

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಪಕ್ಷದ ಪ್ರಮುಖರ ಸಮಿತಿ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡುವಾಗ ‘ಬಿಜೆಪಿ– ಜೆಡಿಎಸ್ ಒಳ ಒಪ್ಪಂದ ಮಾಡಿಕೊಂಡಿವೆ’ ಎಂಬ ಸಿದ್ದರಾಮಯ್ಯ ಆರೋಪಕ್ಕೆ ಅವರು ಹೀಗೆ ಪ್ರತಿಕ್ರಿಯಿಸಿದರು.

‘ಇನ್ನೊಬ್ಬರ ಮನೆಯೊಳಗೆ ಇಣುಕಿ ನೋಡುವ ಕೆಟ್ಟ ಚಟ ಸಿದ್ದರಾಮಯ್ಯ ಅವರಿಗೆ ಏಕೆ ಬಂತೋ ಗೊತ್ತಿಲ್ಲ. ಆದರೆ, ಅದು ಒಳ್ಳೆಯ ಲಕ್ಷಣವಲ್ಲ’ ಎಂದರು.

ಒಳ ಒಪ್ಪಂದದ ಕಾರಣದಿಂದ ಜೆಡಿಎಸ್ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ರವಿ, ‘ಯಾವ ಪಕ್ಷದವರು ಯಾರಿಗೆ ಟಿಕೆಟ್ ನೀಡಬೇಕು ಎಂಬುದನ್ನು ನಾನು ಹೇಳಲು ಸಾಧ್ಯವೆ? ಕಾಂಗ್ರೆಸ್‌ನವರು ಯಾವತ್ತಾದರೂ ಆರೆಸ್ಸೆಸ್‌ನವರಿಗೆ ಟಿಕೆಟ್ ಕೊಟ್ಟಿದ್ದಾರಾ? ಅವರಿಗೆ ರಾಷ್ಟ್ರೀಯ ಹಿತ ಇಲ್ಲ ಎಂದು ನಾನು ಹೇಳಲು ಸಾಧ್ಯವೆ’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ಒಳ ಒಪ್ಪಂದ ಮಾಡಿಕೊಂಡರೂ ಚುನಾವಣೆಯಲ್ಲಿ ಸೋಲುತ್ತಾರೆ. ಕಳೆದ ಲೋಕಸಭಾ ಚುನಾವಣೆಯಲ್ಲೇ ಅದು ಸಾಬೀತಾಗಿದೆ. ಬಿಜೆಪಿ ಅಭ್ಯರ್ಥಿಗಳು ಕಾಂಗ್ರೆಸ್, ಜೆಡಿಎಸ್ ನಾಯಕರ ಭಾವಚಿತ್ರ ತೋರಿಸಿ ಮತ ಕೇಳುವುದಿಲ್ಲ. ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ನಳಿನ್ ಕುಮಾರ್ ಕಟೀಲ್ ಭಾವಚಿತ್ರ ತೋರಿಸಿ ಮತ ಕೇಳುತ್ತಾರೆ’ ಎಂದು ಅವರು ಹೇಳಿದರು.

‘ಮುಂಬರುವ ವಿಧಾನ ಪರಿಷತ್ ಚುನಾವಣೆ ತಯಾರಿ, ಪಕ್ಷ ಸಂಘಟನೆ, ಚಿಂತನ ಶಿಬಿರ ನಡೆಸುವ ಕುರಿತು ಪ್ರಮುಖರ ಸಮಿತಿ ಸಭೆಯಲ್ಲಿ ಚರ್ಚೆ ನಡೆದಿದೆ. ದೀಪಾವಳಿ ಹಬ್ಬದ ಬಳಿಕ ಚಿಂತನ ಶಿಬಿರ ನಡೆಸಲಾಗುವುದು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಹಾಗೂ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಮುನ್ನ ಪಕ್ಷದ ಪ್ರಮುಖ ನಾಯಕರ ಪ್ರವಾಸ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.

ನಾಯಂಡಹಳ್ಳಿ ಬಳಿ ಇರುವ ಪ್ರಮೋದ ಲೇಔಟ್‌ನ ವಸತಿ ಸಮುಚ್ಚಯವೊಂದರ ನೆಲಮಹಡಿಗೆ ನೀರು ನುಗ್ಗಿರುವುದು – ಪ್ರಜಾವಾಣಿ ಚಿತ್ರ (ಎಡ ಚಿತ್ರ) ಮಲ್ಲೇಶ್ವರದ 8ನೇ ಮುಖ್ಯರಸ್ತೆಯಲ್ಲಿ ಮರ ಧರೆಗೆ ಉರುಳಿರುವುದು

ರಾತ್ರಿ ಬಿರುಸು ಪಡೆದುಕೊಂಡ ವರ್ಷಧಾರೆ; ಜನಜೀವನ ಅಸ್ತವ್ಯಸ್ತ

ಧಾರಾಕಾರ ಮಳೆ; ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದೆಲ್ಲೆಡೆ ಭಾನುವಾರ ಗುಡುಗು, ಸಿಡಿಲು ಹಾಗೂ ಗಾಳಿ ಸಹಿತ ಧಾರಾಕಾರ ಮಳೆಯಾಗಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಮನೆಗಳಿಗೆ ನೀರು ನುಗ್ಗಿದ್ದರಿಂದ ತಗ್ಗು ಪ್ರದೇಶದ ನಿವಾಸಿಗಳು ರಾತ್ರಿಯಿಡೀ ಪಡಿಪಾಟಲು ಎದುರಿಸುವಂತಾಯಿತು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಬಿಸಿಲಿನ ವಾತಾವರಣವಿತ್ತು. ಧಗೆಯಿಂದ ಜನ ಬಳಲಿದ್ದರು. ಬಳಿಕ ಆಗೊಮ್ಮೆ ಈಗೊಮ್ಮೆ ಸಣ್ಣ ಪ್ರಮಾಣದಲ್ಲಿ ಮಳೆ ಸುರಿಯಿತು. ರಾತ್ರಿ 7 ಗಂಟೆಯ ಸುಮಾರಿಗೆ ಮಳೆ ಬಿರುಸು ಪಡೆದುಕೊಂಡಿತು.ಕೆಲವೆಡೆ ತಡರಾತ್ರಿವರೆಗೂ ವರುಣನ ಅಬ್ಬರ ಮುಂದುವರಿಯಿತು.

ಮನೆಗಳಿಗೆ ನುಗ್ಗಿದ ನೀರು: ಮೈಸೂರು ರಸ್ತೆ ಬ್ಯಾಟರಾಯನಪುರ ಸಮೀಪವಿರುವ ಗಣಪತಿ ನಗರದ ಎರಡನೇ ಅಡ್ಡ ರಸ್ತೆಯಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿತ್ತು. ಮಹಿಳೆಯರು ಹಾಗೂ ಮಕ್ಕಳು ಪ್ಲಾಸ್ಟಿಕ್ ಮಗ್ಗು ಹಾಗೂ ಬಕೆಟ್‌ಗಳಲ್ಲಿ ನೀರು ತುಂಬಿ ಹೊರ ಹಾಕುತ್ತಿದ್ದ ದೃಶ್ಯ ಕಂಡುಬಂತು. ಪ್ರಮೋದ ಲೇಔಟ್‌ನ ವಸತಿ ಸಮುಚ್ಚಯವೊಂದರ ನೆಲ ಮಹಡಿಗೆ ನೀರು ನುಗ್ಗಿತ್ತು. ಕೆಲವೆಡೆ ಚರಂಡಿಯ ತ್ಯಾಜ್ಯ ನೀರು ಮನೆಗೆ ನುಗ್ಗಿತ್ತು. ನೀರಿನಲ್ಲಿ ವಾಹನಗಳೂ ಸಿಲುಕಿಕೊಂಡಿದ್ದವು.

ಮರ ಬಿದ್ದು ಸಂಚಾರ ಅಸ್ತವ್ಯಸ್ತ: ಮಲ್ಲೇಶ್ವರದ ಚಿತ್ತಾಪುರ ಮಠದ ಬಳಿ ಭಾರಿ ಗಾತ್ರದ ಮರವೊಂದು ಧರೆಗೆ ಉರುಳಿತ್ತು. ಇದರಿಂದಾಗಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಮಲ್ಲೇಶ್ವರ ಸಂಚಾರ ಠಾಣೆ ಪೊಲೀಸರು ಹಾಗೂ ಬಿಬಿಎಂಪಿಯ ತಂಡ ಸ್ಥಳಕ್ಕೆ ಧಾವಿಸಿ ಮರ ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿತು.

ಸಂಜೆ ವೇಳೆ ದಿಢೀರ್ ಸುರಿದ ಮಳೆಯಿಂದಾಗಿ ರಕ್ಷಣೆ ಪಡೆಯಲು ಬೈಕ್ ಸವಾರರು ಬಸ್ ತಂಗುದಾಣ, ಅಂಡರ್‌ಪಾಸ್‌ಗಳ ಬದಿಯಲ್ಲಿ ನಿಂತಿದ್ದ ದೃಶ್ಯ ಕಂಡುಬಂದವು. ಕಚೇರಿಯಿಂದ ಮನೆಗೆ ಹೊರಟಿದ್ದ ಕೆಲವರೂ ಮಳೆಗೆ ಸಿಲುಕಿದರು.

ಶ್ರೀನಿವಾಸನಗರ, ಗಿರಿನಗರ, ಮಲ್ಲೇಶ್ವರ, ಶ್ರೀನಗರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ವಿಜಯನಗರ, ಯಶವಂತಪುರ, ಆರ್.ಟಿ.ನಗರ, ಹೊಸಕೆರೆಹಳ್ಳಿ, ಸಂಜಯನಗರ, ಇಂದಿರಾನಗರ, ಪೀಣ್ಯ, ಹೆಬ್ಬಾಳ, ಕೋರಮಂಗಲ, ಜೆ.ಪಿ.ನಗರ, ಎಂ.ಜಿ. ರಸ್ತೆ, ಎಚ್‌ಎಎಲ್, ಹೆಣ್ಣೂರು, ಎಚ್‌ಎಸ್‌ಆರ್ ಬಡಾವಣೆ, ಪುಟ್ಟೇನಹಳ್ಳಿ, ಕೆಂಗೇರಿ ಹಾಗೂ ಸುತ್ತಲಿನ ಸ್ಥಳಗಳಲ್ಲಿ ಮಳೆಯ ಅಬ್ಬರವಿತ್ತು. ರಾಜರಾಜೇಶ್ವರಿ ನಗರ, ಜಯನಗರ, ಸದಾಶಿವನಗರ, ಶಾಂತಿನಗರ, ಹಲಸೂರು ರಸ್ತೆಗಳಲ್ಲಿ ಮಳೆ ನೀರು ಹೊಳೆಯಂತೆ ಹರಿಯಿತು. ಪಾದಚಾರಿಗಳು ರಸ್ತೆ ದಾಟಲು ಹರಸಾಹಸ ಪಡುತ್ತಿದ್ದ ದೃಶ್ಯವೂ ಅಲ್ಲಲ್ಲಿ ಕಂಡುಬಂತು.

ವಾಹನ ದಟ್ಟಣೆ: ಜೋರು ಮಳೆಯಿಂದಾಗಿ ಎಂ.ಜಿ.ರಸ್ತೆ, ಮೆಜೆಸ್ಟಿಕ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಕೆಲವೆಡೆ ವಿದ್ಯುತ್ ಕೈ ಕೊಟ್ಟಿದ್ದರಿಂದ ಜನ ಕತ್ತಲೆಯಲ್ಲಿ ಕಾಲ ಕಳೆಯುವಂತಾಯಿತು.

ಮಳೆಯಲ್ಲಿ ಕೆಟ್ಟು ನಿಂತ ಆಟೊವೊಂದನ್ನು ತಳ್ಳಿಕೊಂಡು ಹೋಗುತ್ತಿದ್ದ ಚಾಲಕ –ಪ್ರಜಾವಾಣಿ ಚಿತ್ರ

ಬ್ಯಾಟರಾಯನಪುರದಲ್ಲಿ ಮನೆಗೆ ನುಗ್ಗಿದ್ದ ನೀರು ಹೊರಹಾಕಲು ನಿವಾಸಿಗಳು ಮುಂದಾಗಿರುವುದು

ಸೋಮವಾರ, ಅಕ್ಟೋಬರ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 276 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಭವಿಷ್ಯದ ಉದ್ಯೋಗಗಳಿಗೆ ಹೊಸ ಬಗೆಯ ಕೌಶಲಗಳು ಅಗತ್ಯ. ಇದಕ್ಕೆ ಪೂರಕವಾಗಿ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಿದರೆ ಅನುಕೂಲ.

ಆಳ-ಅಗಲ
ಮೊಗೆದಷ್ಟೂ ಮುಗಿಯದ ಡ್ರಗ್ಸ್ ಲೋಕ
ಮೂಡಿಗೆರೆ ಶಾಸಕರ ಕಾರು ಡಿಕ್ಕಿ: ಮಹಿಳೆ ಸಾವು 4
ವೇಗ ಕಡಿವಾಣಕ್ಕೆ ವಿಶೇಷ ಸಾಧನ 9
ಬಂಟ್ವಾಳ: ಸಿಡಿಲು ಸಹಿತ ಗಾಳಿ, ಮಳೆಗೆ ಅಪಾರ ನಷ್ಟ
86 ಮನೆ, ಅಡಿಕೆ, ರಬ್ಬರ್ ಗಿಡಕ್ಕೆ ಹಾನಿ 4

ಪ್ರತಿಭಟನೆನಿರತರ ಮೇಲೆ ಹರಿದ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವರ ಬೆಂಗಾವಲು ವಾಹನ

ರೈತರ ಮೇಲೆ ಹರಿದ ವಾಹನ: 8 ಬಲಿ

ಲಖನೌ (ಪಿಟಿಐ): ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರ ಭೇಟಿಯ ವಿರುದ್ಧ ರೈತರು ನಡೆಸುತ್ತಿದ್ದ ಪ್ರತಿಭಟನೆ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಬೆಂಗಾವಲು ಪಡೆಯ ಎರಡು ಎಸ್‌ಯುವಿಗಳು ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಹರಿಯಿತು. ಇದರಿಂದ ನಾಲ್ವರು ರೈತರು ಬಲಿಯಾದರು. ಆಕ್ರೋಶಗೊಂಡ ರೈತರು ಎರಡೂ ಎಸ್‌ಯುವಿಗಳನ್ನು ತಡೆದು ನಿಲ್ಲಿಸಿ, ಅವುಗಳಿಗೆ ಬೆಂಕಿ ಹಚ್ಚಿದರು. ಈ ಎಸ್‌ಯುವಿಗಳಲ್ಲಿ ಇದ್ದವರಲ್ಲಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಲಖಿಂಪುರ್-ಖೇರಿ ಜಿಲ್ಲಾಧಿಕಾರಿ ಅರವಿಂದ ಕುಮಾರ್ ಚೌರಾಸಿಯಾ ತಿಳಿಸಿದ್ದಾರೆ.

ಮೌರ್ಯ ಅವರು ಬಂಬಿರ್‌ಪುರ ಗ್ರಾಮಕ್ಕೆ ಭೇಟಿ ಕೊಡುವ ಕಾರ್ಯಕ್ರಮ ಇತ್ತು. ಇದು ಸಚಿವ ಅಜಯ್ ಮಿಶ್ರಾ ಅವರ ಊರು. ಮೌರ್ಯ ಅವರ ಭೇಟಿಯನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದರು.

ಅಜಯ್ ಮಿಶ್ರಾ ಅವರ ಮಗನೇ ಒಂದು ಎಸ್‌ಯುವಿ ಚಾಲನೆ ಮಾಡಿದ್ದರು ಎಂದು ರೈತರು ಆರೋಪಿಸಿದ್ದಾರೆ. ಆದರೆ ಅಜಯ್ ಮಿಶ್ರಾ ಅವರು ಈ ಆರೋಪವನ್ನು ಅಲ್ಲಗಳೆದಿದ್ದಾರೆ.

ಬಿಜೆಪಿಯ ಮೂವರು ಕಾರ್ಯಕರ್ತರು ಮತ್ತು ಎಸ್‌ಯುವಿಯ ಚಾಲಕನನ್ನು ಪ್ರತಿಭಟನೆ ನಡೆಯುತ್ತಿದ್ದ ಸ್ಥಳದಲ್ಲಿದ್ದ ಜನರು ಹೊಡೆದು ಕೊಂದಿದ್ದಾರೆ ಎಂದು ಮಿಶ್ರಾ ಅವರು ಹೇಳಿದ್ದಾರೆ.

6ನೇ ಪುಟ ನೋಡಿ

ಆಕ್ರೋಶಗೊಂಡ ರೈತರು ಎಸ್‌ಯುವಿಗೆ ಬೆಂಕಿ ಹಚ್ಚಿದರು –ಪಿಟಿಐ ಚಿತ್ರ

ರೈತರಿಗೆ ಬೆದರಿಕೆ

ತಾವು ಭಾಗವಹಿಸಿದ ಕಾರ್ಯಕ್ರಮಗಳಲ್ಲಿ ಕಪ್ಪು ಬಾವುಟ ಪ್ರದರ್ಶಿಸಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸಚಿವ ಅಜಯ್ ಮಿಶ್ರಾ ಅವರು ರೈತರಿಗೆ ಇತ್ತೀಚೆಗೆ ಎಚ್ಚರಿಕೆ ಕೊಟ್ಟಿದ್ದರು. ಇದರಿಂದಾಗಿ ಮಿಶ್ರಾ ಅವರ ಮೇಲೆ ರೈತರಿಗೆ ಭಾರಿ ಆಕ್ರೋಶ ಉಂಟಾಗಿತ್ತು. ಲಖಿಂಪುರ್-ಖೇರಿಯು ಮಿಶ್ರಾ ಅವರ ತವರು ಜಿಲ್ಲೆ.

ರೈತರ ರಕ್ತಕ್ಕೆ ಕಾತರಿಸುವ ಕೇಂದ್ರ: ಕಾಂಗ್ರೆಸ್

ರೈತರ ಮೇಲೆ ಸಚಿವರ ಬೆಂಗಾವಲು ಪಡೆಯ ವಾಹನ ಹರಿದಿರುವುದನ್ನು ಕಾಂಗ್ರೆಸ್ ಖಂಡಿಸಿದೆ. ಈ ಅಪಘಾತದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ. 'ಈ ರೀತಿಯ ಅಮಾನವೀಯ ಮಾರಣ ಹೋಮವನ್ನು ಕಂಡ ಬಳಿಕವೂ ಮೌನವಾಗಿ ಇರುವವರು ಈಗಾಗಲೇ ಸತ್ತಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಆದರೆ, ಈ ತ್ಯಾಗವು ವ್ಯರ್ಥವಾಗಲು ಬಿಡುವುದಿಲ್ಲ– ರೈತರ ಸತ್ಯಾಗ್ರಹವು ಚಿರಾಯುವಾಗಲಿ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ. ಪತ್ರಿಕಾ ವರದಿಯ ಚಿತ್ರಗಳು ಮತ್ತು ವಾಹನಗಳು ಉರಿಯುತ್ತಿರುವ ಚಿತ್ರಗಳನ್ನು ಟ್ವೀಟ್‌ಗೆ ರಾಹುಲ್ ಲಗತ್ತಿಸಿದ್ದಾರೆ.

'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರೈತರ ರಕ್ತಕ್ಕಾಗಿ ಕಾತರಿಸುತ್ತಿದೆ. ಕರ್ನಾಲ್‌ನಿಂದ ಲಖಿಂಪುರ್-ಖೇರಿವರೆಗೆ ಭೀತಿಯ ವಾತಾವರಣ ಸೃಷ್ಟಿಸಲಾಗಿದೆ' ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಭಾನುವಾರ ಹೆಚ್ಚಿಸಿವೆ. ಪೆಟ್ರೋಲ್ ಬೆಲೆ ಲೀಟರ್‌ಗೆ 25 ಪೈಸೆ ಹಾಗೂ ಡೀಸೆಲ್ ಬೆಲೆ 30 ಪೈಸೆ ಹೆಚ್ಚಳವಾಗಿದೆ.

ಇದರಿಂದಾಗಿ ತೈಲ ಬೆಲೆ ದಾಖಲೆಯ ಮಟ್ಟವನ್ನು ತಲುಪಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ₹ 102.39, ಡೀಸೆಲ್ ಬೆಲೆ ₹ 90.77ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 105.95ಕ್ಕೆ, ಡೀಸೆಲ್ ಬೆಲೆಯು ₹ 96.34ಕ್ಕೆ ತಲುಪಿದೆ. ಸ್ಥಳೀಯ ತೆರಿಗೆ ಆಧರಿಸಿ ಪೆಟ್ರೋಲ್, ಡೀಸೆಲ್ ಬೆಲೆಯು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಆಗುತ್ತದೆ. 10

EXAM DH ಪ್ರಜಾವಾಣಿ MASTERMIND™

ಪ್ರಿಯ ಸ್ಪರ್ಧಾರ್ಥಿಗಳೇ,

ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವವರಿಗಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಹೊರತಂದಿರುವ 'ಎಕ್ಸಾಮ್ ಮಾಸ್ಟರ್‌ಮೈಂಡ್' ಇ- ಪೇಪರ್ ಈಗಾಗಲೇ ಬಿಡುಗಡೆಯಾಗಿದ್ದು, ನಿಮಗೆ ಲಭ್ಯವಾಗಿರಬಹುದು. ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಕಾನ್‌ಸ್ಟೆಬಲ್, ಎಫ್‌ಡಿಎ ಮತ್ತು ಎಸ್‌ಡಿಎ.. ಹೀಗೆ ಹಲವು ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಎಕ್ಸಾಂ ಮಾಸ್ಟರ್‌ಮೈಂಡ್' ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿದ್ದು, ವಾರದ ಐದು ದಿನ ಲಭ್ಯವಿದೆ. ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ಮೆಂಟಲ್ ಎಬಿಲಿಟಿ, ವರ್ಬಲ್ ಎಬಿಲಿಟಿ, ಪ್ರಬಂಧಗಳು ಮುಂತಾದ ಸಮಗ್ರ ಅಧ್ಯಯನ ಸಾಮಗ್ರಿಗಳ ಜೊತೆಗೆ ಬಹು ಆಯ್ಕೆ ಪ್ರಶ್ನೋತ್ತರಗಳು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳು ಈ ಇ-ಪೇಪರ್‌ನಲ್ಲಿವೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉನ್ನತ ರ್‍ಯಾಂಕ್ ಪಡೆದು ಸರ್ಕಾರಿ ಉದ್ಯೋಗಿಯಾಗಬೇಕು ಎಂಬ ನಿಮ್ಮ ಕನಸನ್ನು 'ಎಕ್ಸಾಂ ಮಾಸ್ಟರ್‌ಮೈಂಡ್' ನನಸು ಮಾಡಲಿ ಎಂಬ ಶುಭ ಹಾರೈಕೆಗಳೊಂದಿಗೆ,

– ಸಂಪಾದಕ

IAS & KAS ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ನಿಮಗಾಗಿ ತಂದಿದೆ ಮಾಸ್ಟರ್‌ಮೈಂಡ್. ಚಂದಾದಾರರಾಗಿ @ 399/ವರ್ಷಕ್ಕೆ. bit.ly/DHPVEM

http://exammastermind.com

ಹಡಗಿನಲ್ಲಿ ಡ್ರಗ್ಸ್ ಪಾರ್ಟಿ • ಸೋಮವಾರದವರೆಗೆ ಎನ್‌ಸಿಬಿ ಕಸ್ಟಡಿಗೆ

ಶಾರುಕ್ ಖಾನ್ ಪುತ್ರನ ಬಂಧನ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬೈ ಸಮೀಪದ ಕಡಲಿನಲ್ಲಿ ಐಷಾರಾಮಿ ಹಡಗಿನಲ್ಲಿ ನಡೆಯುತ್ತಿದ್ದ ಡ್ರಗ್ಸ್ ಪಾರ್ಟಿಯ ಮೇಲೆ ಮಾದಕ ಪದಾರ್ಥ ನಿಯಂತ್ರಣ ಬ್ಯೂರೊ (ಎನ್‌ಸಿಬಿ) ದಾಳಿ ನಡೆಸಿ, ಮಾದಕ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದೆ. ಬಾಲಿವುಡ್ ನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ (23) ಮತ್ತು ಇನ್ನೂ ಮೂವರನ್ನು ಈ ಪ್ರಕರಣ ದಲ್ಲಿ ಬಂಧಿಸಲಾಗಿದೆ.

ಮುಂಬೈನಿಂದ ಗೋವಾಗೆ ಹೊರಟಿದ್ದ ಹಡಗಿನಲ್ಲಿ ಈ ಕಾರ್ಯಾಚರಣೆ ನಡೆದಿದೆ. ಕಾರ್ಯಾಚರಣೆ ನಂತರ ಹಡಗನ್ನು ಮುಂಬೈಗೆ ವಾಪಸ್ ಕರೆತರಲಾಗಿದೆ.

ಪ್ರಯಾಣಿಕರ ಸೋಗಿನಲ್ಲಿ ಶನಿವಾರ ಹಡಗು ಹತ್ತಿದ್ದ ಎನ್‌ಸಿಬಿ ಅಧಿಕಾರಿಗಳು, ಭಾನುವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ನಿಷೇಧಿತ ಮಾದಕ ವಸ್ತುಗಳನ್ನು ಖರೀದಿಸಿದ, ಹೊಂದಿದ್ದ ಮತ್ತು ಸೇವಿಸಿದ್ದ ಆರೋಪದಲ್ಲಿ ಆರ್ಯನ್ ಖಾನ್ ಅವರನ್ನು ಬಂಧಿಸಲಾಗಿದೆ. ಎಲ್ಲಾ ಬಂಧಿತರನ್ನು ಎನ್‌ಸಿಬಿ ಅಧಿಕಾರಿಗಳು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಹಾಜರುಪಡಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ನ್ಯಾಯಾಲಯವು ಬಂಧಿತರನ್ನು ಸೋಮವಾರದವರೆಗೆ ಎನ್‌ಸಿಬಿ ಕಸ್ಟಡಿಗೆ ನೀಡಿದೆ.

6ನೇ ಪುಟ ನೋಡಿ

ಎನ್‌ಸಿಬಿ ಬಂಧನದಲ್ಲಿ ಆರ್ಯನ್ ಖಾನ್ ಪಿಟಿಐ ಚಿತ್ರ

ಭಾರತದಲ್ಲಿ ಇದೇ ಮೊದಲ ದಾಳಿ

ಅತ್ಯಂತ ಗೋಪ್ಯ ಮೂಲಗಳಿಂದ ಪಡೆದ ಖಚಿತ ಸುಳಿವು, ಎರಡು ವಾರಗಳ ಸಿದ್ಧತೆ ಮತ್ತು ಸಮಾಲೋಚನೆಗಳ ಬಳಿಕ ಈ ಕಾರ್ಯಾಚರಣೆ ನಡೆದಿದೆ. ಕಡಲಿನಲ್ಲಿ ಹಡಗಿನಲ್ಲಿ ನಡೆಯುವ ಡ್ರಗ್ಸ್ ಪಾರ್ಟಿಯ ಮೇಲೆ ಇಂತಹ ದಾಳಿ ಭಾರತದಲ್ಲಿ ನಡೆದಿರುವುದು ಇದೇ ಮೊದಲು.

ಈ ಪ್ರಕರಣವು ಅಂತರ ರಾಷ್ಟ್ರೀಯ ಡ್ರಗ್ಸ್ ನಂಟಿನ ಬಗ್ಗೆ ಇನ್ನಷ್ಟು ವಿವರಗಳು ಬಹಿರಂಗವಾಗಲು ಕಾರಣವಾಗಲಿದೆ ಎನ್ನಲಾಗುತ್ತಿದೆ. ಮಾದಕ ಪದಾರ್ಥ ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಇತ್ತೀಚಿನ ವರ್ಷಗಳಲ್ಲಿ ನಡೆಸಿದ ಅತ್ಯಂತ ದೊಡ್ಡ ಕಾರ್ಯಾಚರಣೆಗಳಲ್ಲಿ ಇದೂ ಒಂದು.

ಎನ್‌ಸಿಬಿಯ ಮಹಾ ನಿರ್ದೇಶಕ ಎಸ್.ಎನ್. ಪ್ರಧಾನ್ ಮತ್ತು ಪ್ರಾದೇಶಿಕ ನಿರ್ದೇಶಕ ಸಮೀರ್ ವಾಂಖೆಡೆ ಅವರು ನಿರಂತರ ಸಂಪರ್ಕದಲ್ಲಿದ್ದು ಯೋಜನೆ ರೂಪಿಸಿದ್ದರು. ಎಷ್ಟು ಪರಿಪೂರ್ಣವಾಗಿ ಯೋಜನೆ ರೂಪಿಸಲಾಗಿತ್ತು ಎಂಬುದನ್ನು ಪ್ರಧಾನ್ ಅವರೇ ವಿವರಿಸಿದ್ದಾರೆ. 'ಅದು ಪ್ರಯಾಣಿಕ ಹಡಗು ಆಗಿತ್ತು. ಸಮುದ್ರದಲ್ಲಿ ನಡೆಸುವ ಕಾರ್ಯಾಚರಣೆಯಲ್ಲಿ ಸ್ವಲ್ಪವೂ ಲೋಪ ಆಗುವಂತಿರಲಿಲ್ಲ. ಕಾರ್ಯಾಚರಣೆಯು ಯೋಜನೆಯಂತೆ ಪರಿಪೂರ್ಣವಾಗಿ ನಡೆಯಿತು' ಎಂದು ಪ್ರಧಾನ್ ಹೇಳಿದ್ದಾರೆ.

ಎನ್‌ಸಿಬಿ ಅಧಿಕಾರಿಗಳು ಪ್ರಯಾಣಿಕರಂತೆ ಟಿಕೆಟ್ ಪಡೆದು ಹಡಗು ಏರಿದ್ದರು. ಇತರ ಪ್ರಯಾಣಿಕರ ಜತೆಗೆ ಬೆರೆತು ಅವರ ವಿಶ್ವಾಸ ಗಳಿಸಿಕೊಂಡರು. ನಂತರ ದಾಳಿ ನಡೆಸಿ, ಹಡಗನ್ನು ತೀರಕ್ಕೆ ತಂದರು.

ಮುಂಬೈ ಬಂದರು ಟ್ರಸ್ಟ್‌ನ ಭದ್ರತೆಯ ಹೊಣೆ ಹೊತ್ತಿರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯು ಡ್ರಗ್ಸ್ ಪಾರ್ಟಿಯ ಬಗ್ಗೆ ಸುಳಿವು ನೀಡಿತ್ತು.

ಅತಂತ್ರ ಸ್ಥಿತಿಯಲ್ಲಿ ಸಂಗೀತ ವಿ.ವಿ

ಮೈಸೂರು: ಇಲ್ಲಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ 11 ವರ್ಷಗಳಿಂದ ಕಾಯಂ ಬೋಧಕರಿಲ್ಲದೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. 2 ವರ್ಷಗಳಿಂದ ಅನುದಾನವಿಲ್ಲ. ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ಗುತ್ತಿಗೆ ನೌಕರರಿಗೆ ಆರು ತಿಂಗಳಿಂದ ವೇತನವನ್ನೂ ನೀಡಿಲ್ಲ. 4

30 ಕೆ.ಜಿ ನಿಷೇಧಿತ ವಸ್ತು ಜಪ್ತಿ 6
'ಝೈಕೋವ್-ಡಿ' ಲಸಿಕೆ ದರ ₹ 1,900 ನಿಗದಿ 6

ಮಮತಾಗೆ ಭಾರಿ ಗೆಲುವು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಭವಾನಿಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 58,389 ಮತಗಳ ಅಂತರದಿಂದ ದಾಖಲೆಯ ಗೆಲುವು ಸಾಧಿಸಿದ್ದಾರೆ.

ಈ ಗೆಲುವಿನೊಂದಿಗೆ, ಅವರು ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಮಮತಾ 84,709 ಮತಗಳನ್ನು ಪಡೆದರೆ, ಅವರ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಪ್ರಿಯಾಂಕಾ ತಿಬ್ರೆವಾಲ್ 26,320 ಮತ ಪಡೆದಿದ್ದಾರೆ. ಸಿಪಿಎಂ ಅಭ್ಯರ್ಥಿ ಶ್ರೀಜಿಬ್ ಬಿಸ್ವಾಸ್ ಅವರಿಗೆ ಕೇವಲ 4201 ಮತ ಪಡೆಯಲು ಸಾಧ್ಯವಾಗಿದೆ.

ಮಮತಾ

ಜಂಗೀಪುರ ಹಾಗೂ ಸಂಶೇರ್‌ಗಂಜ್ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿಯೂ ಮಮತಾ ಅವರ ತೃಣಮೂಲ ಕಾಂಗ್ರೆಸ್ ಪಕ್ಷವು ಜಯಭೇರಿ ಬಾರಿಸಿದೆ.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ ಮಮತಾ ಪರಾಭವಗೊಂಡಿದ್ದರು. ಆದರೂ ಮೇ 5ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಬೇಕಾದರೆ, ಆರು ತಿಂಗಳ ಒಳಗಾಗಿ ವಿಧಾನಸಭೆಗೆ ಆಯ್ಕೆಯಾಗುವುದು ಮಮತಾಗೆ ಅನಿವಾರ್ಯವಾಗಿತ್ತು.

ಅವರಿಗಾಗಿ ಭವಾನಿಪುರದ ಕ್ಷೇತ್ರದ ಶಾಸಕ ರಾಜೀನಾಮೆ ನೀಡಿದ್ದರಿಂದ ಈ ಕ್ಷೇತ್ರ ತೆರವಾಗಿತ್ತು.

2011ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಭವಾನಿಪುರದಿಂದ ಸ್ಪರ್ಧಿಸಿದ್ದ ಮಮತಾ, 54,213 ಮತಗಳಿಂದ ಗೆಲುವು ಸಾಧಿಸಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದರು. ಇದೀಗ 84 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆಯುವ ಮೂಲಕ ತಮ್ಮದೇ ದಾಖಲೆಯನ್ನು ಮುರಿದಿದ್ದಾರೆ. 2016ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅವರು 25,301 ಮತಗಳ ಅಂತರದಿಂದ ಗೆದ್ದಿದ್ದರು.

6ನೇ ಪುಟ ನೋಡಿ

'ಮೊದಲು ಚಿಕ್ಕಮಕ್ಕಳಿಗೇ ಶಾಲೆ ಆರಂಭಿಸಬೇಕಿತ್ತು'

ಪ್ರಜಾವಾಣಿ ವಾರ್ತೆ

ನವದೆಹಲಿ: 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿನ ಪ್ರಮಾಣದಲ್ಲೇ ಇರುವುದರಿಂದ ಕೊರೊನಾ 2ನೇ ಅಲೆಯ ನಂತರ ರಾಜ್ಯದಲ್ಲಿ 1ನೇ ತರಗತಿಯಿಂದಲೇ ಶಾಲೆ ಆರಂಭಿಸಬೇಕಿತ್ತು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅಭಿಪ್ರಾಯಪಟ್ಟರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲು 9ನೇ ತರಗತಿ ನಂತರ 6ನೇ ತರಗತಿಗಿಂತ ಮೇಲಿನ ವಿದ್ಯಾರ್ಥಿಗಳಿಗೆ ಶಾಲೆ ಆರಂಭಿಸಲಾಯಿತು. ರೋಗ ನಿರೋಧಕ ಶಕ್ತಿ ಹೆಚ್ಚು ಇರುವವರನ್ನು ಮನೆಯಲ್ಲಿ ಕೂರಿಸಲಾಯಿತು. ಪಾಲಕರ ಒಪ್ಪಿಗೆ ಪಡೆಯುವುದು ದುಸ್ತರ ಎಂಬ ಕಾರಣಕ್ಕೆ ಸುಮ್ಮನಿದ್ದ ಶಿಕ್ಷಣ ಇಲಾಖೆ ಈ ಕುರಿತು ಚಿಂತನೆ ನಡೆಸಬೇಕಿದೆ ಎಂದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ





ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಕೆರೆ ನಿರ್ವಹಣೆಗೆ ಗಮನ ಹರಿಸಿ

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ದೊಡ್ಡಬೊಮ್ಮಸಂದ್ರ -ತಿಂಡ್ಲು ರಸ್ತೆಯ ಬಲಭಾಗದಲ್ಲಿರುವ ವಿಶಾಲವಾದ ಕೆರೆಯ ಸಮರ್ಪಕ ನಿರ್ವಹಣೆಯಿಲ್ಲದ ಕಾರಣ ಕೆರೆಯಲ್ಲಿ ಹೂಳು ತುಂಬಿ ಕಳೆ ಬೆಳೆದು ನೀರಿನ ಸಂಗ್ರಹ ಮಟ್ಟ ಕುಸಿದಿದೆ. ಈ ಬಗ್ಗೆ ಪಾಲಿಕೆಯ ಗಮನಕ್ಕೆ ತರಲಾಗಿತ್ತು. ಆದರೆ, ಪಾಲಿಕೆಯು ಈ ಕೆರೆಯ ಅಭಿವೃದ್ಧಿಗೆ ಕ್ರಮ ಜರುಗಿಸದ ಕಾರಣ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದೆ.

ನನ್ನ ಮನವಿಗೆ ಸ್ಪಂದಿಸಿದ ಪ್ರಾಧಿಕಾರವು ಹೂಳು ಹಾಗೂ ಕಳೆ ತೆಗೆದು ನೀರು ಸಂಗ್ರಹವಾಗಲು ಹಾಗೂ ಅಂತರ್ಜಲ ವೃದ್ಧಿಸಲು ಕೆರೆಯ ಅಭಿವೃದ್ಧಿ ಮಾಡಲು ಮಹಾನಗರ ಪಾಲಿಕೆಯ ಮುಖ್ಯ ಎಂಜಿನಿಯರ್‌ಗೆ ಸೂಚಿಸಿದೆ. ಈ ವಿಷಯದ ಕುರಿತು ಕ್ರಮ ಜರುಗಿಸಲು ಜಿಲ್ಲಾಧಿಕಾರಿ ಅವರಿಗೂ ಪತ್ರ ಬರೆದಿದ್ದೆ. ಈ ಅಂಶವನ್ನು ಮಹಾನಗರ ಪಾಲಿಕೆಯ ಮುಖ್ಯ ಎಂಜಿನಿಯರ್ ಕಚೇರಿಯ ಗಮನಕ್ಕೆ ತಂದರೂ ಕೆರೆಯ ಅಭಿವೃದ್ಧಿ ಕುರಿತು ಯಾವುದೇ ಕ್ರಮ ಜರುಗಿಸಿಲ್ಲ. ಇತ್ತೀಚೆಗೆ ಹೈಕೋರ್ಟ್ ಸಹ ನಗರದ ಕೆರೆಗಳ ಅಭಿವೃದ್ಧಿಗೆ ಕ್ರಮ ಜರುಗಿಸಲು ಆದೇಶ ಮಾಡಿದೆ. ಹೀಗಾಗಿ, ದೊಡ್ಡಬೊಮ್ಮಸಂದ್ರದ ಪಕ್ಕದಲ್ಲಿರುವ ಕೆರೆಯ ಅಭಿವೃದ್ಧಿಗೆ ಕ್ರಮ ಜರುಗಿಸುವ ಮೂಲಕ ಮಹಾನಗರದ ಅಂತರ್ಜಲ ಏರಿಕೆ ಹಾಗೂ ಪಕ್ಷಿ ಸಂಕುಲದ ಆಶ್ರಯಕ್ಕೆ ಅನುಕೂಲ ಮಾಡಿಕೊಡಬೇಕು. ಒಂದು ವೇಳೆ, ಕೆರೆಯ ಅಭಿವೃದ್ಧಿ ಕುರಿತು ತ್ವರಿತ ಕ್ರಮ ಜರುಗಿಸದಿದ್ದಲ್ಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗುವುದು.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ ಎರಡನೇ ಹಂತ

ಪಾರ್ಕ್ ಗೇಟ್ ತೆರೆಯಲು ಮೀನಮೇಷ ಏಕೆ?

ಕತ್ರಿಗುಪ್ಪೆಯ ವಾರ್ಡ್ 163ರ ರಾಕ್ ಗಾರ್ಡನ್ ಪಾರ್ಕ್ ಜನರ ಬಳಕೆಗೆ ಇಲ್ಲದಂತಾಗಿದೆ. ಗೇಟಿಗೆ ನೇತು ಹಾಕಿರುವ ಬೋರ್ಡ್ ಪಾರ್ಕ್ ತೆರೆದಿರುವ ಸಮಯವನ್ನು ಸೂಚಿಸುತ್ತದೆಯಾದರೂ, ಎಂದೂ ಸಮಯಕ್ಕೆ ಸರಿಯಾಗಿ, ಮೂರು ಗೇಟುಗಳಲ್ಲಿ ಒಂದನ್ನೂ ತೆರೆಯುವುದಿಲ್ಲ. ಈ ಗೇಟುಗಳ ಪಕ್ಕದಲ್ಲಿ ವಾಸಿಸುತ್ತಿರುವವರ ಮನೆಗಳವರ ಬಳಿ ಕೀಲಿಕೈ ಇರುವುದರಿಂದ, ಅವರು ತಮಗೆ ಬೇಕಾದಾಗ, ಅನುಕೂಲವೆನಿಸಿದಾಗ ಗೇಟುಗಳನ್ನು ತೆರೆಯುತ್ತಾರೆ. ಈ ಪಾರ್ಕ್ ಆ ಮನೆಯವರ ವಾಯುವಿಹಾರಕ್ಕಾಗಿ ಮಾತ್ರ ಉಪಯೋಗವಾಗುತ್ತಿದೆ. ನಿಗದಿಪಡಿಸಿರುವ ವೇಳೆಯಲ್ಲಿ ಪಾರ್ಕಿನ ಗೇಟುಗಳನ್ನು ತೆರೆದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ.

ಪುಟ್ಟೇಗೌಡ, ಕತ್ರಿಗುಪ್ಪೆ

ರಾಕ್ ಗಾರ್ಡನ್ ಪಾರ್ಕ್

ವಾಹನ ಸವಾರರ ಸಂಕಟ ತಪ್ಪಿಸಿ

ಒಳಚರಂಡಿಯನ್ನು ಎತ್ತರಿಸಿರುವುದರಿಂದ ಶ್ರೀನಿವಾಸನಗರದ 9ನೇ ತಿರುವಿನತ್ತ ಸಾಗುವ ವಾಹನ ಸವಾರರು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ

ಶ್ರೀನಿವಾಸನಗರದ 9ನೇ ತಿರುವಿನಲ್ಲಿ ರಸ್ತೆಗೆ ಅಡ್ಡಲಾಗಿರುವ ಒಳಚರಂಡಿಗೆ ಮೂರು ತಿಂಗಳ ಹಿಂದೆ ಕಾಂಕ್ರೀಟ್ ರೂಪ ನೀಡಲಾಗಿದೆ. ಅದನ್ನು ರಸ್ತೆಗಿಂತಲೂ ಎರಡು ಅಡಿಯಷ್ಟು ಎತ್ತರಿಸಲಾಗಿದೆ. ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡುವಂತಾಗಿದೆ.

ಒಳಚರಂಡಿಯ ಮೇಲೆ ಸಿಮೆಂಟ್ ಚಪ್ಪಡಿಗಳನ್ನು ಹಾಕಲಾಗಿದೆ. ಅದಕ್ಕೆ ಸಮನಾಗಿ ಮಣ್ಣು ಹಾಕಿ ಮುಚ್ಚುವ ಕೆಲಸವಾಗಿಲ್ಲ. ಹೀಗಾಗಿ ಮುಖ್ಯ ರಸ್ತೆಯಿಂದ ಒಳ ರಸ್ತೆಗೆ ಪ್ರವೇಶಿಸುವ ವಾಹನ ಸವಾರರು ಆಯತಪ್ಪಿ ಬೀಳುವ ಅಪಾಯ ಹೆಚ್ಚಿದೆ. ವಯಸ್ಸಾದವರು ಮತ್ತು ಹಿರಿಯರು ಆ ರಸ್ತೆಯನ್ನು ಇಳಿಯಲೂ ಹರಸಾಹಸ ಪಡಬೇಕಾದ ಪರಿಸ್ಥಿತಿ ಇದೆ.

ಸಿಮೆಂಟ್ ಚಪ್ಪಡಿಯ ಮೇಲಿಂದ ಬೈಕ್ ದಾಟಿಸುವ ಭರದಲ್ಲಿ ಕೆಲ ದ್ವಿಚಕ್ರ ವಾಹನ ಸವಾರರು ಜೋರಾಗಿ ಆ್ಯಕ್ಸಿಲೇಟರ್ ಕೊಡುತ್ತಾರೆ. ಆಗ ಬೈಕ್ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಸಾಗುವ ಪಾದಚಾರಿಗಳಿಗೆ ಡಿಕ್ಕಿ ಹೊಡೆದ ನಿದರ್ಶನಗಳೂ ಇವೆ. ಈ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಈ ರಸ್ತೆಯಲ್ಲಿ ಸಾಗುವ ವೇಳೆ ಕಾರುಗಳ ಬಂಪರ್‌ಗಳಿಗೂ ಹಾನಿಯಾಗಿವೆ. ಒಮ್ಮೊಮ್ಮೆ ಕಸ ಸಂಗ್ರಹಿಸುವ ವಾಹನವನ್ನು ರಸ್ತೆಯ ಮೇಲೆ ನಿಲ್ಲಿಸಲಾಗಿರುತ್ತದೆ. ಇದರಿಂದ ವಾಹನ ದಟ್ಟಣೆಯೂ ಉಂಟಾಗುತ್ತಿದೆ.

10 ಮತ್ತು 11ನೇ ತಿರುವಿನಲ್ಲೂ ಇದೇ ರೀತಿ ಅವೈಜ್ಞಾನಿಕ ಕಾಮಗಾರಿ ನಡೆಸಲಾಗಿದೆ. ಆ ರಸ್ತೆಗಳ ಮೂಲಕ ಸಾಗುವವರಿಗೂ ಸಂಕಟ ತಪ್ಪಿದ್ದಲ್ಲ. ಇದನ್ನು ಸರಿಪಡಿಸುವಂತೆ ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕ ಎಲ್.ರವಿಸುಬ್ರಹ್ಮಣ್ಯ ಅವರಿಗೆ ಮನವಿ ಕೂಡ ಮಾಡಿದ್ದೇವೆ. ಈ ಸಮಸ್ಯೆಯನ್ನು ಅವರು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಅವರ ಈ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ಪರದಾಡುವಂತಾಗಿರುವುದು ವಿಪರ್ಯಾಸ.

ಇನ್ನಾದರೂ ಶಾಸಕರೂ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಸರಿಪಡಿಸುವತ್ತ ಗಮನ ಹರಿಸಲಿ. ಮುಂದೆ ಎದುರಾಗಬಹುದಾದ ಅಪಾಯ ತಪ್ಪಿಸಲಿ.

ನಂಜುಂಡಸ್ವಾಮಿ, ಶ್ರೀನಿವಾಸನಗರ ನಿವಾಸಿ

ಅವ್ಯವಸ್ಥೆಯಿಂದ ಕೂಡಿರುವ ಶ್ರೀಅಂಗಳ ಪರಮೇಶ್ವರಿ ದೇವಸ್ಥಾನದ ರಸ್ತೆ

ಒಂದೇ ವಾಕ್ಯದಲ್ಲಿ ಹೇಳಬೇಕಾದರೆ ಅವ್ಯವಸ್ಥೆ ಅಗರ. ಮಳೆ ಬಂದಾಗ ಚರಂಡಿ ನೀರಿನ ಜೊತೆಗೆ ಮಳೆ ನೀರು ತಗ್ಗುಪ್ರದೇಶಗಳಿಗೆ ನುಗ್ಗಿ ಅವಾಂತರವೇ ಸೃಷ್ಟಿಯಾಗುತ್ತದೆ. ಮಳೆ ಬಂದರೆ ಜೀವವನ್ನು ಕೈಯಲ್ಲಿ ಹಿಡಿದು ಕೊಂಡು ಬದುಕುವ ಪರಿಸ್ಥಿತಿ ಇಲ್ಲಿನ ನಿವಾಸಿಗಳದ್ದಾಗಿದೆ. ಜೋರು ಮಳೆ ಬಂದಾಗ ಮಳೆ ನೀರಿನೊಂದಿಗೆ ಚರಂಡಿ ನೀರು ಮನೆಗಳಿಗೆ ನುಗ್ಗುತ್ತದೆ.

ವಿಧಾನಸೌಧದಿಂದ ಕೆಲವೇ ಕಿಲೋಮೀಟರ್ ದೂರದ ಕಾಚೋಹಳ್ಳಿ ಗ್ರಾಮ ಪಂಚಾಯಿತಿಯ ಚಿಕ್ಕಗೊಲ್ಲರಹಟ್ಟಿಗೆ ಸೇರಿರುವ ಶ್ರೀ ಅಂಗಳಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆ ಮತ್ತು ಶ್ರೀ ಅಂಗಳಪರಮೇಶ್ವರಿ ದೇವಸ್ಥಾನದ ಸುತ್ತ ಮುತ್ತಲ ಪ್ರದೇಶಗಳ ದುಸ್ಥಿತಿಯಾಗಿದೆ.

ರಾಜರಾಜೇಶ್ವರಿ ಕಲ್ಯಾಣಮಂಟಪಕ್ಕೆ ಹೊಂದಿಕೊಂಡಂತೆ ಇರುವ ಅಂಗಳ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆ ಜಲ್ಲಿಕಲ್ಲು ಸಹ ಕಂಡಿಲ್ಲ. ರಸ್ತೆಯ ಎರಡು ಬದಿಯಲ್ಲಿ ಚರಂಡಿ ವ್ಯವಸ್ಥೆಯಿಲ್ಲ. ಮಾಗಡಿ ಮುಖ್ಯರಸ್ತೆ, ಮೇಲ್ಭಾಗದ ಮುನೇಶ್ವರ ಬಡಾವಣೆಯ ಚರಂಡಿ ನೀರಿನ ಜೊತೆಗೆ ಮಳೆ ನೀರು ರಭಸವಾಗಿ ಹರಿಯುವುದರಿಂದ ರಸ್ತೆ ಸಂಪೂರ್ಣ ಕಿತ್ತುಹೋಗಿದೆ. ಕಿತ್ತು ಹೋಗಿರುವ ಈ ರಸ್ತೆಗೆ ದುರಸ್ತಿಯೂ ಇಲ್ಲ. ಚರಂಡಿಯೂ ಇಲ್ಲ.

ಚರಂಡಿ ನೀರು ಅಲ್ಲಲ್ಲಿ ನಿಂತು ಹರಿಯುವುದರಿಂದ ಸೊಳ್ಳೆಗಳ ಉತ್ಪಾದನಾ ಕೇಂದ್ರವಾಗಿದೆ. ಸಂಜೆಯಾದರೆ ಸೊಳ್ಳೆ ಕಾಟ, ಗಾಳಿ ಬೀಸಿದರೆ ದುರ್ವಾಸನೆ, ಕೆಟ್ಟಗಾಳಿ ಬೀಸುತ್ತದೆ. ಹಲವು ಬಾರಿ ಶಾಸಕರಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ.

ಚಿಕ್ಕರಾಮು, ರಾಜರಾಜೇಶ್ವರಿನಗರ

ಕಿತ್ತು ಹೋಗಿರುವ ರಸ್ತೆ

ಕಾಂಪೌಂಡ್ ತೆರವುಗೊಳಿಸಿ

ಕೊರೊನಾ ಸಂಕಷ್ಟದ ಸಮಯದಲ್ಲಿ ಸುರಕ್ಷತೆ ದೃಷ್ಟಿಯಿಂದ ಮುಚ್ಚಿದ್ದ ಕೆ.ಆರ್. ಪುರ ಸರ್ಕಾರಿ ಆಸ್ಪತ್ರೆ ಹಿಂಭಾಗದಿಂದ ಐಟಿಐ ಕಾಲೊನಿ ಪ್ರವೇಶಿಸುವ ಕಾಂಪೌಂಡ್ ರಸ್ತೆ ಮಾರ್ಗವನ್ನು ಶಾಲಾ ಮಕ್ಕಳ ಮತ್ತು ಐಟಿಐ ನೌಕರರ ಅನುಕೂಲಕ್ಕಾಗಿ ತೆರವುಗೊಳಿಸಬೇಕು.

ಕೊರೊನಾ ವೇಳೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ ಸಾರ್ವಜನಿಕರು ಓಡಾದಂತೆ ಐಟಿಐ ಕಾಲೊನಿ ಮಾರ್ಗವನ್ನು ಅಡ್ಡಗೋಡೆ ನಿರ್ಮಿಸಿ ನಿರ್ಬಂಧಿಸಲಾಗಿತ್ತು. ಈಗ ಕೊರೊನಾ ಕ್ಷೀಣಿಸಿರುವುದರಿಂದ ಐಟಿಐ ಸಂಸ್ಥೆ ಹಾಗೂ ಐಟಿಐ ವಿದ್ಯಾಸಂಸ್ಥೆಗಳು ಪುನರ್ ಪ್ರಾರಂಭಗೊಂಡಿವೆ. ಐಟಿಐನ ವಿದ್ಯಾ ಮಂದಿರ ಶಾಲೆಗೆ ತೆರಳಲು ಶಾಲಾ ಮಕ್ಕಳು ಹಾಗೂ ಶಿಕ್ಷಕರು, ಐಟಿಐ ಕಾರ್ಮಿಕ ಸಿಬ್ಬಂದಿಯು ಇದೇ ಮಾರ್ಗವನ್ನು ನೆಚ್ಚಿಕೊಂಡಿದ್ದಾರೆ.

ಕೆ.ಆರ್.ಪುರದಿಂದ ಐಟಿಐ ಕಾಲೊನಿ, ಐಟಿಐ ವಿದ್ಯಾ ಮಂದಿರ, ರಾಮಮೂರ್ತಿನಗರಕ್ಕೆ ತೆರಳಲು ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ಇದೇ ಮಾರ್ಗವನ್ನು ಅವಲಂಬಿಸಿದ್ದಾರೆ. ಈ ಮಾರ್ಗ ಮುಚ್ಚಿರುವುದರಿಂದ ಕೆ.ಆರ್.ಪುರದಿಂದ ರಾಮಮೂರ್ತಿನಗರಕ್ಕೆ ಹಾಗೂ ಐಟಿಐ ಕಾರ್ಖಾನೆ, ವಿದ್ಯಾ ಮಂದಿರಕ್ಕೆ ಹೋಗಲು ಕೆ.ಆರ್.ಪುರ ಐಟಿಐ ಬಳಿಯ ತೂಗು ಸೇತುವೆ ಕೆಳಭಾಗದಿಂದ ಸಂಚಾರಿಸಲು 3 ಕಿ.ಮಿ ಸುತ್ತುವರೆದು ಸಾಗಬೇಕಿದೆ.

ಕೊರೊನಾ ಬರುವ ಮುಂಚೆ ಹತ್ತಿರದ ದಾರಿಯಾಗಿದ್ದ ಈ ಮಾರ್ಗವನ್ನು ಹೆಚ್ಚಾಗಿ ಬಳಸುತ್ತಿದ್ದೇವು. ಶಾಲಾ ಮಕ್ಕಳು ಹಾಗೂ ಐಟಿಐ ನೌಕರರಿಗೆ ಪಾದಚಾರಿಗಳಿಗೆ ಅನುಕೂಲವಾಗಲು ಕಾಂಪೌಂಡ್ ರಸ್ತೆ ಮಾರ್ಗವನ್ನು ತೆರವುಗೊಳಿಸುವಂತೆ ಐಟಿಐನ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಗಿದೆ.

ಕೆ.ಪಿ.ಕೃಷ್ಣ, ಎನ್.ವೇಣುಗೋಪಾಲ

ಕಾಂಪೌಂಡ್ ನಿರ್ಮಿಸಿರುವುದು

ಮತ್ತೆ ಫ್ಲೆಕ್ಸ್ ಹಾವಳಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸ್ವಾಗತಿಸಲು ಭಾನುವಾರ ಪೀಣ್ಯದಲ್ಲಿ ರಸ್ತೆ ಉದ್ದಕ್ಕೂ ಫ್ಲೆಕ್ಸ್‌ಗಳನ್ನು ಹಾಕಲಾಗಿತ್ತು. ಇದರಿಂದ ಕಿರಿಕಿರಿಗೆ ಒಳಗಾದ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಪ್ರಜಾವಾಣಿ ಚಿತ್ರ

ಆರ್ಟ್ ರಿಫ್ಲೆಕ್ಟ್ಸ್: ದಸರಾ ಪ್ರಯುಕ್ತ ಸ್ಪರ್ಧೆ

ಬೆಂಗಳೂರು: ದಸರಾ ಪ್ರಯುಕ್ತ ಆರ್ಟ್ ರಿಫ್ಲೆಕ್ಟ್ಸ್ ಅಕಾಡೆಮಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

ಚಿತ್ರಕಲೆ, ಭಕ್ತಿ ಗೀತೆ, ಭಾಷಣ, ನೃತ್ಯ ,ರಂಗೋಲಿ, ವಾದ್ಯ ನುಡಿಸುವ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಗಿದೆ. ಭಾಗವಹಿಸುವ ಎಲ್ಲರಿಗೂ ಬಹುಮಾನ ಗೆಲ್ಲುವ ಅವಕಾಶವಿದೆ. ಹೆಸರು ನೋಂದಾಯಿಸಲು ಅ.4 ಕೊನೆಯ ದಿನ. ಮಾಹಿತಿಗೆ:93806 71947 ಸಂಪರ್ಕಿಸಬಹುದು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

INVEST IN MSME to get 12 %interest per annum. contact info@innovativesliding.com

Business Offers

Finance

NRI'S INVESTMENT
AndFinance
AvailableOn
LowInterest
AgainstProperties,
Land &
Building,Sites,Flats,
Converted&
AgricultureLandsCall:
7411265189

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Hospital & Medical Jobs

WANTED
PHARMACISTS
to work all over Karnataka
(with Diploma in Pharmacy Certificate)
plz send the CV to email:
raghu_sgr2@yahoo.co.in /
poojyaya2005@gmail.com/
Or only WhatsApp :
9845996744 /
9341366744

WANTED NURSING
Staff Accommodation
Given Contact:
9900520357
Chaitanya Hospital, No
80, P&T Colony,
R.T.Nagar
Bangalore-32

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Teachers/ Professors

WANTED LECTURERS: Subject Commerce, Srinivasa Education Society, Hosur main road, Kudlu Gate, Bengaluru. 9449979054/ 9341948860

EDUCATIONAL

Admission

ALAGAPPA UNIVERSITY
DDE (ONLINE ADMISSION) by Daranisri Academy, Courses Offered: All UG/ PG/ MBA/ MCA/ PG Diploma.
9842721540,
04344-220910,
04344-221540

OTHERS

Medical

HOME NURSES available/ Wanted for Home/ Hospital/ Patient Care 24/7 MAJ Gandhinagar. Contact: 7022399993/ 6366883838

RENTAL PROPERTIES

Accommodation Available

Commercial

1550 SQFT OFFICE space, 1st floor with workstations, cabins, 2 toilets, Lift, parking space- most prime area, NehruNagar, KumaraPark, near Reddy Petrol Bunk, Contact 9972856142

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION
CONTACT 9880856233 | 9886213331
Email: santhoshkumar@deccanherald.co.in



ಎನ್‌ಆರ್‌ಕಾಲೋನಿಯ ಪ್ರಭಾತ್ ಕಲಾಪೂರ್ಣಿಮದಲ್ಲಿ ಭಾನುವಾರ, "ಬೈ2 ಕಾಫಿ ಮತ್ತು ಮಾಗಡಿ ಡೇಸ್" ನಾಟಕ ಕೃತಿಯನ್ನು ರಂಗಭೂಮಿ ಮತ್ತು ಚಲನಚಿತ್ರ ಕಲಾವಿದ ಪ್ರಕಾಶ ಬೆಳವಾಡಿ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಪ್ರಕಾಶಕ ಬಿ.ಎಸ್‌ ವಿದ್ಯಾರಣ್ಯ, ಹಿರಿಯ ರಂಗಕರ್ಮಿ ಅಭಿರುಚಿ ಚಂದ್ರು, ರೋಹಿತ್ ಚಕ್ರತೀರ್ಥ,ಅಭಿಷೇಕ್ ಅಯ್ಯಂಗಾರ್ ಇದ್ದರು.

‘ನಮಗೆ ಒಗ್ಗದ ಸಂಸ್ಕೃತಿ, ಪರಿಚಯ ಪ್ರವೃತ್ತಿ ನಿಲ್ಲಿಸಿ’

ಬೆಂಗಳೂರು: ‘ನಮಗೆ ಸಲ್ಲದ ಮತ್ತು ಒಗ್ಗದ ಜಗತ್ತನ್ನು ಮಕ್ಕಳಿಗೆ ತೋರಿಸಿ ಅದನ್ನೇ ಬದುಕಿನುದ್ದಕ್ಕೂ ಅನುಕರಿಸುವ ಚಾಳಿಯನ್ನು ಇನ್ನಾದರೂ ನಿಲ್ಲಿಸಿ; ನಮ್ಮ ದೇಶದ ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಗಳ ಉಳಿವಿಗೆ ಮುಂದಾಗುವ ಅವಶ್ಯಕತೆ ಇಂದು ತುರ್ತಾಗಿ ಆಗಬೇಕಿದೆ’ ಎಂದು ಸಾಮಾಜಿಕ ಚಿಂತಕ ರೋಹಿತ್ ಚಕ್ರತೀರ್ಥ ಪ್ರತಿಪಾದಿಸಿದರು.

ಲೇಖಕ ಅಭಿಷೇಕ್ ಅಯ್ಯಂಗಾರ್ ಅವರ, ‘ಬೈ2 ಕಾಫಿ ಮತ್ತು ಮಾಗಡಿ ಡೇಸ್’ ನಾಟಕ ಕೃತಿ ಬಿಡುಗಡೆ ಸಮಾರಂಭದಲ್ಲಿ ಭಾನುವಾರ ಇಲ್ಲಿ ಮಾತನಾಡಿದ ಅವರು, ‘ಈ ನಿಟ್ಟಿನಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ರಂಗಶಿಕ್ಷಣ ಪ್ರಧಾನವಾಗಿ ಅಡಕವಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ’ ಎಂದರು.

‘ನಾಟಕಗಳು ನಮಗೆ ತನ್ಮಯತೆ ಮತ್ತು ಆಲಿಸುವಿಕೆಯನ್ನು ಕಲಿಸುವ ಮೂಲಕ ಸಮಾಜವನ್ನೂ ನಿರುಕಿಸಲು ಉತ್ತೇಜಿಸುತ್ತವೆ ಎಂಬ ಅಂಶಗಳನ್ನು ಮಕ್ಕಳಿಗೆ ತಲುಪಿಸುವ ಮೂಲಕ ಸ್ವದೇಶಿ ಸಂಪ್ರದಾಯ ಚಿಂತನೆಯ ರಂಗಭೂಮಿಯನ್ನು ಹೆಚ್ಚೆಚ್ಚು ಪರಿಚಯಿಸುತ್ತಾ ಹೋಗಬೇಕು’ ಎಂದರು.

ಹಿರಿಯ ರಂಗಕರ್ಮಿ ಎಸ್. ಎನ್.ಸೇತೂರಾಮ್ ಮಾತನಾಡಿ, ‘ರಾಮನನ್ನು ಬೈಯುತ್ತಾ, ರಾವಣನನ್ನು ವಿಜೃಂಭಿಸುವ ನಾಟಕಗಳನ್ನು ಬರೆದು ಆಡಿಸುವ ಪ್ರವೃತ್ತಿ ಕೊನೆಯಾಗಲಿ’ ಎಂದರು.

‘ವಿಶ್ವ ಧಾರ್ಮಿಕ ಸಂಸತ್’ನಲ್ಲಿ ದೀಪ್ತಿ ನವರತ್ನ ಸಂಗೀತ ಕಾರ್ಯಕ್ರಮ

ಬೆಂಗಳೂರು: ಷಿಕಾಗೊದಲ್ಲಿ ನಡೆಯಲಿರುವ ‘ವಿಶ್ವ ಧಾರ್ಮಿಕ ಸಂಸತ್’ ಸಮ್ಮೇಳನದಲ್ಲಿ ನಗರದ ಗಾಯಕಿ ಡಾ. ದೀಪ್ತಿ ನವರತ್ನ ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ.

ಈ ಸಮ್ಮೇಳನದಲ್ಲಿ ಕಾರ್ಯಕ್ರಮ ನೀಡಲಿರುವ ಭಾರತದ ಮೊಟ್ಟ ಮೊದಲ ಸಂಗೀತಗಾರ್ತಿ ಇವರಾಗಿದ್ದಾರೆ.

ಕೇಂದ್ರ ಸರ್ಕಾರದ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿರುವ ಡಾ. ದೀಪ್ತಿ ಅವರನ್ನು, ಅಕ್ಟೋಬರ್ 18ರಂದು ನಡೆಯಲಿರುವ ‘ವಿಶ್ವ ಧಾರ್ಮಿಕ ಸಂಸತ್’ ಸಮ್ಮೇಳನದಲ್ಲಿ ‘ದಿ ಡೈಲಾಗ್ಸ್ ವಿತ್ ದಿ ಡಿವೈನ್’ ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲು ಆಹ್ವಾನಿಸಲಾಗಿದೆ.

ಡಾ. ದೀಪ್ತಿ ನವರತ್ನ

ಕೋವಿಡ್ ಸಾಂಕ್ರಾಮಿಕ ಪಿಡುಗಿನ ಕಾರಣ, ಡಾ. ದೀಪ್ತಿ ನವರತ್ನ ಮತ್ತು ಇತರ ಕಲಾವಿದರು ತಮ್ಮ ಕಾರ್ಯಕ್ರಮವನ್ನು ಬೆಂಗಳೂರಿನಿಂದಲೇ ಪ್ರಸ್ತುತಪಡಿಸಲಿದ್ದಾರೆ. (ಲಿಂಕ್: https://www.youtube.com/watch?v=fzpny-s1pt4)

ಕನ್ನಡ ವೈದ್ಯ ಬರಹಗಾರರ ಬಳಗದ ಎರಡನೇ ರಾಜ್ಯ ಸಮ್ಮೇಳನ

‘ವೈದ್ಯ ಸಾಹಿತ್ಯ ಗಟ್ಟಿಯಾಗಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಸಾಹಿತ್ಯ ಮತ್ತಷ್ಟು ಗಟ್ಟಿಯಾಗಬೇಕಾದ ಅಗತ್ಯವಿದೆ’ ಎಂದು ರೇಡಿಯಾಲಜಿ ತಜ್ಞೆ ಹಾಗೂ ಕನ್ನಡ ವೈದ್ಯ ಬರಹಗಾರರ ಬಳಗದ ಎರಡನೇ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಆರ್.ಕೆ. ಸರೋಜಾ ಅಭಿಪ್ರಾಯಪಟ್ಟರು.

ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆ ಭಾನುವಾರ ಆಯೋಜಿಸಿದ್ದ ಕನ್ನಡ ವೈದ್ಯ ಬರಹಗಾರರ ಬಳಗದ ಎರಡನೇ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಹೊಸ ವೈದ್ಯ ಸಾಹಿತಿಗಳು ಸೃಜನಶೀಲ ಸಾಹಿತ್ಯಕ್ಕೆ ಹೆಚ್ಚು ವಾಲಿಕೊಂಡಂತಿದೆ. ಕಥೆ, ಕವನ, ಸಣ್ಣಕಥೆ, ಕಾದಂಬರಿ ಇತ್ಯಾದಿ ಹೆಚ್ಚು ವಸ್ತು ನಿಷ್ಠವಾಗಬೇಕು. ‘ಕಟ್ ಆ್ಯಂಡ್ ಪೇಸ್ಟ್’ ಮಾಡಿ ವಾರಕ್ಕೆರಡು ಪುಸ್ತಕ ಬಿಡುಗಡೆ ಮಾಡಿದರೆ ಸತ್ವ ಉಳಿಯಲಾರದು’ ಎಂದು ಹೇಳಿದರು.

‘ವೈದ್ಯಕೀಯ ಸಾಹಿತ್ಯ ಇನ್ನೂ ಉತ್ತಮವಾಗಬೇಕಾಗಿದೆ. ಆಕರ್ಷಕ ವಸ್ತು, ವೈವಿಧ್ಯತೆ, ವೈದ್ಯ ವಿಜ್ಞಾನ ಮಾಹಿತಿಯನ್ನು ತಮ್ಮ ಚಿಕಿತ್ಸಾ ಅನುಭವಗಳೊಂದಿಗೆ ಹದವಾಗಿ ಬೆರೆಸಿ ಸಾಹಿತ್ಯದ ಅಂಚು ಕಟ್ಟಿ ಬರೆಯಬೇಕು' ಎಂದು ಸಲಹೆ ನೀಡಿದರು.

ಸಮ್ಮೇಳನ ಉದ್ಘಾಟಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್, ‘ಕನ್ನಡ ಸಾಹಿತ್ಯದ ವಿಸ್ತರಣೆಗೆ ವೈದ್ಯರ ಕೊಡುಗೆ ಅತ್ಯಮೂಲ್ಯವಾಗಿದೆ. ವೈದ್ಯರು ತಮ್ಮ ಕೆಲಸದ ಒತ್ತಡದ ನಡುವೆಯೂ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವುದು ಶ್ಲಾಘನೀಯ’ ಎಂದು ಹೇಳಿದರು.

ನಗರದಲ್ಲಿ ಭಾನುವಾರ ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿಯನ್ನು ಡಾ. ಎಚ್‌.ಎಸ್‌. ಅನುಪಮಾ ಅವರಿಗೆ ಪ್ರದಾನ ಮಾಡಲಾಯಿತು. ಡಾ. ಅಣ್ಣಯ್ಯ ಕುಲಾಲ್ ಎಂ. ಉಳ್ತೂರು, ಡಾ.ಸುರೇಶ್ ಕುಡ್ವ, ಸಚಿವ ಸುನೀಲ್ ಕುಮಾರ್, ಕುಲಪತಿ ಡಾ. ಎಸ್‌.ಎಂ. ಜಯಕರ, ಡಾ.ಎಸ್‌.ಪಿ.ಯೋಗಣ್ಣ, ಕನ್ನಡ ವೈದ್ಯ ಬರಹಗಾರರ ಬಳಗದ ಎರಡನೇ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷೆ ಡಾ ಆರ್‌.ಕೆ. ಸರೋಜ, ಡಾ.ವೆಂಕಟಾಚಲಪತಿ, ಡಾ.ಪ್ರಸಾದ್ ಇದ್ದರು.

ಇದೇ ಸಂದರ್ಭದಲ್ಲಿ 2019-20 ಮತ್ತು 20-21ನೇ ಸಾಲಿನ ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿಗಳನ್ನು ಡಾ. ಎಚ್. ಎಸ್. ಅನುಪಮಾ, ಡಾ. ಎಚ್.ಎಸ್. ಮೋಹನ್, ಡಾ. ಶಶಿಕಲಾ ಕೃಷ್ಣಮೂರ್ತಿ ಮತ್ತು ಡಾ. ವಿನೋದ ಕುಲಕರ್ಣಿ ಅವರಿಗೆ ಪ್ರದಾನ ಮಾಡಲಾಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಎಂ. ಜಯಕರ, ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಶಾಖೆಯ ಅಧ್ಯಕ್ಷ ಡಾ. ಎಂ. ವೆಂಕಟಾಚಲಪತಿ, ಐಎಂಎ–ಕೆಎಸ್‌ಬಿ ಕನ್ನಡ ವೈದ್ಯ ಬರಹಗಾರರ ಬಳಗದ ಅಧ್ಯಕ್ಷ ಡಾ. ಅಣ್ಣಯ್ಯ ಕುಲಾಲ್ ಎಂ. ಉಳ್ತೂರು, ಐಎಂಎ ರಾಜ್ಯ ಶಾಖೆಯ ಗೌರವ ರಾಜ್ಯ ಕಾರ್ಯದರ್ಶಿ ಡಾ. ಎಸ್. ಎಂ. ಪ್ರಸಾದ್, ಡಾ. ಲಕ್ಷ್ಮೀಪತಿ ಬಾಬು ಇದ್ದರು.

ಸಮ್ಮೇಳನದ ಅಂಗವಾಗಿ ವೈದ್ಯಕೀಯ ಸಾಹಿತ್ಯದ ವಿವಿಧ ಮಜಲುಗಳು ಕುರಿತಂತೆ ಗೋಷ್ಠಿಗಳು ನಡೆದವು.

‘ಅಲ್ಪಸಂಖ್ಯಾತರು ಜೆಡಿಎಸ್ ಮೇಲೆ ನಂಬಿಕೆ ಇಡಿ’

ರಾಮನಗರ: ಕಾಂಗ್ರೆಸ್ ಸೋಲಿಸುವ ಸಲುವಾಗಿಯೇ ಜೆಡಿಎಸ್ ಉಪಚುನಾವಣೆಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಹಾಕಲಾಗುತ್ತಿದೆ ಎಂಬುದು ಸುಳ್ಳು ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ಬಿಡದಿಯಲ್ಲಿನ ತೋಟದ ಮನೆಯಲ್ಲಿ ಭಾನುವಾರ ನಡೆದ ಅಲ್ಪಸಂಖ್ಯಾತ ಪ್ರತಿನಿಧಿಗಳು ಹಾಗೂ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದ ಅವರು, ‘ನಮ್ಮ ಸಮಾಜದವರನ್ನು ಸೋಲಿಸಲು ಬೇಕೆಂದೇ ಅಭ್ಯರ್ಥಿ ಹಾಕುತ್ತಿದ್ದೀರಿ ಎಂದು ಹಿಂದೊಮ್ಮೆ ಮುಸ್ಲಿಂ ಧರ್ಮಗುರುಗಳು ನನಗೆ ಕ್ಲಾಸ್ ತೆಗೆದುಕೊಂಡಿದ್ದರು. ಸಿ.ಎಂ. ಇಬ್ರಾಹಿಂ, ಜಮೀರ್ ಅಹಮ್ಮದ್‌ರಂತಹ ನಾಯಕರನ್ನು ಗೆಲ್ಲಿಸುತ್ತಾ ಬೆಳೆಸಿದ್ದು ನಾವು’ಎಂದರು.

ನಗರದಲ್ಲಿ ಇಂದು

ರಾಷ್ಟ್ರೀಯ ಶಿಶಿಕ್ಷು ಮೇಳ–2021
ಉದ್ಘಾಟನೆ: ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ, ಉಪಸ್ಥಿತಿ–ಕೇಂದ್ರ ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆಯ ರಾಜ್ಯ ಸಚಿವ ಎಂ.ರಾಜೀವ್ ಚಂದ್ರಶೇಖರ್ ಹಾಗೂ ಸಂಸದ ತೇಜಸ್ವಿ ಸೂರ್ಯ, ಅಧ್ಯಕ್ಷತೆ–ಚಿಕ್ಕಪೇಟೆ ಶಾಸಕ ಉದಯ್ ಬಿ.ಗರುಡಾಚಾರ್, ಪಾಲ್ಗೊಳ್ಳುವವರು–ಸೆಲ್ವಕುಮಾರ್, ಕೆ.ಹರೀಶ್‌ಕುಮಾರ್, ಎಸ್. ಯೋಗೇಶ್ವರ, ಆಯೋಜನೆ–ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸ್ಥಳ–ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ, ಹೊಸೂರು ರಸ್ತೆ, ಡೇರಿ ವೃತ್ತಬೆಳಿಗ್ಗೆ 10.

ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಿವನಗರ 1 ಮತ್ತು 8ನೇ ಮುಖ್ಯ ರಸ್ತೆ ಕೂಡುವ ಸ್ಥಳದಲ್ಲಿ ‘ಇಂಟಿಗ್ರೇಟೆಡ್ ಮೇಲ್ಸೇತುವೆ’
ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಅಧ್ಯಕ್ಷತೆ–ಶಾಸಕ ಎಸ್. ಸುರೇಶ್ ಕುಮಾರ್, ಆಯೋಜನೆ–ಬಿಬಿಎಂಪಿ, ಸ್ಥಳ–ವೆಸ್ಟ್ ಆಫ್ ಕಾರ್ಡ್ ರಸ್ತೆ–ಬೆಳಿಗ್ಗೆ 10.30.

ವರ್ಷದ ಲೇಖಕಿ ಅಂಕಿತ ಪುಸ್ತಕ ಪುರಸ್ಕಾರ: ಪ್ರಶಸ್ತಿ ಪ್ರದಾನ–ಸಾಹಿತಿ ಜಯಂತ ಕಾಯ್ಕಿಣಿ, ಅಭಿನಂದನಾ ನುಡಿ–ಲೇಖಕಿ ಎಲ್.ಜಿ.ಮೀರಾ, ಉಪಸ್ಥಿತಿ–ಪ್ರಕಾಶ್ ಕಂಬತ್ತಳ್ಳಿ, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಬಿ.ಎಂ.ಶ್ರೀ. ಪ್ರತಿಷ್ಠಾನ, ಎಂ.ವಿ.ಸೀ.ಸಭಾಂಗಣ, ಎನ್.ಆರ್. ಕಾಲೊನಿ ಸಂಜೆ 4.30.

ಪೊಲೀಸರಿಗೆ ಬೆದರಿಸಿದ ರೌಡಿಶೀಟರ್ ಬಂಧನ

ಪ್ರಜಾವಾಣಿ ವಾರ್ತೆ

ಮೆಂಟಲ್ ಮಂಜ

ಬೆಂಗಳೂರು: ‘ಎಸ್‌ಪಿ, ಡಿಎಸ್‌ಪಿ ಸರ್. ಕುಳ್ಳ ವೆಂಕಟೇಶ್‌ನ ಕೊಲೆ ಮಾಡಿದ್ದು ನಾನು. ಅನಿಲ್ ಅಲ್ಲ. ಅವ್ನು ಒಳ್ಳೆಯವ್ನು. ಅವ್ನನ್ನ ವರ್ಕ್ ಮಾಡ್ತಿರೋರು ನೀವೇ ಅಲ್ವಾ. ಅವ್ನನ್ನ ಬಿಟ್ಬಿಡಿ. ತಾಕತ್ತಿದ್ರೆ ನನ್ ಮೈ ಮುಟ್ಟಿ. ಇಡೀ ಬೆಂಗಳೂರನ್ನೇ ಸರ್ವನಾಶ ಮಾಡಿ ಬಿಡ್ತೀನಿ. ಏನ್ ಅಂದ್ಕೊಂಡಿದಿಯಾ ನನ್ ಬಗ್ಗೆ’ ಎಂದು ರೌಡಿಶೀಟರ್ ಮಂಜುನಾಥ ಯಾನೆ ಮೆಂಟಲ್ ಮಂಜ ಎಂಬಾತ ಪೊಲೀಸ್ ಅಧಿಕಾರಿಗಳನ್ನು ಬೆದರಿಸಿದ್ದಾನೆ.

ಈ ಕುರಿತ ಆಡಿಯೊ ಈಗ ಎಲ್ಲೆಡೆ ಹರಿದಾಡುತ್ತಿದೆ. ಆಡಿಯೊ ಬಹಿರಂಗದ ಬೆನ್ನಲ್ಲೇ ಕಾರ್ಯಪ್ರವೃತ್ತರಾದ ಪೊಲೀಸರು ತಮಿಳುನಾಡಿನಲ್ಲಿ ಮಂಜನನ್ನು ಬಂಧಿಸಿದ್ದಾರೆ.

‘ಅವಲಹಳ್ಳಿ ಠಾಣೆ ವ್ಯಾಪ್ತಿಯ ಅಂಗಡಿಯೊಂದರ ಎದುರು ಇತ್ತೀಚೆಗೆ ಅನಿಲ ಮತ್ತು ಆತನ ಸಹಚರರು ರೌಡಿಶೀಟರ್ ಕುಳ್ಳ ವೆಂಕಟೇಶ್‌ನನ್ನು ಕೊಲೆ ಮಾಡಿ ಆಟೊದಲ್ಲಿ ಪರಾರಿಯಾಗಿದ್ದರು. ಆ ಕೊಲೆಗೂ ಮಂಜನಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿತ್ತು. ತಾನು ಡಾನ್ ಎನಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಮಂಜ ಆಡಿಯೊ ಮಾಡಿ ಹರಿಬಿಟ್ಟಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಆಡಿಯೊದಲ್ಲಿ ಮಂಜ ಹೇಳಿದ್ದೇನು

‘ಓ ಡಿಎಸ್‌ಪಿ ಸರ್. ಕುಳ್ಳ ವೆಂಕಟೇಶನ್ನ ಮೊದಲು ಹೊಡೆದಿದ್ದು ನಾನು. ಅನಿಲ್ ವಿಡಿಯೊದಲ್ಲಿ ಕಾಣಿಸುತ್ತಿದ್ದಾನಷ್ಟೇ. ಅವ್ನನ್ನ ಹೊಡೆದು ಬಂದ ಮೇಲೆ ತಲೆ ತಿರುಗಿ ಬಿದ್ದಿದ್ದೆ. ಅದು ಗೊತ್ತಾ ನಿನಗೆ. ಅನಿಲ್ ಒಳ್ಳೆಯವ್ನು, ನೀನು ತಿಕ್ಕಲು. ಡಿಎಸ್‌ಪಿ ಅಂತೆ’.

‘ನಾನು ನ್ಯಾಯವಾಗಿದ್ದೀನಿ. ನ್ಯಾಯವಾಗೇ ಹೋಗ್ತೀನಿ. ಕುಳ್ಳ ವೆಂಕಟೇಶ್ ಯಾರು. ಅವನು ಸುಮ್ನೆ ಇರ್ಬೇಕು. ಇರೊ ಜಮೀನಿಗೆಲ್ಲಾ ಬರಕೂಡದು ಅವನು. ನಂದು ನಂದು ನಂದು ಅಂದ್ರೆ, ದುಡ್ ಹಾಕಿದ್ದ ನಾವು ಏನ್ ಮಾಡ್ಬೇಕು. ಓಹೋ ಡಿಎಸ್‌ಪಿ, ಎಸ್‌ಪಿ. ಕಾಂಜಿಪಿಂಜಿ ಜನಗಳು ನೀವು. ಖಾಕಿ ಬಟ್ಟೆ ಮೈಮೇಲೆ ಇದೆ ಅಂತ ದುರಂಹಾರ ಪಡಬೇಡ. ನ್ಯಾಯವಾಗಿ ನೋಡಲೇ’. ‘ಮುಂದೆ ಬೆಂಗಳೂರಿಗೆ ಅಂಡರ್ ವರ್ಲ್ಡ್ ಡಾನ್ ನಾನು. ಆಗೋದು ಕನ್ಫರ್ಮ್ಮ್. ಆಗೇ ಆಗ್ತೀನಿ. ಆಗೇ ತೀರ್ತಿನಿ. ತಾಕತ್ತಿದ್ರೆ ಮುಟ್ಕೊ ನನ್ ಮೈಯನ್ನಾ’.

ವಾಕಿ ಟಾಕಿ ಹುಡುಕಿಕೊಡಿ; ಠಾಣೆಗೆ ಇನ್‌ಸ್ಪೆಕ್ಟರ್ ದೂರು!

ಬೆಂಗಳೂರು: ಸೆಪ್ಟೆಂಬರ್ 27ರಂದು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸಿದ್ದ ಭಾರತ್ ಬಂದ್ ವೇಳೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಎಸ್‌.ಜೆ.ಪಾರ್ಕ್ ಠಾಣೆಯ ಇನ್‌ಸ್ಪೆಕ್ಟರ್ ಶಿವಕುಮಾರ್ ಅವರ ವಾಕಿ ಟಾಕಿ ಕಳುವಾಗಿದೆ. ಇದನ್ನು ಹುಡುಕಿಕೊಡುವಂತೆ ಅವರು ತಮ್ಮ ಠಾಣೆಗೇ ದೂರು ನೀಡಿದ್ದಾರೆ!

‘ಪುರಭವನ ಮುಂಭಾಗ ವಿವಿಧ ಸಂಘಟನೆಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಬಂದೋಬಸ್ತ್‌ಗೆ ನಿಯೋಜನೆಯಾಗಿದ್ದ ಸಿಬ್ಬಂದಿಗೆ ಕೆಲಸ ಹಂಚಿಕೆ ಮಾಡಿ ರಸ್ತೆ ತಡೆ ನಡೆಸಲು ಮುಂದಾಗಿದ್ದ ಪ್ರತಿಭಟನಕಾರರನ್ನು ಚದುರಿಸಲು ಮುಂದಾಗಿದ್ದೆ. ನೂಕು ನುಗ್ಗಲಿನ ವೇಳೆ ನನಗೆ ಅರಿವಿಲ್ಲದಂತೆಯೇ ವಾಕಿ ಟಾಕಿ ಬಿದ್ದು ಹೋಗಿದೆ. ಕಂಟ್ರೋಲ್ ರೂಂಗೆ ಕರೆ ಮಾಡಲು ಮುಂದಾದಾಗ ಪ್ಯಾಂಟ್ ಬೆಲ್ಟ್‌ಗೆ ಸಿಕ್ಕಿಸಿಕೊಂಡಿದ್ದ ವಾಕಿ ಟಾಕಿ ಬಿದ್ದು ಹೋಗಿರುವುದು ಗೊತ್ತಾಯಿತು. ಕೂಡಲೇ ಸಿಬ್ಬಂದಿಯ ನೆರವಿನೊಂದಿಗೆ ಸ್ಥಳದಲ್ಲೆಲ್ಲಾ ಹುಡುಕಾಡಿದರೂ ಸಿಗಲಿಲ್ಲ ಎಂದು ದೂರಿನಲ್ಲಿ ವಿವರಿಸಲಾಗಿದೆ’

‘ವಾಕಿ ಟಾಕಿ ಕಳುವಾಗಿರುವ ಬಗ್ಗೆ ಕೂಡಲೇ ಕಂಟ್ರೋಲ್ ರೂಂಗೆ ಮಾಹಿತಿ ನೀಡಿದ್ದೇನೆ. ಯಾರೋ ಕಿಡಿಗೇಡಿಗಳು ರಸ್ತೆಯಲ್ಲಿ ಬಿದ್ದ ವಾಕಿ ಟಾಕಿಯನ್ನು ತೆಗೆದುಕೊಂಡಿರಬೇಕು. ಅದನ್ನು ತಮಗೆ ಮರಳಿಸದೆ ದುರುದ್ದೇಶದಿಂದಲೇ ಅದನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದೂ ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಬಸ್ ಡಿಕ್ಕಿ: ಯುವತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದ್ದರಿಂದ ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಚೈತ್ರಾ (20) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿನೋಬಾನಗರ ನಿವಾಸಿಯಾಗಿರುವ ಚೈತ್ರಾ, ಗಾರ್ಮೆಂಟ್ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಶನಿವಾರ ಸಂಜೆ ಕೆಲಸ ಮುಗಿಸಿ ಸಂಬಂಧಿ ವಿಜಯ್ ಜೊತೆ ಬೈಕ್‌ನಲ್ಲಿ ಲಾಲ್‌ಬಾಗ್ ಮುಖ್ಯ ರಸ್ತೆಯ ಮೂಲಕ ಮನೆಗೆ ಹೊರಟಿದ್ದರು. ಈ ವೇಳೆ ಹಿಂಬದಿಯಿಂದ ಬಂದ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಚೈತ್ರಾ ಅವರನ್ನು ಕೂಡಲೇ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ರಕ್ತಸ್ರಾವವಾಗಿದ್ದರಿಂದ ಅವರು ರಾತ್ರಿ 11 ಗಂಟೆಯ ಸುಮಾರಿಗೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಬೈಕ್ ಚಾಲಕ ವಿಜಯ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ತನಿಖೆ ಮುಂದುವರಿದಿದ್ದು ಚಾಲಕನನ್ನು ಕಸ್ಟಡಿಗೆ ಪಡೆದು ಮಾಹಿತಿ ಕಲೆಹಾಕಲಾಗುತ್ತದೆ’ ಎಂದು ಹೇಳಿದ್ದಾರೆ.

ಬೀಗರ ಜಗಳ: ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಬೀಗರ ನಡುವೆ ನಡೆದ ಜಗಳದಲ್ಲಿ ಮಹಮ್ಮದ್ ಮಹಮೂದ್ (48) ಎಂಬುವರು ಕೊಲೆಯಾಗಿದ್ದಾರೆ. ಆರೋಪಿ ನಜೀರ್ ಅಹಮ್ಮದ್‌ನನ್ನು (53) ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

‘ಸಿದ್ಧಾರ್ಥ ಲೇಔಟ್ ನಿವಾಸಿ ಮಹಮೂದ್, ಮೆಕ್ಯಾನಿಕ್ ಕೆಲಸ ಮಾಡಿಕೊಂಡಿದ್ದರು. ಗೆದ್ದಲಹಳ್ಳಿಯಲ್ಲಿ ಗ್ಯಾರೇಜ್‌ವೊಂದನ್ನು ಇಟ್ಟುಕೊಂಡಿದ್ದರು. ತಮ್ಮ ಮಗಳನ್ನು ನಜೀರ್ ಮಗನಿಗೆ ವಿವಾಹ ಮಾಡಿಕೊಟ್ಟಿದ್ದರು. ಶನಿವಾರ ರಾತ್ರಿ ಮಹಮೂದ್ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದರು. 8.30ರ ಸುಮಾರಿಗೆ ಅಲ್ಲಿಗೆ ಹೋಗಿದ್ದ ನಜೀರ್, ಮಹಮೂದ್ ಜೊತೆ ಜಗಳ ತೆಗೆದಿದ್ದ. ಇಬ್ಬರ ನಡುವಣ ಗಲಾಟೆ ವಿಕೋಪಕ್ಕೆ ತಿರುಗಿತ್ತು. ಕುಪಿತಗೊಂಡ ನಜೀರ್, ದೊಣ್ಣೆಯಿಂದ ಮಹಮೂದ್ ತಲೆಗೆ ಬಲವಾಗಿ ಹೊಡೆದಿದ್ದ. ಸ್ಥಳದಲ್ಲೇ ಕುಸಿದು ಬಿದ್ದಿದ್ದ ಅವರನ್ನು ಕೂಡಲೇ ಹತ್ತಿರದ ಆಸ್ಪತ್ರೆಗೆ ಸಾಗಿಸಲಾಗಿತ್ತು. ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ವಿಷಯ ಖಚಿತಪಡಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಎರಡೂ ಕುಟುಂಬಗಳ ನಡುವೆ ಮೊದಲಿನಿಂದಲೂ ಸಣ್ಣ ಪುಟ್ಟ ವಿಚಾರಕ್ಕೆ ಜಗಳ ನಡೆಯುತ್ತಿತ್ತು. ಶನಿವಾರವೂ ಇಬ್ಬರ ನಡುವೆ ಪರಸ್ಪರ ವಾಗ್ವಾದ ನಡೆದಿದೆ. ನಜೀರ್ ಕೋಪಗೊಂಡು ದೊಣ್ಣೆಯಿಂದ ಹೊಡೆದಿದ್ದಾನೆ. ಆತನ ವಿಚಾರಣೆ ಪ್ರಗತಿಯಲ್ಲಿದ್ದು ಮತ್ತಷ್ಟು ಮಾಹಿತಿಗಳನ್ನು ಕಲೆಹಾಕಲಾಗುತ್ತದೆ’ ಎಂದರು.

ಕಾಣೆಯಾಗಿದ್ದಾರೆ

ಶ್ರೀಮತಿ ಶಶಿಕಲಾ

ಇವರು ದಿನಾಂಕ : 04–10–2019ರಂದು ಮೈಸೂರಿನಿಂದ ಕಾಣೆಯಾಗಿದ್ದಾರೆ. 72 ವರ್ಷ, ಇವರು ಮನೆಯಿಂದ ಹೊರಗೆ ಹೋದವರು ಇಲ್ಲಿಯವರೆಗೂ ವಾಪಸ್ಸು ಮನೆಗೆ ಬಂದಿರುವುದಿಲ್ಲ. ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ಇವರು ಪತ್ತೆಯಾದಲ್ಲಿ ಸಂಪರ್ಕಿಸಿ :

ದೂರವಾಣಿ : 080 - 23406381
ಮೊ : 9901815333, 9449836380

ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು

ಮೂಡಿಗೆರೆ ಶಾಸಕರ ಕಾರು ಡಿಕ್ಕಿ: ಮಹಿಳೆ ಸಾವು

ಬೇಲೂರು: ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರ ಕಾರು ಡಿಕ್ಕಿ ಹೊಡೆದು ಮಹಿಳೆಯೊಬ್ಬರು ಬೇಲೂರು ಗೆಂಡೇಹಳ್ಳಿ ರಸ್ತೆಯಲ್ಲಿರುವ ಹನುಮಂತನಗರದಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಹೂವಮ್ಮ (58) ಮೃತಪಟ್ಟವರು. ಮೊಮ್ಮಗನೊಂದಿಗೆ ದ್ವಿಚಕ್ರ ವಾಹನದಲ್ಲಿ ಬಂದಿಳಿದು, ಮನೆ ಕಡೆಗೆ ತೆರಳುತ್ತಿದ್ದಾಗ ಗೆಂಡೇಹಳ್ಳಿ ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು, ಚಿಕಿತ್ಸೆಗೆ / ಸ್ಪಂದಿಸಲಿಲ್ಲ.

'ಅಪಘಾತವಾಗಿದ್ದರೂ ಚಾಲಕ ಕಾರು ನಿಲ್ಲಿಸದೆ ಪೊಲೀಸ್ ಠಾಣೆಗೆ ಹೋಗಿದ್ದಾರೆ. ಶಾಸಕರು ಕಾರಲ್ಲಿ ಇದ್ದರೂ, ಇರಲಿಲ್ಲ ಎಂಬುದಾಗಿ ಸುಳ್ಳು ಹೇಳುತ್ತಿದ್ದಾರೆ' ಎಂದು ನಿವಾಸಿಗಳು ಆರೋಪಿಸಿದರು.

'ಕಾರಿನಲ್ಲಿ ಚಾಲಕ ಮಾತ್ರ ಇದ್ದು, ಆತನ ವಿರುದ್ಧ ಪ್ರಕರಣ ದಾಖಲು ಮಾಡಲಾಗುತ್ತಿದೆ' ಎಂದು ಬೇಲೂರು ಠಾಣೆ ಇನ್‌ಸ್ಪೆಕ್ಟರ್ ಯೋಗೀಶ್ ತಿಳಿಸಿದರು.

ಶಾಸಕರು ಇರಲಿಲ್ಲ: 'ಅಪಘಾತವಾದಾಗ ಕಾರಿನಲ್ಲಿ ಶಾಸಕರು ಇರಲಿಲ್ಲ. ಚಾಲಕ ಕಾರನ್ನು ಸರ್ವಿಸ್ ಮಾಡಿಸಲು ತೆಗೆದುಕೊಂಡು ಹೋಗುವಾಗ ಅಪಘಾತ ನಡೆದಿದೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುವುದು' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್.ನಂದಿನಿ ಹೇಳಿದರು.

2 ವರ್ಷಗಳಿಂದ ಅನುದಾನವಿಲ್ಲ, 6 ತಿಂಗಳಿಂದ ನೌಕರರಿಗೆ ವೇತನವಿಲ್ಲ

ಅತಂತ್ರ ಸ್ಥಿತಿಯಲ್ಲಿ ಸಂಗೀತ ವಿ.ವಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಯುಜಿಸಿ ಪೂರ್ಣ ಮಾನ್ಯತೆ ಇಲ್ಲ
- 31 ಬೋಧಕೇತರ ಸಿಬ್ಬಂದಿ ಬಿಡುಗಡೆಗೆ ಸೂಚನೆ
- ವೇತನಕ್ಕೆ ವಾರ್ಷಿಕ ₹ 2.5 ಕೋಟಿ ಖರ್ಚು

ಪ್ರಜಾವಾಣಿ ವಿಶೇಷ

ಮೈಸೂರು: ಇಲ್ಲಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ 11 ವರ್ಷಗಳಿಂದ ಕಾಯಂ ಬೋಧಕರಿಲ್ಲದೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. 2 ವರ್ಷಗಳಿಂದ ಅನುದಾನವಿಲ್ಲ. ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ಗುತ್ತಿಗೆ ನೌಕರರಿಗೆ ಆರು ತಿಂಗಳಿಂದ ವೇತನವನ್ನೂ ನೀಡಿಲ್ಲ.

ತಾತ್ಕಾಲಿಕ 21 ಹಾಗೂ ಹೊರಗುತ್ತಿಗೆಯ 10 ಬೋಧಕೇತರ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಉನ್ನತ ಶಿಕ್ಷಣ ಇಲಾಖೆ ಸೂಚಿಸಿದ್ದು, ವಿಶ್ವವಿದ್ಯಾಲಯಕ್ಕೆ ಈಗ ಅಳಿವು ಉಳಿವಿನ ಪ್ರಶ್ನೆ ಎದುರಾಗಿದೆ.

ಕುಲಪತಿ ಹಾಗೂ ಹಣಕಾಸು ಅಧಿಕಾರಿ ಹೊರತುಪಡಿಸಿದರೆ ಉಳಿದವರೆಲ್ಲಾ ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ನೌಕರರು. ಸದ್ಯ 31 ಪೂರ್ಣಾವಧಿ ಅತಿಥಿ ಉಪನ್ಯಾಸಕರಿದ್ದಾರೆ. ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು, ರಂಗಾಯಣ ಡಿಪ್ಲೊಮಾ ವಿದ್ಯಾರ್ಥಿಗಳು ಸೇರಿ 244 ಮಂದಿ ಇದ್ದಾರೆ.

'ವಿಶ್ವವಿದ್ಯಾಲಯಕ್ಕೆ ಪೂರ್ಣ ಮಾನ್ಯತೆ ಸಿಕ್ಕಿಲ್ಲ. ಸಿಬ್ಬಂದಿಗೆ ಯುಜಿಸಿ ವೇತನ, ಸೌಲಭ್ಯಗಳು ಸಿಗಬೇಕಾದರೆ '12 ಬಿ' ಮಾನ್ಯತೆ ಅಗತ್ಯವಿದೆ. ಉತ್ತಮ ಸೌಲಭ್ಯ ನೀಡಿ, ಕಾಯಂ ಬೋಧಕರನ್ನು ನೇಮಿಸಿದರೆ ಅನುದಾನ ಪಡೆಯಬಹುದು' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ 'ಪ್ರಜಾವಾಣಿ'ಗೆ ತಿಳಿಸಿದರು.

'ಎರಡು ವರ್ಷಗಳಿಂದ ಸರ್ಕಾರದಿಂದ ಅನುದಾನ ಬಂದಿಲ್ಲ. ಹಿಂದೆ ವಾರ್ಷಿಕ ₹ 3 ಕೋಟಿ ಲಭ್ಯವಾಗುತ್ತಿತ್ತು. ವೇತನಕ್ಕೆಂದೇ ₹ 2.5 ಕೋಟಿ ಖರ್ಚಾಗುತ್ತದೆ. ವಿಶ್ವವಿದ್ಯಾಲಯ ಬಳಿ ₹ 12 ಕೋಟಿ ನಿಶ್ಚಿತ ಠೇವಣಿ ಇದೆ. ಅದನ್ನು ಅಭಿವೃದ್ಧಿಗಷ್ಟೇ ಬಳಸಬೇಕು. ಹೀಗಾಗಿ, 6 ತಿಂಗಳಿಂದ ವೇತನ ಪಾವತಿಸಲು ಸಾಧ್ಯವಾಗಿಲ್ಲ. ತಾತ್ಕಾಲಿಕ ಹಾಗೂ ಹೊರ ಗುತ್ತಿಗೆ ನೌಕರರನ್ನು ಬಿಡುಗಡೆಗೊಳಿಸಲು ನಿರ್ದೇಶನ ಬಂದಿದೆ. ಉನ್ನತ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಕ್ರಮ ವಹಿಸಲು ಸಿಂಡಿಕೇಟ್ ಸಭೆ ನಿರ್ಣಯಿಸಿದೆ' ಎಂದರು.

'2012ರಲ್ಲಿ 15 ಹುದ್ದೆಗಳು ಮಂಜೂರಾಗಿತ್ತು. ಹಿಂದಿನವರ ನಿರ್ಲಕ್ಷ್ಯದಿಂದ ನೇಮಕಾತಿ ಪ್ರಕ್ರಿಯೆ ನಡೆಯಲಿಲ್ಲ. ಈಗ ಪ್ರಯತ್ನಗಳು ನಡೆದಿವೆ' ಎಂದರು.

ಸಂಗೀತ ವಿಶ್ವವಿದ್ಯಾಲಯ

ಶಾಲೆಯಲ್ಲೇ ವಿಶ್ವವಿದ್ಯಾಲಯ!

2009ರಲ್ಲಿ ಆರಂಭವಾದ ಸಂಗೀತ ವಿಶ್ವವಿದ್ಯಾಲಯಕ್ಕೆ ಸ್ವಂತ ಜಾಗ, ಕಟ್ಟಡವಿಲ್ಲ. ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿದ್ದು, ಅದನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆದಿದೆ.

'ಸಾರ್ವಜನಿಕ ಶಿಕ್ಷಣ ಇಲಾಖೆ ಸುಪರ್ದಿಯಲ್ಲಿರುವ ಜಾಗವನ್ನು ಉನ್ನತ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲು ಮನವಿ ಮಾಡಲಾಗಿದೆ. ಸಾತಗಳ್ಳಿ ಬಳಿ 8 ಎಕರೆ ಜಾಗವನ್ನು 2012ರಲ್ಲಿ ಸರ್ಕಾರ ಮಂಜೂರು ಮಾಡಿತ್ತು. ಆ ಜಾಗ ಸೂಕ್ತವಾಗಿಲ್ಲದ ಕಾರಣ ನಗರಾಭಿವೃದ್ಧಿ ಪ್ರಾಧಿಕಾರವು ಬದಲಿ ವ್ಯವಸ್ಥೆ ಮಾಡಿದ್ದು, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿ ಏಳು ಎಕರೆ ಜಾಗ ನೀಡಿದೆ' ಎಂದು ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ತಿಳಿಸಿದರು.

ವಿಶ್ವವಿದ್ಯಾಲಯ ಮುಚ್ಚುವ ಸ್ಥಿತಿಯಲ್ಲಂತೂ ಇಲ್ಲ. ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರಿದ್ದರೆ ಸಾಕು, ವಿಶ್ವವಿದ್ಯಾಲಯವನ್ನು ನಡೆಸಬಹುದು.
ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಪತಿ, ಸಂಗೀತ ವಿಶ್ವವಿದ್ಯಾಲಯ

ಯುಜಿಸಿ ನಿಯಮಗಳ ಪ್ರಕಾರ ಅತಿಥಿ ಶಿಕ್ಷಕರನ್ನು ನೇಮಿಸಿ ತರಗತಿ ನಡೆಸಬಹುದು. ವಿಶ್ವವಿದ್ಯಾಲಯ ಮುಚ್ಚುವ ವಿಚಾರವೇ ಉದ್ಭವಿಸದು
ಪ್ರೊ.ಡಿ.ಶಿವಲಿಂಗಯ್ಯ, ಸಿಂಡಿಕೇಟ್ ಸದಸ್ಯ, ಸಂಗೀತ ವಿಶ್ವವಿದ್ಯಾಲಯ

ಸುದ್ದಿ 2 ನಿಮಿಷ

ಕೊಲೆಗಡುಕ ಸರ್ಕಾರ: ಎಚ್‌ಡಿಕೆ ಟೀಕೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟಿದ್ದ ಬಿಎಂಟಿಸಿ ನೌಕರನ ಪತ್ನಿ ಮತ್ತು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳಲು ರಾಜ್ಯ ಸರ್ಕಾರವೇ ಹೊಣೆ. ಇದು ಕೊಲೆಗಡುಕ ಸರ್ಕಾರ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಇದೊಂದು ಹೃದಯ ವಿದ್ರಾವಕ ಘಟನೆ. ನಿಗದಿತ ಸಮಯದೊಳಗೆ ಆ ಕುಟುಂಬಕ್ಕೆ ಪರಿಹಾರ ಮತ್ತು ಅನುಕಂಪದ ಆಧಾರದ ಮೇಲೆ ನೌಕರಿ ನೀಡಿದ್ದರೆ ಮೂರು ಅಮೂಲ್ಯ ಜೀವಗಳನ್ನು ಉಳಿಸಬಹುದಿತ್ತು' ಎಂದಿದ್ದಾರೆ.

'ಸರ್ಕಾರ ಎಲ್ಲ ದುಂದು ವೆಚ್ಚ, ಲೂಟಿ ನಿಲ್ಲಿಸಿ ಇಂಥವರ ನೆರವಿಗೆ ಧಾವಿಸಬೇಕಿತ್ತು. ಈ ರೀತಿಯ ಪ್ರಕರಣಗಳ ಇತ್ಯರ್ಥಕ್ಕೆ ಆದ್ಯತೆ ನೀಡಬೇಕಿತ್ತು. ಈ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅಧಿಕಾರಿಗಳ ಹೊಣೆಗೇಡಿತನ ಎದ್ದು ಕಾಣುತ್ತಿದೆ' ಎಂದು ಹೇಳಿದ್ದಾರೆ.

'ಘಟನೆಗೆ ಕಾರಣವಾದ ಎಲ್ಲ ಅಧಿಕಾರಿಗಳನ್ನು ತಕ್ಷಣ ಅಮಾನತು ಮಾಡಬೇಕು. ಸ್ವತಃ ಮುಖ್ಯಮಂತ್ರಿಯವರೇ ಗಮನಹರಿಸಿ, ಕೋವಿಡ್‌ನಿಂದ ಮೃತಪಟ್ಟಿರುವ ಎಲ್ಲ ಸಾರಿಗೆ ನೌಕರರ ಕುಟುಂಬಗಳಿಗೆ ನೆರವಾಗಬೇಕು. ಮುಂದೆ ಇಂಥ ಅನಾಹುತಗಳು ನಡೆಯದಂತೆ ಎಚ್ಚರ ವಹಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

'ಉದ್ಯಮ ಸ್ಥಾಪಿಸದ ಸಂಸ್ಥೆಗಳ ಜಮೀನು ಮಂಜೂರಾತಿ ರದ್ದು'

ಬಳ್ಳಾರಿ: 'ಜಮೀನು ಪಡೆದು ಅನೇಕ ವರ್ಷಗಳಾದರೂ ಉದ್ಯಮ ಸ್ಥಾಪಿಸದ ಸಂಸ್ಥೆಗಳ ಭೂಮಿ ಮಂಜೂರಾತಿ ರದ್ದು ಮಾಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಭಾನುವಾರ ಮಾತನಾಡಿದ ಬೊಮ್ಮಾಯಿ, 'ಬಳ್ಳಾರಿ ಭಾಗದಲ್ಲಿ ಕೆಲವರು 10–12 ವರ್ಷಗಳ ಹಿಂದೆ ಬೃಹತ್ ಉಕ್ಕು ಮತ್ತು ಇಂಧನ ವಲಯಕ್ಕೆ ಜಮೀನು ಹಾಗೂ ನೀರು ಹಂಚಿಕೆ ಮಾಡಿಸಿಕೊಂಡಿದ್ದರೂ ಕೈಗಾರಿಕೆಗಳನ್ನು ಸ್ಥಾಪಿಸಿಲ್ಲ. ಇಂಥವರ ಅಲಾಟ್‌ಮೆಂಟ್ ರದ್ದುಪಡಿಸಲಾಗುವುದು' ಎಂದು ತಿಳಿಸಿದರು.

'ವಿಶೇಷವಾಗಿ, ಈ ಭಾಗದಲ್ಲಿ ಲ್ಯಾಂಡ್ ಲಾಕ್ ಆಗಿದೆ. ಲ್ಯಾಂಡ್ ಲಾಕ್ ಬಿಡಿಸುವುದು ನಮ್ಮ ಸರ್ಕಾರದ ಉದ್ದೇಶ. ನಿಜವಾಗಿ ಬಂಡವಾಳ ಹೂಡುವವರಿಗೆ, ಉದ್ಯೋಗ ಸೃಷ್ಟಿಸುವವರಿಗೆ ಆದ್ಯತೆ ಕೊಡಬೇಕು ಎಂಬುದು ನಮ್ಮ ನೀತಿ' ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

'ಕೈಗಾರಿಕೆ ಸ್ಥಾಪಿಸದ ಜಮೀನನ್ನು ರೈತರಿಗೆ ವಾಪಸ್ ಕೊಡುವ ಕುರಿತು ಪರಿಶೀಲಿಸಲಾಗುವುದು. ಈಗ ಏನೂ ಹೇಳುವುದಿಲ್ಲ. ಯಾವ ಉದ್ದೇಶಕ್ಕೆ ಜಮೀನು ನೀಡಲಾಗಿದೆಯೋ ಅದು ಆಗಬೇಕು' ಎಂದು ಬೊಮ್ಮಾಯಿ ಖಚಿತಪಡಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.68	9,444	6,213
ಹಾರಂಗಿ	2,859	2,857.82	2,144	1,250
ಕಬಿನಿ	2284.00	2,279.84	8,418	3,500
ಹೇಮಾವತಿ	2,922	2,913.58	3,893	4,962
ಲಿಂಗನಮಕ್ಕಿ	1,819	1,815.85	4590	-
ಸೂಪಾ (ಮೀ)	564	556.62	3,479	3,036
ಮಾಣಿ	594	587.68	1,562	-
ತುಂಗಭದ್ರಾ	1,633	1,632.60	16,250	10,497
ಮಲಪ್ರಭಾ	2079.5	2,078.80	1,694	1,694
ಘಟಪ್ರಭಾ	2175	2,175.00	3,520	3,520
ಭದ್ರಾ	186	184.8	2,242	2844
ಆಲಮಟ್ಟಿ (ಮೀ)	519.6	519.60	13,366	13,366
ನಾರಾಯಣಪುರ (ಮೀ)	492.25	492.12	14,000	23,600

* ನೆಲಮಟ್ಟದಿಂದ

ಬಂಟ್ವಾಳ: ಸಿಡಿಲು ಸಹಿತ ಗಾಳಿ, ಮಳೆಗೆ ಅಪಾರ ನಷ್ಟ

86 ಮನೆ, ಅಡಿಕೆ, ರಬ್ಬರ್ ಗಿಡಕ್ಕೆ ಹಾನಿ

ಪ್ರಜಾವಾಣಿ ವಾರ್ತೆ

ಬಂಟ್ವಾಳ: ಇಲ್ಲಿನ ಕಾವಳ ಮೂಡೂರು, ಬಡಗ ಕಜೆಕಾರು ಮತ್ತಿತರ ಕಡೆಗಳಲ್ಲಿ ಶನಿವಾರ ರಾತ್ರಿ ಸುರಿದ ಗುಡುಗು ಸಹಿತ ಗಾಳಿ ಮಳೆಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ತಾಲ್ಲೂಕಿನಲ್ಲಿ ಒಟ್ಟು 86 ಮನೆಗಳಿಗೆ ಹಾನಿಯಾಗಿದೆ.

100ಕ್ಕೂ ಅಧಿಕ ಅಡಿಕೆ ಮರಗಳು, 25ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಬಡಗ ಕಜೆಕಾರು ನಿವಾಸಿ ರವಿ ಸಾಲ್ಯಾನ್ ಎಂಬುವವರಿಗೆ ಸೇರಿದ್ದ 200 ರಬ್ಬರ್ ಗಿಡಗಳಿಗೆ ಹಾನಿ ಆಗಿದೆ.

ನರಿಕೊಂಬು ಗ್ರಾಮದ ನಾಯಿಲ ನಿವಾಸಿ ನಳಿನಿ ಉಮೇಶ ಅವರ ಮನೆಯ ಆವರಣ ಗೋಡೆಗೆ ಸಿಡಿಲು ಬಡಿದು ಹಾನಿ ಉಂಟಾಗಿದೆ. ಉಳಿ ಗ್ರಾಮದ ಗುಂಡಿದೊಟ್ಟು ಗಣೇಶ ಪೂಜಾರಿ ಅವರ ಮನೆ ಚಾವಣಿಗೆ ಹಾನಿ ಉಂಟಾಗಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹಾಸನ ನಗರದ ಎಂ.ಜಿ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದು ಜಖಂಗೊಂಡಿದೆ

ಧಾರಾಕಾರ ಮಳೆ: ಹಾಸನ ನಗರದಲ್ಲಿ ಭಾನುವಾರ ಮಧ್ಯಾಹ್ನ ಧಾರಾಕಾರ ಮಳೆಯಾಗಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಎಂ.ಜಿ.ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಬೃಹತ್ ಮರ ಉರುಳಿದ್ದು, ಕಾರು ಜಖಂಗೊಂಡಿದೆ. ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೊಯ್ಸಳ ನಗರದಲ್ಲಿ ಅನೇಕ ಮನೆಗಳ ಒಳಗೆ ಮಳೆ ನೀರು ನುಗ್ಗಿತು.

'ಜಾತಿಗಣತಿ ವರದಿ ಸಿದ್ದರಾಮಯ್ಯ ಜಾರಿಗೊಳಿಸಿಲ್ಲ ಏಕೆ?'

ಮೈಸೂರು: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಾತಿ ಗಣತಿ ವರದಿಯನ್ನು ಏಕೆ ಅನುಷ್ಠಾನಕ್ಕೆ ತರಲಿಲ್ಲ' ಎಂದು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಪ್ರಶ್ನಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಜಾತಿಗಣತಿ ವರದಿ ಬಹಿರಂಗಪಡಿಸದಂತೆ ನಾವು ಎಲ್ಲೂ ಅಫಿಡವಿಟ್ ಸಲ್ಲಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಸಮಿತಿ ರಚಿಸಿದ್ದೇವೆ' ಎಂದರು.

ಕೆರೆಯಲ್ಲಿ ಮುಳುಗಿ ನಾಲ್ವರ ಸಾವು

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಘೋಡವಾಡಿ ಗ್ರಾಮದ ಇಸ್ಮಾಯಿಲ್ ಖಾದ್ರಿ ದರ್ಗಾ ಸಮೀಪದ ಕೆರೆಯಲ್ಲಿ ಭಾನುವಾರ ಈಜಲು ಹೋಗಿದ್ದ ಒಂದೇ ಕುಟುಂಬದ ನಾಲ್ವರು ಮುಳುಗಿ ಮೃತಪಟ್ಟಿದ್ದಾರೆ. ಹೈದರಾಬಾದ್ ಬೊರಾಬಂಡಾ ನಿವಾಸಿಗಳಾದ, ಸೋಫಾ ತಯಾರಿಕೆ ಕೆಲಸ ಮಾಡುವ ಮಹಮ್ಮದ್ ಜುಲೇದ್ ಖಾನ್ (19), ಮಹಮ್ಮದ್ ಫಾದಖಾನ್ ಸಲೀಂ ಖಾನ್ (18), ಸೈಯದ್ ಅಕ್ಬರ್ ಸೈಯದ್ ಉಸ್ಮಾನ್ (17) ಹಾಗೂ ಸೈಯದ್ ಜುನೇದ್ ಸೈಯದ್ ಖಾಲೇದ್ (15) ಮೃತರು ಎಂದು ಪೊಲೀಸರು ತಿಳಿಸಿದ್ದಾರೆ.

ರೋಮ್ ಶೃಂಗ ಸಭೆಗೆ ತರಳಬಾಳು ಶ್ರೀ ಗೈರು

ಸಿರಿಗೆರೆ: ಹವಾಮಾನ ವೈಪರೀತ್ಯ ಕುರಿತು ಅ.4ರಂದು ರೋಮ್‌ನಲ್ಲಿ ನಡೆಯುವ ಶೃಂಗಸಭೆಗೆ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಗೈರಾಗಲಿದ್ದಾರೆ. ಆದರೆ, ವರ್ಚುವಲ್ ಸಭೆಯಲ್ಲಿ ಭಾಗವಹಿಸುವುದಾಗಿ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ಕೊರೊನಾ ಸೋಂಕಿನ ಕಾರಣಕ್ಕೆ ವಿದೇಶದಿಂದ ಬರುವವರು ಹತ್ತು ದಿನ ಕ್ವಾರಂಟೈನ್ ಆಗಬೇಕೆಂಬ ಬಿಗಿ ನಿಯಮ ಇಟಲಿಯಲ್ಲಿದೆ. ಕಾರ್ಯ ಗೌರವದ ನಿಮಿತ್ತ ಅಷ್ಟು ದಿನ ಮುಂಚಿತವಾಗಿ ಶ್ರೀಗಳು ಭಾಗವಹಿಸಲು ಸಾಧ್ಯವಾಗದೇ ಇರುವುದಕ್ಕೆ ಸಂಯೋಜಕರಿಗೆ ವಿಷಾದ ವ್ಯಕ್ತಪಡಿಸಿ ವಿದೇಶ ಪ್ರವಾಸವನ್ನು ರದ್ದುಪಡಿಸಲಾಗಿದೆ.

ಶೃಂಗಸಭೆಯ ಸಂಯೋಜಕರ ಕೋರಿಕೆ ಮೇರೆಗೆ ತಮ್ಮ ವಿಚಾರಗಳನ್ನು ಸಂಕ್ಷಿಪ್ತವಾಗಿ ವಿಡಿಯೊದಲ್ಲಿ ದಾಖಲಿಸಿ ಕಳುಹಿಸಿದ್ದಾರೆ. ಸ್ವಾಮೀಜಿಯವರ ವಿಚಾರಗಳನ್ನು ಜಗತ್ತಿನ ಅನೇಕ ಭಾಷೆಗಳಲ್ಲಿ ಭಾಷಾಂತರಿಸಿ ಪ್ರಸಾರ ಮಾಡುವುದಾಗಿ ಸಂಯೋಜಕರು ಮಾಹಿತಿ ನೀಡಿದ್ದಾರೆ. ಸ್ಕಾಟ್‌ಲೆಂಡ್‌ನ ಗ್ಲಾಸ್ಗೋದಲ್ಲಿ ಅ.31ರಿಂದ ನ.12ರವರೆಗೆ ನಡೆಯುವ ವಿಶ್ವ ರಾಷ್ಟ್ರೀಯ ಸಂಸ್ಥೆಯ 26ನೇ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಪೂರಕವಾಗಿ ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಶೃಂಗಸಭೆಯನ್ನು ಆಯೋಜಿಸಿದ್ದರು. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಸಾಮಾಜಿಕ ಕಳಕಳಿ ಹಾಗೂ ಸೇವೆಯನ್ನು ಗುರುತಿಸಿ ಪೋಪ್ ಫ್ರಾನ್ಸಿಸ್ ಅವರು ಆಹ್ವಾನ ನೀಡಿದ್ದಾರೆ. ಆದರೆ ಆ ಸಭೆಗೂ ಶ್ರೀಗಳು ಗೈರಾಗುತ್ತಿದ್ದಾರೆ.

ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀ

ಅನಿರೀಕ್ಷಿತವಾಗಿ ಬಂದ ಹುದ್ದೆ: ಸಿಎಂ

ಬಳ್ಳಾರಿ: 'ನಾನು ಮುಖ್ಯಮಂತ್ರಿ ಆಗುತ್ತೇನೆಂದು ಅಂದುಕೊಂಡಿರಲಿಲ್ಲ. ಹಿರಿಯರ ಆಶೀರ್ವಾದ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಬೆಂಬಲದಿಂದ ಈ ಸ್ಥಾನ ಸಿಕ್ಕಿದೆ. ಪಕ್ಷದ ಹೈಕಮಾಂಡ್ ಸಹ ನನ್ನನ್ನು ಬೆಂಬಲಿಸಿದೆ' ಎಂದು ಬಸವರಾಜ ಬೊಮ್ಮಾಯಿ ಸ್ಮರಿಸಿದರು.

ಭಾನುವಾರ ಇಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಇದನ್ನು ನಾನು ಅಧಿಕಾರ ಎಂದು ಭಾವಿಸಿಲ್ಲ. ಜವಾಬ್ದಾರಿ ಅಂದುಕೊಂಡಿದ್ದೇನೆ. ಅತೀ ಜಾಗರೂಕತೆಯಿಂದ ಹೊಣೆಗಾರಿಕೆ ನಿರ್ವಹಿಸುತ್ತೇನೆ.' ಎಂದು ಭರವಸೆ ನೀಡಿದರು.

ಹೊಸ ಶಿಕ್ಷಣ ನೀತಿ ಅಂಗನವಾಡಿಗಳ ಪಾಲಿನ ನೇಣುಗಂಬ: ನಾಗರಾಜಯ್ಯ

ಬೆಂಗಳೂರು: 'ಹೊಸ ಶಿಕ್ಷಣ ನೀತಿ ಅಂಗನವಾಡಿ ಕೇಂದ್ರಗಳ ಪಾಲಿನ ನೇಣುಗಂಬವಾಗಿದ್ದು, ಯಾವುದೇ ಕಾರಣಕ್ಕೂ ಅಂಗನವಾಡಿ ಶಿಕ್ಷಕಿಯರು ಇದಕ್ಕೆ ಬಲಿಪಶುಗಳಾಗಬಾರದು. ಈ ನೇಣುಗಂಬವನ್ನು ನಾಶಮಾಡಲು ಸಜ್ಜಾಗಬೇಕು' ಎಂದು ಸಾಹಿತಿ ವಡ್ಡಗೆರೆ ನಾಗರಾಜಯ್ಯ ಹೇಳಿದರು.

ಭಾನುವಾರ ನಗರದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘ ಆಯೋಜಿಸಿದ್ದ, 'ಹೊಸ ಶಿಕ್ಷಣ ನೀತಿ- ಅಂಗನವಾಡಿ ಕೇಂದ್ರಗಳ ಮೇಲಾಗುವ ಪರಿಣಾಮ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಹೊಸ ಶಿಕ್ಷಣ ನೀತಿಯ ಅನುಸಾರ ಅಂಗನವಾಡಿ ಕೇಂದ್ರಗಳನ್ನು ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿದರೆ ಅಂಗನವಾಡಿ ಶಿಕ್ಷಕಿಯರು ಮತ್ತು ನೌಕರರು ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಶಿಕ್ಷಣ ನೀತಿಯ ವಿರುದ್ಧದ ಹೋರಾಟ ಅನಿವಾರ್ಯವಾಗಿದೆ' ಎಂದರು.

ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ಅಧ್ಯಕ್ಷೆ ಎಸ್. ವರಲಕ್ಷ್ಮಿ, 'ಕೇಂದ್ರ ಸರ್ಕಾರ ರಾಜ್ಯಗಳ ಮೇಲೆ ಹೇರುತ್ತಿರುವ ಉದ್ದೇಶಿತ ನೀತಿಯಲ್ಲಿನ ಬಾಲವಾಟಿಕಾದಲ್ಲಿ ಅಂಗನವಾಡಿ ಪಠ್ಯಕ್ರಮ ಏಕಿಲ್ಲ' ಎಂದು ಪ್ರಶ್ನಿಸಿ, 'ಇದು ವಿಶ್ವ ಹಿಂದೂ ಪರಿಷತ್ ಪ್ರತಿಪಾದಿಸುವ ಮನುವಾದಿ ಶಿಕ್ಷಣ ನೀತಿಯಾಗಿದೆ' ಎಂದು ಕಿಡಿ ಕಾರಿದರು.

ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, 'ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ವಾಪಸು ಪಡೆಯಬೇಕು' ಎಂದು ಒತ್ತಾಯಿಸಿದರು.

ವಿಚಾರ ಸಂಕಿರಣದಲ್ಲಿ 'ಎಸ್. ವರಲಕ್ಷ್ಮಿ (ಎಡದಿಂದ ನಾಲ್ಕನೆಯವರು) ಪೋಸ್ಟರ್ ಬಿಡುಗಡೆ ಮಾಡಿದರು. (ಎಡದಿಂದ) ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಎಸ್ ಸುನಂದಾ, ರಾಜ್ಯ ಉಪಾಧ್ಯಕ್ಷೆ ಟಿ. ಲೀಲಾವತಿ, ಕೆ.ಎಸ್ ವಿಮಲಾ, ಶಿಕ್ಷಣ ತಜ್ಞ ಶ್ರೀಪಾದ ಭಟ್ ಮತ್ತು ಸಾಹಿತಿ ಡಾ. ವಡ್ಡಗೆರೆ ನಾಗರಾಜಯ್ಯ ಇದ್ದರು —ಪ್ರಜಾವಾಣಿ ಚಿತ್ರ

ನಮ್ಮ ಮೆಟ್ರೋ namma metro — ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ — Azadi Ka Amrit Mahotsav

(ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್: bmrcl@dataone.in ವೆಬ್‌ಸೈಟ್: www.bmrc.co.in
ಸಂ:. ಬಿಎಂಆರ್‌ಸಿಎಲ್/ಡಬ್ಲ್ಯೂಹೆಚ್‌ಟಿಡಿ, ಹೆಚ್‌ಬಿಜಿಡಿ ಮತ್ತು ಕೆಟಿಎನ್‌ಡಿ/ಎಂ&ಪಿ–ಎಲ್20 ದಿನಾಂಕ: 01.10.2021

ತಿದ್ದುಪಡಿ–01

"ಬೆಂಗಳೂರು ಮೆಟ್ರೋ ರೈಲು ಯೋಜನೆ–ಹಂತ–IIರ ವೈಟ್‌ಫೀಲ್ಡ್, ಹೆಬ್ಬಗೋಡಿ ಮತ್ತು ಕೊತ್ತನೂರು ಡಿಪೋಗಳಿಗೆ ಸಿಂಕ್ರೊನೈಸ್ಡ್ ಮೊಬೈಲ್ ಲಿಫ್ಟಿಂಗ್ ಜಾಕ್‌ಗಳ ವಿನ್ಯಾಸ, ತಯಾರಿಕೆ, ಸರಬರಾಜು, ಅಳವಡಿಕೆ, ಪರೀಕ್ಷಿಸುವುದು ಮತ್ತು ಕಾರ್ಯಾಚರಣೆಗೊಳಿಸುವುದಕ್ಕಾಗಿ ಆನ್‌ಲೈನ್‌ನಲ್ಲಿ ಟೆಂಡರ್ ದಸ್ತಾವೇಜುಗಳ ಮರು ಮಾರಾಟದ ದಿನಾಂಕವನ್ನು: **04.10.2021 ರಿಂದ 19.10.2021 ರಂದು ಮಧ್ಯರಾತ್ರಿಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರುಗಳನ್ನು ಸಲ್ಲಿಸುವ ದಿನಾಂಕ: **30.10.2021 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರುಗಳನ್ನು ತೆರೆಯುವ ದಿನಾಂಕ: **30.10.2021 ರಂದು ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.bmrc.co.in** ಪರಿವೀಕ್ಷಿಸಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105
Email: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–345/2021–22 ದಿನಾಂಕ: 04.10.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ (Wholly Owned by Government of India Public Sector eligible IRDI Registered General Insurance companies) ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ವಿವರ	ಅಂದಾಜು ಸಂಖ್ಯೆ	ಇಎಂಡಿ (ರೂ.ಗಳಲ್ಲಿ)
ಕಹಾಮ ಒಕ್ಕೂಟಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ತಳಿಯ ಹಸು ಮತ್ತು ಎಮ್ಮೆಗಳಿಗೆ ಒಂದು ವರ್ಷದ ಅವಧಿಗೆ ವಿಮೆ ಸೌಲಭ್ಯ ಒದಗಿಸಲು	1.47 ಲಕ್ಷ cattle	1,000/–

ಟೆಂಡರ್ ಪ್ರಾರಂಭವಾಗುವ ದಿನಾಂಕ	From 04.10.2021
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	11.10.2021 at 11.00 AM
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	on or before 18.10.2021 up to 5.00 pm
ತಾಂತ್ರಿಕ ಟೆಂಡರ್ ತೆರಯುವ ದಿನಾಂಕ	on 21.10.2021 at 11.00 AM
ವಾಣಿಜ್ಯ ಟೆಂಡರ್ ತೆರಯುವ ದಿನಾಂಕ	ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ./ವಿ.ಜಿ.ಪಿ/ಪಿ.ಬಿ/8443/2021–22/2608
ದಿನಾಂಕ:01.10.2021

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಟ್)(3ನೇ ಕರೆ)

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ' ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿಯಲ್ಲಿ ವಿಜಯಪುರ ನಗರದ ಎ.ಟಿ.ಆರ್–72–600 ಏರ್‌ಕ್ರಾಫ್ಟ ಹಗಲು ವ್ಹಿ.ಎಫ್.ಆರ್ ಕಾರ್ಯಾಚರಣೆಯ ವಿಮಾಣ ನಿಲ್ದಾಣ ನಿರ್ಮಾಣ. (ಹಂತ–2) (ಇಂಡೆಂಟ ನಂ. 137623 3 ನೇ ಕರೆ) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು **ಅಂದಾಜು ಮೊತ್ತ ರೂ. 6912.00 ಲಕ್ಷಗಳು.** ಸದರಿ **ಕಾಮಗಾರಿಯ ಟೆಂಡರ ಅವಧಿ 15 ತಿಂಗಳು ಮಳೆಗಾಲ ಸಹಿತ.** & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in priscribed format vide GO No. FD/675/Expenditure/12/2020 Bangalore Dated-11/12/2020). ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ:16.10.2021** ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ **ದಿನಾಂಕ:22.10.2021** ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ **ದಿನಾಂಕ: 25.10.2021** ರ ಮುಂಜಾನೆ 11.00 ಘಂಟೆಯ ನಂತರ ಮತ್ತು. ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ **ದಿನಾಂಕ: 27.10.2021** ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ,ವಿಜಯಪುರ.

ವಾಸಾಸಂಇ/ವಿಜಯಪುರ/312/ಎಂಸಿಎ/2021–22

ಒಳನೋಟ

ಕ್ರೀಡೆಗೆ ಬೇಕಿದೆ ಬೆಂಬಲ

ಬೆಂಗಳೂರು: 'ಥಳುಕಿನ ಅಡಿಯ ಹುಳುಕು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಅ.3) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಕ್ರೀಡೆಗೆ ಪ್ರೋತ್ಸಾಹ ಅಗತ್ಯ'

ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕ್ರೀಡಾಪಟುಗಳು ಇದ್ದಾರೆ. ಆದರೆ, ಸೂಕ್ತ ತರಬೇತಿ ಮತ್ತು ಪ್ರೋತ್ಸಾಹ ಇಲ್ಲದಿರುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಹಲವರಿಗೆ ಸಾಧ್ಯವಾಗುತ್ತಿಲ್ಲ. ಕ್ರೀಡಾ ಸಾಮಗ್ರಿ ಮತ್ತು ಸೌಲಭ್ಯಗಳು ಕ್ರೀಡಾಪಟುಗಳಿಗೆ ಸಿಗುವಂತಾಗಬೇಕು. ಸರ್ಕಾರದ ಜೊತೆಗೆ ವಿವಿಧ ಸಂಸ್ಥೆಗಳು, ಕಂಪನಿಗಳು ಹಾಗೂ ಗಣ್ಯ ವ್ಯಕ್ತಿಗಳೂ ಕ್ರೀಡಾಪಟುಗಳಿಗೆ ಅಗತ್ಯವಿರುವ ಸೌಲಭ್ಯ ಒದಗಿಸಲು ಮುಂದಾಗಬೇಕು.

ಚಿದಾನಂದ, ದಾವಣಗೆರೆ

'ಹೆಚ್ಚಿನ ಅನುದಾನ ಅಗತ್ಯ'

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ಜಾಗತಿಕ ಮಟ್ಟದಲ್ಲಿ ತಮ್ಮ ಬಲಾಢ್ಯತನವನ್ನು ತೋರಿಸಿಕೊಳ್ಳುತ್ತಿವೆ. ಆದರೆ, ನಮ್ಮಲ್ಲಿ ಮಾತ್ರ ಕ್ರೀಡಾ ಕ್ಷೇತ್ರವನ್ನು ಕಡೆಗಣಿಸಲಾಗುತ್ತಿದೆ. ಈಗಲಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಈ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿಡಬೇಕು. ಗ್ರಾಮೀಣ ಭಾಗದಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ಅಂಥವರನ್ನು ಗುರುತಿಸಿ, ತರಬೇತಿ ನೀಡುವ ಕೆಲಸವಾಗಬೇಕು.

ಅನಿಲ್ ಜಿರೋಬೆ, ಬೀದರ್

'ಪ್ರತಿಭೆಗಳನ್ನು ಗುರುತಿಸಲಿ'

ಕ್ರೀಡೆಗೆ ಪ್ರಪಂಚದ ಬಹುತೇಕ ರಾಷ್ಟ್ರಗಳು ಮಹತ್ವ ಕೊಡುತ್ತಿವೆ. ಆದರೆ, ದೇಶದಲ್ಲಿ ಕ್ರೀಡೆ ಅವಗಣನೆಗೆ ಒಳಗಾಗಿದೆ. ಲಾಬಿ ಮಾಡಿದವರಿಗೆ, ಗಣ್ಯರ ಮಕ್ಕಳಿಗೆ ಅವಕಾಶಗಳನ್ನು ಒದಗಿಸಲಾಗುತ್ತಿದೆ. ಇನ್ನಾದರೂ ಗ್ರಾಮೀಣ ಪ್ರದೇಶದ ಪ್ರತಿಭೆಗಳನ್ನು ಗುರುತಿಸಿ, ಅವಕಾಶ ನೀಡಬೇಕು. ಶಾಲಾ ಹಂತದಿಂದಲೇ ಕ್ರೀಡೆಗೆ ಉತ್ತೇಜನ ನೀಡಬೇಕು. ಪ್ರತಿಭಾವಂತರಿಗೆ ಸೂಕ್ತ ತರಬೇತಿ ಕೊಡಿಸಬೇಕು.

ಶಿವಾನಂದ, ಕಲಬುರ್ಗಿ

'ವಿಶಾಲವಾದ ಕ್ರೀಡಾಂಗಣ ನಿರ್ಮಿಸಿ'

ದೇಶದಲ್ಲಿ ಅಸಂಖ್ಯಾತ ಕ್ರೀಡಾಪಟುಗಳಿದ್ದರೂ ಸರ್ಕಾರಗಳಿಂದ ಸೂಕ್ತ ಪ್ರೋತ್ಸಾಹ ಸಿಗುತ್ತಿಲ್ಲ. ಸುಸಜ್ಜಿತ ಕ್ರೀಡಾಂಗಣಗಳು ಇಲ್ಲದಿರುವುದರಿಂದ ಅಭ್ಯಾಸ ಮಾಡಲೂ ಹಲವರಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರವು, ಹೊಸದಾಗಿ ಕ್ರೀಡಾಂಗಣಗಳನ್ನು ನಿರ್ಮಿಸುವುದರ ಜೊತೆಗೆ ಹಾಲಿ ಇರುವ ಕ್ರೀಡಾಂಗಣಗಳಿಗೆ ಮೂಲಸೌಕರ್ಯ ಒದಗಿಸಬೇಕು. ಆಯಾ ಜಿಲ್ಲೆ ಮತ್ತು ತಾಲ್ಲೂಕುಗಳ ಕ್ರೀಡಾ ಇಲಾಖೆಯ ಅಧಿಕಾರಿಗಳು ಸೂಕ್ತವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಕ್ರೀಡಾಪಟುಗಳು ಮುಂದೆ ಬರಲು ಸಾಧ್ಯ.

ರವಿಕುಮಾರ್ ಜಾಧವ (ಸೋನೆ), ಹಂಪಿ ಕನ್ನಡ ವಿಶ್ವವಿದ್ಯಾಲಯ

'ಅನುದಾನ ಬಳಸಬೇಕು'

ಒಲಿಂಪಿಕ್ಸ್, ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್ ಸೇರಿದಂತೆ ವಿವಿಧ ಕ್ರೀಡಾಕೂಟಗಳಲ್ಲಿ ವಿದೇಶಿಗರು ದೊಡ್ಡಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಆದರೆ, ನಮ್ಮ ದೇಶದ ಹಲವಾರು ಕ್ರೀಡಾಪಟುಗಳು ಪದಕ ಸಿಗದೆ ನಿರಾಸ ಅನುಭವಿಸಿ, ವಾಪಸ್ ಬರುತ್ತಿದ್ದಾರೆ. ಸೂಕ್ತ ತರಬೇತಿ, ಪ್ರೋತ್ಸಾಹ ಸಿಗದಿರುವುದೇ ಇದಕ್ಕೆ ಕಾರಣ. ಸರ್ಕಾರವು ಮುಂದಿನ ವರ್ಷಗಳಲ್ಲಿ ಹೆಚ್ಚಿನ ಅನುದಾವನ್ನು ಬಿಡುಗಡೆ ಮಾಡಬೇಕು. ಆ ಅನುದಾನವು ಸಮರ್ಪಕವಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು.

ಎಲ್.ಎಂ. ನಾಯ್ಕ್, ಹರಪನಹಳ್ಳಿ

'ಕ್ರೀಡೆಗೆ ಹೆಚ್ಚಿನ ಉತ್ತೇಜನ ದೊರಕಲಿ'

ದೇಶದಲ್ಲಿ ಉತ್ತಮ ಕ್ರೀಡಾಪಟುಗಳಿದ್ದಾರೆ. ಆದರೆ, ಸೂಕ್ತ ಪ್ರೋತ್ಸಾಹ ಸಿಗದಿದ್ದರಿಂದ ಮುನ್ನಲೆಗೆ ಬರಲು ಸಾಧ್ಯವಾಗುತ್ತಿಲ್ಲ. ತರಬೇತಿ ಹಾಗೂ ಸೌಲಭ್ಯ ಒದಗಿಸಿದಲ್ಲಿ ಇಲ್ಲಿನ ಕ್ರೀಡಾಪಟುಗಳು ಅಂತರರಾಷ್ಟ್ರೀಯಮಟ್ಟದ ಕ್ರೀಡಾಕೂಟಗಳಲ್ಲಿ ಹೆಚ್ಚಿನ ಪದಕಗಳನ್ನು ಜಯಿಸುತ್ತಾರೆ.

ಮುತ್ತುರಾಜ್, ಎಚ್‌.ಡಿ. ಕೋಟೆ

'ಯೋಗಕ್ಕೂ ಮಹತ್ವ ನೀಡಿ'

'ಅನೇಕ ಪ್ರತಿಭಾವಂತ ಯೋಗ ಗುರುಗಳು ನಾಡಿನಲ್ಲಿ ಇದ್ದಾರೆ. ಕ್ರೀಡಾಂಗಣದಲ್ಲಿ ಯೋಗ ಕಲಿಕಾ ಕೇಂದ್ರಗಳನ್ನು ನಿರ್ಮಾಣ ಮಾಡಬೇಕು. ಯೋಗ ಸ್ಪರ್ಧೆಗಳಿಗೆ ನಮ್ಮ ಸ್ವಂತ ಹಣವನ್ನು ಖರ್ಚು ಮಾಡಿ, ವಿದೇಶಗಳಿಗೆ ಹೋಗಬೇಕಾದ ಪರಿಸ್ಥಿತಿಯಿದೆ. ಶಾಲಾಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸುವುದರಿಂದ ಶಾಂತಿ, ಸಮಾಧಾನ ಸಿಗಲಿದೆ. ಹೀಗಾಗಿ, ಸರ್ಕಾರವು ಯೋಗ ಕಲಿಕೆಗೂ ಆದ್ಯತೆ ನೀಡಬೇಕು.

ಅಲ್ಲಮಪ್ರಭು ಎಸ್.ಎಂ, ಮಂಡ್ಯ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್ಎಸ್ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಪ್ರಜಾವಾಣಿ DH DECCAN HERALD

ಡಿಎಚ್-ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಗಿರಿಜಾರಾವ್ ಕೆ.,** ನಂ.396, ಉಷಾನಿಲಯ, ಅಗ್ರಹಾರ, ಬ್ರಹ್ಮಾವರ, ಉಡುಪಿ	40,000
2	**ಎಂ.ಎಸ್.ವೇಣುಗೋಪಾಲ್,** 'ಗಾಯತ್ರಿ ನಿಲಯ', ಮಂಜುನಾಥ ರಸ್ತೆ, 2ನೇ ಬ್ಲಾಕ್ ಟಿ.ಆರ್.ನಗರ, ಬೆಂಗಳೂರು	25,000
3	**ಸೌಮ್ಯ ಎಂ.** ನಂ. 26, ಪ್ರಕೃತಿ, 4ನೇ ಅಡ್ಡ ರಸ್ತೆ, ವಾಜಪೇಯಿ ನಗರ, ಚಿಕ್ಕಲಸಂದ್ರ, ಬೆಂಗಳೂರು	10,000
4	**ಡಾ.ಎಂ.ಆರ್. ಗುರುರಾಜ ರಾವ್,** ನಂ. 155, 2ನೇ ಕ್ರಾಸ್, ಯುಎಎಸ್ ಲೇಔಟ್, ಆರ್‌ಎಂವಿ 2ನೇ ಹಂತ, ಬೆಂಗಳೂರು	10,000
5	**ಮಾನಿನಿ,** ನಂ.452/25, 39ನೇ 'ಎ' ಕ್ರಾಸ್, 9ನೇ ಮೇನ್, 5ನೇ ಬ್ಲಾಕ್, ಜಯನಗರ, ಬೆಂಗಳೂರು	10,000
6	**ಮಂಜುಳಾ,** ನಂ. 18, 2ನೇ ಮೇನ್, 'ಬಿ' ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	10,000
7	**ಗೋಪಿನಾಥ್ ಸಿ.ಎಸ್.,** ನಂ. 1177, 22ನೇ 'ಎ'ಕ್ರಾಸ್, 23ನೇ ಮೇನ್, ಬನಶಂಕರಿ 2ನೇ ಹಂತ, ಬೆಂಗಳೂರು	5,000
8	**ರಾಘವೇಂದ್ರ ಬಿ.,** ನಂ. ಎಸ್-01, ಪರ್ಲ್ ಅಸ್ಟರ್ ಅಪಾರ್ಟ್‌ಮೆಂಟ್, 5ನೇ ಕ್ರಾಸ್, ಎಂ.ಆರ್.ಗಾರ್ಡನ್, ವಿ. ನಾಗೇನಹಳ್ಳಿ, ಆರ್.ಟಿ.ನಗರ ಪೋಸ್ಟ್, ಬೆಂಗಳೂರು	5,000
9	**ಎಂ.ಎಸ್. ರಘುನಾಥ್,** ಎಚ್‌ಐಜಿ. 40, ಕೆಎಚ್‌ಬಿ ಕಾಲೊನಿ, ಬಸವೇಶ್ವರನಗರ 2ನೇಹಂತ, ಬೆಂಗಳೂರು	5,000
10	**ಜಿ.ರಾಜನ್,** ನಂ. 540, ಶ್ರೀನಿವಾಸ, 7ನೇ ಕ್ರಾಸ್, ಎಸ್‌ಐಟಿ ಎಕ್ಸ್‌ಟೆನ್ಷನ್, ತುಮಕೂರು	5,000
11	**ರಮಾ ಜಯಸಿಂಹ,** ನಂ.3, ಆಶೀರ್ವಾದ, 33ನೇ ಕ್ರಾಸ್ ರಸ್ತೆ, 4ನೇ 'ಟಿ'ಬ್ಲಾಕ್, ಜಯನಗರ ಎಚ್‌ಪಿಒ, ಬೆಂಗಳೂರು	5,000
12	**ಜಯರಾಮ ಚಾರಿಟಬಲ್ ಟ್ರಸ್ಟ್,** ನಂ.3, ಆಶೀರ್ವಾದ, 33ನೇ ಕ್ರಾಸ್ ರಸ್ತೆ, 4ನೇ 'ಟಿ'ಬ್ಲಾಕ್, ಜಯನಗರ ಎಚ್‌ಪಿಒ, ಬೆಂಗಳೂರು	5,000
13	**ಪವನ್ ಕುಮಾರ್ ಸಿ.,** ದತ್ತಧಾಮ, ಆರೋಗ್ಯನಗರ, 4ನೇ ಕ್ರಾಸ್, ತೇಜಸ್ವಿ ಹೈಯರ್ ಪ್ರೈಮರಿ ಶಾಲೆ ಹಿಂಭಾಗ, ತೇಜಸ್ವಿ ನಗರ, ಧಾರವಾಡ	4,000
14	**ವಾಸುದೇವ ಸೋಲನಕರ,** ನಂ. 10846/1 ಸಿ, 1ನೇ ಕ್ರಾಸ್, 1ನೇ ಮೇನ್, ಜಯನಗರ, ಧಾರವಾಡ	3,500
15	**ಕೆಂಪಣ್ಣ ಸಿ.** ನಂ. 588, 1ನೇ ಮಹಡಿ, 4ನೇ ಕ್ರಾಸ್, 10ನೇ ಮೇನ್ ರೋಡ್, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು	3,000
16	**ರವೀಂದರ್ ಅಳಸಿಂಗರಾಚಾರ್ಯ ಮಾಂಡವ್ಯಂ,** ನಂ. 1355, 9ನೇ ಕ್ರಾಸ್ ರಸ್ತೆ, ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು	2,500
17	**ರಾಮಕೃಷ್ಣ ಮೂರ್ತಿ,** ಜಿ-2, ವೈಭವ್ ಮ್ಯಾನ್ಷನ್, ನಂ.2, 1ನೇ ಕ್ರಾಸ್, ಜಿಎಂಆರ್ ಲೇಔಟ್, ಆರ್‌ಎಂವಿ 2ನೇ ಹಂತ, ಸಂಜಯನಗರ, ಬೆಂಗಳೂರು	2,500
18	**ಕೃಷ್ಣಮೂರ್ತಿ ಎಸ್.ಜಿ,** ನಂ. 929, 9ನೇ ಕ್ರಾಸ್, 10ನೇ ಮೇನ್ ರೋಡ್, ಬೆಮೆಲ್ 3ನೇ ಹಂತ, ಆರ್.ಆರ್. ನಗರ, ಬೆಂಗಳೂರು	2,021
19	**ಎಂ.ಆರ್.ಅನ್ನಪೂರ್ಣ,** ನಂ. 20, ಬ್ಲಾಕ್ 11, ಶ್ರೀರಾಮಪುರ, 2ನೇ ಹಂತ, ಬೆಮೆಲ್ ಲೇಔಟ್, ಮೈಸೂರು	2,001
20	**ಅಶ್ವತ್ಥನಾರಾಯಣ ರಾವ್,** ಅಶ್ವಿನಿ, ನಂ. 401, ಯೂನಿವರ್ಸಿಟಿ ಲೇಔಟ್, ಲಿಂಗಾಂಬುಧಿ ರಿಂಗ್ ರಸ್ತೆ, ಮೈಸೂರು	2,000
21	**ಎಚ್.ವಿ.ಅನಂತಸುಬ್ಬ ರಾವ್,** ನಂ. 37, 16ನೇ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು	2,000
22	**ಅರುಣ್ ಸಂಪತ್,** ನಂ. 1777, ಎಸ್‌ಎಲ್‌ಎನ್ ನಿವಾಸ್, 22ನೇ ಕ್ರಾಸ್, ಗೋವಿಂದರಾಜ ನಗರ, ಬೆಂಗಳೂರು	1,515
23	**ಎಂ.ಜಿ.ಸಂಪತ್ ಕುಮಾರ್,** ನಂ.1777, ಎಸ್‌ಎಲ್‌ಎನ್ ನಿವಾಸ್, 22ನೇ ಕ್ರಾಸ್, ಗೋವಿಂದರಾಜ ನಗರ, ಬೆಂಗಳೂರು	1,515
24	**ಪ್ರಸನ್ನ ಎಂ.ಎಸ್.,** ಎಫ್ 694, 2ನೇ ಮಹಡಿ, ಡಬ್ಲ್ಯುಎಚ್ ಬ್ಲಾಕ್, ಎಚ್‌ಎಎಲ್ (ಬಿ.ಸಿ.) ಹಳೇ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು	1,501
25	**ರಾಧಿಕಾ ಶ್ರೀನಿವಾಸ್,** ನಂ. 50, 2ನೇ ಮೇನ್ ರೋಡ್, ಬಿಡಿಎ ಪಾರ್ಕ್ ಎದುರು, ಗಂಗಾನಗರ, ಬೆಂಗಳೂರು	1,117
26	**ಶ್ರೀನಿವಾಸ ಮೂರ್ತಿ ವಿ.,** ಬಸವನಗುಡಿ, ಬೆಂಗಳೂರು	1,100
27	**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,** ನಂ. 450, ಶ್ರೀಲಕ್ಷ್ಮಿ ಡಿಎಫ್‌ಆರ್‌ಎಲ್ ಎದುರು, ಸಿದ್ಧಾರ್ಥನಗರ, ಮೈಸೂರು	1,001
28	**ಬಾಲಸುಬ್ರಹ್ಮಣ್ಯನ್ ವಿ.,** ನಂ. 202, ಉಷಾಕಿರಣ್ ಅಪಾರ್ಟ್‌ಮೆಂಟ್ಸ್, ಹೌದಿನ್ ರಸ್ತೆ, ಬೆಂಗಳೂರು	1,000
29	**ಮುರುಗೇಶ್ ಎಚ್.ಸಿ.,** ನಂ. 179, 1ನೇಮೇನ್, ಲಕ್ಷ್ಮೀನಗರ, ಕೆನರಾ ಬ್ಯಾಂಕ್ ಹತ್ತಿರ, ಗೋಕುಲ್ ರಸ್ತೆ, ಹುಬ್ಬಳ್ಳಿ	1,000
30	**ಶ್ರೀಧರ್ ಡಿ.,** ನಂ.31, 4ನೇ 'ಬಿ'ಕ್ರಾಸ್, ಬನಶಂಕರಿ 3ನೇ ಹಂತ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು	1,000
31	**ಮಹಾಂತೇಶ್ ಎಂ. ಹೂಗಾರ್,** s/o ಮುತ್ತಪ್ಪ ಹೂಗಾರ್, ನರಸಾಪುರ, ಗದಗ	1,000
	ಒಟ್ಟು ಮೊತ್ತ	6,17,293

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ-ಮೇಲ್‌ಗೆ ಕಳುಹಿಸಲು ವಿನಂತಿ.

ಹಾನಗಲ್, ಸಿಂದಗಿ ಉಪ ಚುನಾವಣೆ ● ಸಂಭವನೀಯ ಅಭ್ಯರ್ಥಿ ಆಯ್ಕೆಗೆ ಪ್ರಮುಖರ ಸಭೆ

ಬಿಜೆಪಿಯಿಂದ ತಲಾ 3 ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳಿಗೆ ಪಕ್ಷದಿಂದ ತಲಾ ಮೂವರು ಸಂಭವನೀಯ ಅಭ್ಯರ್ಥಿಗಳ ಹೆಸರು ಶಿಫಾರಸು ಮಾಡಲು ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ನಿರ್ಧರಿಸಿದೆ.

ಈ ಪೈಕಿ, ಸಿಂದಗಿ ಕ್ಷೇತ್ರಕ್ಕೆ ರಮೇಶ ಭೂಸನೂರ ಮತ್ತು ಹಾನಗಲ್ ಕ್ಷೇತ್ರಕ್ಕೆ ಸಂಸದ ಶಿವಕುಮಾರ ಉದಾಸಿ ಅವರ ಪತ್ನಿ ರೇವತಿ ಹೆಸರು ಮುಂಚೂಣಿಯಲ್ಲಿವೆ.

ಬಿಜೆಪಿ ರಾಜ್ಯ ಉಸ್ತುವಾರಿಯಾಗಿರುವ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಉಪಸ್ಥಿತಿಯಲ್ಲಿ ಭಾನುವಾರ ಪ್ರಮುಖರ ಸಮಿತಿ ಸಭೆ ನಡೆಯಿತು. ಎರಡೂ ಕ್ಷೇತ್ರಗಳಿಗೆ ತಲಾ ಮೂವರ ಹೆಸರನ್ನು ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿಗೆ ಶಿಫಾರಸು ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂಬ ಮಾಹಿತಿ ಲಭಿಸಿದೆ.

ಸಿಂದಗಿ ಕ್ಷೇತ್ರಕ್ಕೆ ಹಿಂದಿನ ಚುನಾವಣೆಯ ಪರಾಜಿತ ಅಭ್ಯರ್ಥಿ ರಮೇಶ ಭೂಸನೂರ, ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಅವರ ಸಂಬಂಧಿ ಸಂಗನಗೌಡ ಪಾಟೀಲ ಮತ್ತು ಬಿಜೆಪಿ ಮುಖಂಡ ಸಿದ್ದು ಬಿರಾದಾರ ಹೆಸರು ಶಿಫಾರಸು ಮಾಡಲು ತೀರ್ಮಾನಿಸಲಾಗಿದೆ. ಇನ್ನೂ ಕೆಲವು ಆಕಾಂಕ್ಷಿಗಳ ಹೆಸರುಗಳು ಸಭೆಯಲ್ಲಿ ಚರ್ಚೆಗೆ ಬಂದಿದ್ದವು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹಾನಗಲ್ ಕ್ಷೇತ್ರಕ್ಕೆ ರೇವತಿ ಉದಾಸಿ, ಪಕ್ಷದ ಮುಖಂಡ ಕಲ್ಯಾಣ ಕುಮಾರ್ ಶೆಟ್ಟರ್ ಮತ್ತು ವಿಧಾನ ಪರಿಷತ್ ಮಾಜಿ ಸದಸ್ಯ ಶಿವರಾಜ ಸಜ್ಜನ ಅವರ ಹೆಸರುಗಳನ್ನು ಶಿಫಾರಸು ಮಾಡಲು ಪ್ರಮುಖರ ಸಮಿತಿ ನಿರ್ಧರಿಸಿದೆ. ಹಾನಗಲ್ ಕ್ಷೇತ್ರಕ್ಕೆ ಹಲವು ಆಕಾಂಕ್ಷಿಗಳಿದ್ದು, ಶಿವಕುಮಾರ ಉದಾಸಿ ಹೆಸರೂ ಚರ್ಚೆಗೆ ಬಂದಿತ್ತು. ಆದರೆ, ಹಾಲಿ ಸಂಸದರಾಗಿರುವ ಕಾರಣದಿಂದ ಅವರ ಬದಲು ಪತ್ನಿಯ ಹೆಸರನ್ನು ಶಿಫಾರಸು ಮಾಡುವ ನಿರ್ಣಯಕ್ಕೆ ಬರಲಾಯಿತು ಎಂದು ಗೊತ್ತಾಗಿದೆ.

ಬಿಜೆಪಿ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದರಾಜ ಕಲಕೋಟಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಹಾಂತೇಶ ಸೊಪ್ಪಿನ, ಆರೆಸ್ಸೆಸ್ ಮುಖಂಡ ರಾಜಶೇಖರ್ ಗೌಡ ಕಾಟೆಗೌಡರ್ ಹೆಸರುಗಳೂ ಪರಿಶೀಲನೆಗೆ ಬಂದಿದ್ದವು. ಆದರೆ, ಎರಡೂ ಕ್ಷೇತ್ರಕ್ಕೆ ತಲಾ ಮೂವರ ಹೆಸರನ್ನಷ್ಟೇ ಶಿಫಾರಸು ಮಾಡಲು ನಿರ್ಧರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮನವೊಲಿಕೆ ಹೊಣೆ ಕಟೀಲ್‌ಗೆ: ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಕೇಂದ್ರೀಯ ಚುನಾವಣಾ ಸಮಿತಿಗೆ ಕಳುಹಿಸುವ ಮತ್ತು ಅಭ್ಯರ್ಥಿಗಳ ಘೋಷಣೆಯಾದ ಬಳಿಕ ಉಳಿದವರ ಮನವೊಲಿಕೆಯ ಜವಾಬ್ದಾರಿಯನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ನೀಡಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, 'ಎರಡೂ ಕ್ಷೇತ್ರಗಳಿಗೆ ಹಲವರ ಹೆಸರುಗಳು ಪ್ರಸ್ತಾಪವಾಗಿವೆ. ಅವುಗಳಲ್ಲಿ ಮೂರ್ನಾಲ್ಕು ಹೆಸರುಗಳನ್ನು ಕೇಂದ್ರೀಯ ಚುನಾವಣಾ ಸಮಿತಿಗೆ ಶಿಫಾರಸು ಮಾಡುವ ಅಧಿಕಾರವನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ನೀಡಲಾಗಿದೆ' ಎಂದರು.

'ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದು ಪಕ್ಷದ ಆದ್ಯತೆ. ಅದಕ್ಕೆ ಪೂರಕವಾಗಿ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಗೆಲುವಿಗಾಗಿ ಸಂಘಟಿತ ಪ್ರಯತ್ನ ಮಾಡಲಾಗುವುದು' ಎಂದು ಹೇಳಿದರು.

ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಗೋವಿಂದ ಕಾರಜೋಳ, ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ. ಶ್ರೀರಾಮುಲು, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಸಂಸದ ಡಿ.ವಿ. ಸದಾನಂದ ಗೌಡ ಮತ್ತು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಸಭೆಯಲ್ಲಿದ್ದರು.

ಚುನಾವಣಾ ಉಸ್ತುವಾರಿಗಳ ನೇಮಕ

ಬೆಂಗಳೂರು: ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಉಸ್ತುವಾರಿಗಳನ್ನಾಗಿ ಸಚಿವರು, ಶಾಸಕರು ಸೇರಿದಂತೆ ಪ್ರತಿ ಕ್ಷೇತ್ರಕ್ಕೆ ತಲಾ 12 ಮಂದಿಯನ್ನು ನೇಮಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆದೇಶ ಹೊರಡಿಸಿದ್ದಾರೆ.

ಸಿಂದಗಿ ಕ್ಷೇತ್ರಕ್ಕೆ ಸಚಿವರಾದ ಗೋವಿಂದ ಕಾರಜೋಳ, ವಿ. ಸೋಮಣ್ಣ, ಸಿ.ಸಿ. ಪಾಟೀಲ, ಶಶಿಕಲಾ ಜೊಲ್ಲೆ, ಸಂಸದ ರಮೇಶ ಜಿಗಜಿಣಗಿ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಸೋಮನಗೌಡ ಪಾಟೀಲ, ಎ.ಎಸ್. ಪಾಟೀಲ ನಡಹಳ್ಳಿ, ಪಿ. ರಾಜೀವ್, ಮಾಜಿ ಶಾಸಕರಾದ ಶ್ರೀಕಾಂತ ಕುಲಕರ್ಣಿ ಮತ್ತು ಬಾಬುರಾವ್ ಚಿಂಚನಸೂರ ಅವರನ್ನು ಉಸ್ತುವಾರಿಗಳನ್ನಾಗಿ ನೇಮಿಸಲಾಗಿದೆ.

ಹಾನಗಲ್ ಕ್ಷೇತ್ರಕ್ಕೆ ಸಚಿವರಾದ ಮುರುಗೇಶ ನಿರಾಣಿ, ಜೆ.ಸಿ. ಮಾಧುಸ್ವಾಮಿ, ಬಿ.ಸಿ. ಪಾಟೀಲ, ಶಿವರಾಂ ಹೆಬ್ಬಾರ, ಸಂಸದ ಶಿವಕುಮಾರ ಉದಾಸಿ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ, ಶಾಸಕರಾದ ರಾಜುಗೌಡ, ನೆಹರು ಓಲೇಕಾರ್, ಎಂ. ಚಂದ್ರಪ್ಪ, ಮಾಜಿ ಸಂಸದ ವಿರೂಪಾಕ್ಷಪ್ಪ ಬಳ್ಳಾರಿ, ಪಕ್ಷದ ಸ್ಥಳೀಯ ಮುಖಂಡ ಅರುಣ್ ಕುಮಾರ್ ಗುತ್ತೂರು ಅವರನ್ನು ಚುನಾವಣಾ ಉಸ್ತುವಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ಮಾನೆ-ತಹಶೀಲ್ದಾರ್ ಪೈಪೋಟಿ

ಹಾನಗಲ್ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗಾಗಿ ಮಾಜಿ ಸಚಿವ ಮನೋಹರ್ ತಹಶೀಲ್ದಾರ್ ಮತ್ತು ಶ್ರೀನಿವಾಸ ಮಾನೆ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಈಗಾಗಲೇ ಎರಡೂ ಹೆಸರುಗಳನ್ನು ರಾಜ್ಯ ಕಾಂಗ್ರೆಸ್ ನಾಯಕರು ವರಿಷ್ಠರಿಗೆ ಶಿಫಾರಸು ಮಾಡಿದ್ದಾರೆ. ಈ ಪೈಕಿ, ಮಾನೆ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸಿಂದಗಿ ಕ್ಷೇತ್ರದ ಶಾಸಕರಾಗಿದ್ದ ಎಂ.ಸಿ. ಮನಗೂಳಿ ಅವರ ಪುತ್ರ, ಜೆಡಿಎಸ್ ತ್ಯಜಿಸಿ ಬಂದಿರುವ ಅಶೋಕ ಮನಗೂಳಿ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ಈಗಾಗಲೇ ನಿರ್ಧರಿಸಿದೆ.

ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮದ ಸೀತಾರಾಮಶಾಸ್ತ್ರಿ ವಿದ್ಯಾಮಂದಿರದ ಆವರಣದಲ್ಲಿ ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಗಾಯಕಿ ಯಲಗಟ್ಟೆ ಗೊಲ್ಲರಹಟ್ಟಿಯ ಸಿರಿಯಮ್ಮ ಹಾಗೂ ಜಾನಪದ ವಿದ್ವಾಂಸ ಡಾ.ಕೃಷ್ಣಮೂರ್ತಿ ಹನೂರು ಅವರಿಗೆ 'ಸಿರಿ ಬೆಳಗು' ಪ್ರಶಸ್ತಿಯನ್ನು ಶಾಸಕ ಟಿ.ರಘುಮೂರ್ತಿ ಪ್ರದಾನ ಮಾಡಿದರು. ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ರಾಜಶೇಖರಯ್ಯ, ಡಾ.ಎಚ್.ಎಲ್. ಪುಷ್ಪಾ, ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಕಲಮರಹಳ್ಳಿ, ಡಾ.ಮಂಜಣ್ಣ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಡಾ.ಬಂಜಗೆರೆ ಜಯಪ್ರಕಾಶ್ ಇದ್ದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಖರ್ಗೆ ಆರೋಪ

ಚರ್ಚೆಗೆ ಬಾರದ ಮೋದಿ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ಕಲಬುರ್ಗಿ: 'ರೈತ ವಿರೋಧಿ ಕಾನೂನು ಜಾರಿ, ಜನರ ವೈಯಕ್ತಿಕ ಸ್ವಾತಂತ್ರ್ಯ ಹರಣ, ಪೆಗಾಸಸ್ ಗೂಢಚರ್ಯೆ ಕುರಿತು ಸದನದಲ್ಲಿ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಇಷ್ಟಪಡುವುದಿಲ್ಲ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

'ಪ್ರಧಾನಿಯಾದವರು ಲೋಕಸಭೆ, ರಾಜ್ಯಸಭೆ ಕಲಾಪಗಳಿಗೆ ತಪ್ಪದೇ ಹಾಜರಾಗಬೇಕು. ಆದರೆ, ಮೋದಿ ಅವರು ತಮಗೂ ರಾಜ್ಯಸಭೆಗೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಾರೆ. ಲೋಕಸಭೆಗೆ ಬಂದರೂ ಕೆಲ ಹೊತ್ತಿನಲ್ಲೇ ಅಲ್ಲಿಂದ ನಿರ್ಗಮಿಸುತ್ತಾರೆ. ಪ್ರಧಾನಿ ಧೋರಣೆಯೇ ಹೀಗೆ ಇರುವಾಗ ಪ್ರಮುಖ ವಿಚಾರಗಳನ್ನು ಯಾರ ಎದುರಿಗೆ ಚರ್ಚಿಸಬೇಕು' ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಮಾರಾಟ ಮಾಡಿ ₹ 6 ಲಕ್ಷ ಕೋಟಿ ವರಮಾನ ಗಳಿಸಲು ಮೋದಿ ಸರ್ಕಾರ ಮುಂದಾಗಿದೆ. ಉದ್ಯಮಗಳನ್ನು ತಮಗೆ ಬೇಕಾದ ಆಯ್ದ ಉದ್ಯಮಿಗಳಿಗೆ ಹಸ್ತಾಂತರಿಸಲಾಗುತ್ತದೆ. ಸರ್ಕಾರಿ ಆಸ್ತಿಗಳನ್ನು ಪಡೆದವರು ಚುನಾವಣೆಯಲ್ಲಿ ಬಿಜೆಪಿಗೆ ಹಣಕಾಸು ಸಹಾಯ ಮಾಡುತ್ತಾರೆ' ಎಂದು ಅವರು ಹೇಳಿದರು.

'70 ವರ್ಷಗಳಲ್ಲಿ ಕಾಂಗ್ರೆಸ್ ಕೊಡುಗೆಯೇನು ಎಂದು ಪ್ರಶ್ನಿಸಲಾಗುತ್ತದೆ. 55 ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್, ದೇಶಕ್ಕೆ ಆಸ್ತಿ ಮಾಡಿಕೊಟ್ಟಿದೆಯೇ ಹೊರತು ಮೋದಿ ಅವರಂತೆ ಇರುವುದನ್ನೆಲ್ಲ ಮಾರಾಟ ಮಾಡಿಲ್ಲ' ಎಂದು ತಿರುಗೇಟು ನೀಡಿದರು.

'ಗೃಹಸಚಿವ ಅಮಿತ್ ಶಾ ಅವರು ಸಹಕಾರ ಕ್ಷೇತ್ರದ ಮೇಲೆ ಕಣ್ಣು ಹಾಕಿದ್ದು, ಸಹಕಾರ ಇಲಾಖೆಯನ್ನು ಗೃಹಖಾತೆಯೊಂದಿಗೆ ಇಟ್ಟುಕೊಂಡಿದ್ದಾರೆ. ಆ ಮೂಲಕ ಸಹಕಾರಿ ಬ್ಯಾಂಕುಗಳು, ಸಹಕಾರ ಸಂಘಗಳನ್ನು ತಮ್ಮ ನಿಯಂತ್ರಣದಲ್ಲಿಡಲು ಮುಂದಾಗಿದ್ದಾರೆ' ಎಂದರು.

'ಬಿಜೆಪಿಯ 40 ಶಾಸಕರು ಕಾಂಗ್ರೆಸ್‌ಗೆ'

ಬೆಳಗಾವಿ: 'ಬಿಜೆಪಿಯ 40 ಶಾಸಕರು ಕಾಂಗ್ರೆಸ್‌ಗೆ ಸೇರ್ಪಡೆಯಾಗಲಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ರಾಜು ಕಾಗೆ ಹೇಳಿದರು. ಕಾಗವಾಡ ತಾಲ್ಲೂಕಿನ ಮದಭಾವಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಬೆಳಗಾವಿ ಜಿಲ್ಲೆಯ 2-3 ಶಾಸಕರು ಕೂಡ ಬರಲಿದ್ದಾರೆ' ಎಂದರು.

ಈ ವಿಷಯದ ಬಗ್ಗೆ ಹುಕ್ಕೇರಿ ತಾಲ್ಲೂಕಿನ ಕರಗುಪ್ಪಿಯಲ್ಲಿ ಪ್ರತಿಕ್ರಿಯಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, 'ಬಿಜೆಪಿ ಶಾಸಕರು ಕಾಂಗ್ರೆಸ್‌ಗೆ ಬರುವ ಬಗ್ಗೆ ವರಿಷ್ಠರ ಮಟ್ಟದಲ್ಲಿ ಚರ್ಚೆ ಆಗಿರುವುದು ನಿಜ. ಯಾರ್‍ಯಾರು ಬರುತ್ತಾರೆ ಎಂಬ ಮಾಹಿತಿ ಸದ್ಯಕ್ಕೆ ನನಗಿಲ್ಲ' ಎಂದರು.

ಚುನಾವಣೆ ವೇಳೆಗೆ ಕಾಂಗ್ರೆಸ್ ಹೋಳಾಗಲಿದೆ: ಕೆ.ಎಸ್. ಈಶ್ವರಪ್ಪ

ಮೈಸೂರು: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಮುಖ್ಯಮಂತ್ರಿ ಆಗಬೇಕೆಂಬ ಹುಚ್ಚು ಇದೆ. ಹೀಗಾಗಿ, ಮುಂಬರುವ ಚುನಾವಣೆ ವೇಳೆಗೆ ಕಾಂಗ್ರೆಸ್ ಹೋಳಾಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಮೊದಲು ಚಿಕ್ಕಮಕ್ಕಳಿಗೇ ಶಾಲೆ ಆರಂಭಿಸಬೇಕಿತ್ತು'

ಒಂದನೇ ಪುಟದಿಂದ

2 ವರ್ಷಕ್ಕೆ ಮೇಲ್ಪಟ್ಟವರಿಗಾಗಿ ಮೂಗಿನಲ್ಲಿ ಹನಿಯ ರೂಪದಲ್ಲಿ ಹಾಕುವ (ನೇಸಲ್ ಡ್ರಾಪ್) ಲಸಿಕೆ ಅಭಿವೃದ್ಧಿಪಡಿಸಲಾಗುತ್ತಿದೆ. ಭಾರತ್ ಬಯೋಟೆಕ್ ಕಂಪನಿಯು ಈ ಸಂಬಂಧ ನಡೆಸಿರುವ ಸಂಶೋಧನೆ ಅಂತಿಮ ಹಂತ ತಲುಪಿದ್ದು, ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆದಿದೆ. ಇದಕ್ಕೆ ಮಾನ್ಯತೆ ದೊರೆತಲ್ಲಿ, ಲಸಿಕೆಯನ್ನು ಇಂಜಕ್ಷನ್ ಮೂಲಕ ಪಡೆಯಲು ಆತಂಕ ಪಡುತ್ತಿರುವವರನ್ನು ನೇಸಲ್ ಡ್ರಾಪ್ ಮೂಲಕ ಆಕರ್ಷಿಸಲು ಅನುಕೂಲವಾಗಲಿದೆ ಎಂದು ಅವರು ಹೇಳಿದರು. ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದಾದ್ಯಂತ 1.48 ಕೋಟಿ ಡೋಸ್ ಲಸಿಕೆ ಹಾಕಲಾಗಿದೆ. 18ಕ್ಕಿಂತ ಕಡಿಮೆ ವಯಸ್ಸಿನವರಿಗೆ ಲಸಿಕೆ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಶೀಘ್ರವೇ ಇದಕ್ಕೆ ಅನುಮತಿ ದೊರೆಯುವ ಸಾಧ್ಯತೆ ಇದೆ ಎಂದರು.

ಕೆಲ ನಿರ್ದಿಷ್ಟ ಸಮುದಾಯದವರು, ಮದ್ಯಪಾನ ಪ್ರಿಯರು ಸೇರಿದಂತೆ ಶೇ 15ರಷ್ಟು ಜನ ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಅಂಥವರನ್ನು ಆಕರ್ಷಿಸಲು ವಿಶೇಷ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಯಾ ಸಮುದಾಯಗಳ, ಧಾರ್ಮಿಕ ಮುಖಂಡರ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದರು.

ರಾಜ್ಯದಲ್ಲೂ ಕೋವಿಡ್‌ನ 3ನೇ ಅಲೆಯ ಆತಂಕ ಇದೆ. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಮೂರನೇ ಅಲೆ ಅಪ್ಪಳಿಸಬಹುದು ಎಂಬ ಶಂಕೆ ಇದೆ. ಹಾಗಾಗಿ, ಮುನ್ನೆಚ್ಚರಿಕೆ ಕ್ರಮವಾಗಿ ಜಾತ್ರೆ, ಹಬ್ಬ ಹಾಗೂ ಉತ್ಸವಗಳಲ್ಲಿ ಜನಸಮೂಹ ಸೇರದಂತೆ ಕಡಿವಾಣ ಹಾಕುವುದನ್ನು ಮುಂದುವರಿಸಿ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದರು.

ಆಸ್ಪತ್ರೆಗಳ ಮೇಲ್ದರ್ಜೆಗೆ ಕ್ರಮ

ನವದೆಹಲಿ: ರಾಜ್ಯದಲ್ಲಿನ 250ಕ್ಕೂ ಅಧಿಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಪ್ರತಿ ಆಸ್ಪತ್ರೆಗೆ ಮೂವರು ತಜ್ಞ ವೈದ್ಯರನ್ನು ನೇಮಿಸುವುದಲ್ಲದೆ, ಇತರ ಸಿಬ್ಬಂದಿಯ ಸಂಖ್ಯೆಯನ್ನೂ ಹೆಚ್ಚಿಸಲಾಗುತ್ತದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಮೇಲ್ದರ್ಜೆಗೆ ಏರಿದ ಆಸ್ಪತ್ರೆ ಆವರಣದಲ್ಲೇ ವೈದ್ಯರು, ದಾದಿಯರು ಮತ್ತಿತರ ಸಿಬ್ಬಂದಿಯ ವಸತಿಗೃಹ ನಿರ್ಮಿಸಲಾಗುತ್ತಿದೆ. ಸಾರ್ವಜನಿಕರಿಗೆ 24 ಗಂಟೆ ಆರೋಗ್ಯ ಸೇವೆ ದೊರಕಿಸಲು ಈ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಪಟ್ಟಣ ಮತ್ತು ಗ್ರಾಮಗಳಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರದ ಆರೋಗ್ಯ ಸಚಿವ ಮನಸುಖ್ ಮಾಂಡವಿಯಾ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಅವರು ಹೇಳಿದರು.

ಹಳೆ ಮೈಸೂರು ಭಾಗಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕದಲ್ಲಿ ಆಸ್ಪತ್ರೆಗಳ ಸಂಖ್ಯೆ ಕಡಿಮೆ ಇದೆ. ಅಲ್ಲಿ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಅವರಿಗೆ ಕೋರಲಾಗಿದೆ ಎಂದು ಅವರು ವಿವರಿಸಿದರು.

'ಪಕ್ಷ ಬಿಡುವವರ ಬಗ್ಗೆ ಚಿಂತೆಯಿಲ್ಲ'

ರಾಮನಗರ: ಜೆಡಿಎಸ್‌ನ ಮೂರ್ನಾಲ್ಕು ಶಾಸಕರು ಪಕ್ಷ ತೊರೆಯಲು ಸಿದ್ಧತೆ ನಡೆಸಿದ್ದು, ಅಂತಹ ಕ್ಷೇತ್ರಗಳಲ್ಲಿ ಈಗಾಗಲೇ ಪರ್ಯಾಯ ಅಭ್ಯರ್ಥಿಗಳನ್ನು ಹುಡುಕಿಕೊಂಡಿದ್ದೇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಭಾನುವಾರ ಬಿಡದಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು 'ಪಕ್ಷದಲ್ಲಿ ಬೆಳೆದು, ಹೊರಹೋಗಿ ತೆಗಳಿದರೆ ಸುಮ್ಮನಿರಲಾಗದು. ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ಮಾಡಲು ನಾನು ತಯಾರಿದ್ದೇನೆ' ಎಂದರು. 'ಈ ಹಿಂದೆ ಕೆಲವರು ಪಕ್ಷದ ಶಕ್ತಿ ಬಳಸಿಕೊಂಡು ಕಾರ್ಯಕರ್ತರನ್ನು ನಡು ನೀರಿನಲ್ಲಿ ಬಿಟ್ಟು ಹೋದರು. ನಿನ್ನೆಯೂ ಒಬ್ಬ ಶಾಸಕರು ನಾನಾಗಿಯೇ ಪಕ್ಷ ಬಿಟ್ಟು ಹೋಗಲ್ಲ, ನಾಯಕರೇ ಗೊಂದಲ ಸೃಷ್ಟಿ ಮಾಡ್ತಿರೋದು ಅಂದಿದ್ದಾರೆ. ನಾವ್ಯಾಕೆ ಗೊಂದಲ ಸೃಷ್ಟಿ ಮಾಡೋಣ. ಒಳಗೊಳಗೇ ಸಂಚು ರೂಪಿಸಿಕೊಂಡು ನನ್ನ ಮೇಲೆ ಗೂಬೆ ಕೂರಿಸುತ್ತಾರೆ.' ಎಂದು ಟೀಕಿಸಿದರು.

ಶಾಲಾ ಶಿಕ್ಷಕರಿಂದ ತರಬೇತಿ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮದಿಂದ (2017ರ ತಿದ್ದುಪಡಿ) ಸೇವಾನಿರತ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಮನವಿ ಸಲ್ಲಿಸಿದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಕಾರಣ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆರಂಭಗೊಂಡಿರುವ 'ನಿಷ್ಠಾ-3' (ವೃತ್ತಿ ಕೌಶಲ ಹೆಚ್ಚಿಸಲು ತರಬೇತಿ) ಆನ್‌ಲೈನ್ ತರಬೇತಿ ಬಹಿಷ್ಕರಿಸಲು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರ್ಧರಿಸಿದೆ.

'3 ತಿಂಗಳ ಕಾಲಮಿತಿಯೊಳಗೆ ಸಮಸ್ಯೆ ಪರಿಹರಿಸುವಂತೆ ಜೂನ್ 2021ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸಮಸ್ಯೆಗೆ ಪರಿಹಾರ ಸಿಗದೇ ಇದ್ದಲ್ಲಿ, ಮುಂದಿನ ನಡೆಯ ಬಗ್ಗೆಯೂ ಹೇಳಿದ್ದೆವು. ಮನವಿ ಸಲ್ಲಿಸಿ 4 ತಿಂಗಳಾದರೂ ಸರ್ಕಾರ ಸ್ಪಂದಿಸಿಲ್ಲ. ಹಾಗಾಗಿ ತರಬೇತಿ ಬಹಿಷ್ಕರಿಸಲು ತೀರ್ಮಾನಿಸಿದ್ದೇವೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಹಾಗೂ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಯೋಗದಲ್ಲಿ
ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿಯಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರದ
ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿನ ಆಯ್ದ ಕೂಡು ಸ್ಥಳಗಳಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣದ ಯೋಜನೆ ಅಡಿಯಲ್ಲಿ
ಶಿವನಗರ 1 ಮತ್ತು 8ನೇ ಮುಖ್ಯ ರಸ್ತೆ ಕೂಡು ಸ್ಥಳದಲ್ಲಿ 71.98 ಕೋಟಿ ರೂ.
ವೆಚ್ಚದಲ್ಲಿ ನಿರ್ಮಾಣಗೊಂಡಿರುವ 655 ಮೀಟರ್ ಉದ್ದದ
"ಇಂಟಿಗ್ರೇಟೆಡ್ ಮೇಲುಸೇತುವೆ"ಯ
ಉದ್ಘಾಟನಾ ಕಾರ್ಯಕ್ರಮ
ದಿನಾಂಕ:- 4ನೇ ಅಕ್ಟೋಬರ್ 2021 ಸೋಮವಾರ, ಸಮಯ:- ಬೆಳಿಗ್ಗೆ 10.30 ಗಂಟೆಗೆ
ಸ್ಥಳ:- ಶಿವನಗರ 1 ಮತ್ತು 8ನೇ ಮುಖ್ಯ ರಸ್ತೆಯ ಕೂಡು ಸ್ಥಳ, ವೆಸ್ಟ್ ಆಫ್ ಕಾರ್ಡ್ ರಸ್ತೆ, ರಾಜಾಜಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು

ಉದ್ಘಾಟನೆ :-
ಶ್ರೀ ಬಸವರಾಜ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

"ಇಂಟಿಗ್ರೇಟೆಡ್ ಮೇಲು ಸೇತುವೆಯ" ವಿವರ:

1	ಯೋಜನೆಯ ಮೊತ್ತ (ರೂ.ಗಳಲ್ಲಿ)	71.98 ಕೋಟಿಗಳು
2	ಮೇಲು ಸೇತುವೆಯ ಉದ್ದ (ವಯಾಡಕ್ಟ್)	391.00 ಮೀ
	ರ್‍ಯಾಂಪ್ ಉದ್ದ (ಮಂಜುನಾಥನಗರ ಕಡೆಗೆ)	107.77 ಮೀ.
	ರ್‍ಯಾಂಪ್ ಉದ್ದ (ಬಸವೇಶ್ವರನಗರ ಕಡೆಗೆ)	155.91 ಮೀ
	ಮೇಲು ಸೇತುವೆಯ ಒಟ್ಟಾರೆ ಉದ್ದ	654.68 ಮೀ
3	ಪಥಗಳು	2 X 7.5 ಮೀ ದ್ವಿಮುಖ ಸಂಚಾರದ 4 ಪಥಗಳು
4	ಮೇಲು ಸೇತುವೆಯ ಎತ್ತರ (Vertical Clearance)	4.5 ಮೀ.

-: ಘನ ಉಪಸ್ಥಿತಿ :-
ಶ್ರೀಮತಿ ನಿರ್ಮಲ ಸೀತಾರಾಮನ್ - ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ - ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರ್ಕಾರ

-: ಅಧ್ಯಕ್ಷತೆ :-
ಶ್ರೀ ಎಸ್. ಸುರೇಶ್‌ಕುಮಾರ್ - ಮಾನ್ಯ ಮಾಜಿ ಸಚಿವರು ಹಾಗೂ ಶಾಸಕರು (ವಿಧಾನಸಭೆ), ರಾಜಾಜಿನಗರ ವಿಧಾನಸಭಾ ಕ್ಷೇತ್ರ



ಮಾಜಿ ಸಚಿವರು ಹಾಗೂ ಮಾನ್ಯ ಶಾಸಕರಾದ ಶ್ರೀ ಸುರೇಶ್ ಕುಮಾರ್ ರವರು ಮೇಲ್ಸೇತುವೆ ಪ್ರಗತಿಯನ್ನು ಪರಿಶೀಲಿಸುತ್ತಿರುವುದು.

-: ಮುಖ್ಯ ಅತಿಥಿಗಳು :-
ಶ್ರೀ ಆರ್. ಅಶೋಕ್ - ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ವಿ.ಸೋಮಣ್ಣ - ಮಾನ್ಯ ವಸತಿ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಡಾ|| ಸಿ.ಎನ್.ಅಶ್ವತ್ಥ ನಾರಾಯಣ - ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಬಿ.ಎ. ಬಸವರಾಜ - ಮಾನ್ಯ ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್.ಟಿ.ಸೋಮಶೇಖರ್ - ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಗೋಪಾಲಯ್ಯ.ಕೆ. - ಮಾನ್ಯ ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಮುನಿರತ್ನ - ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎನ್.ನಾಗರಾಜು(ಎಂ.ಟಿ.ಬಿ) - ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್.ಆರ್. ವಿಶ್ವನಾಥ್ - ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು (ವಿಧಾನಸಭೆ), ಯಲಹಂಕ ವಿಧಾನಸಭಾ ಕ್ಷೇತ್ರ,
ಶ್ರೀ ಎಂ. ಕೃಷ್ಣಪ್ಪ - ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು (ವಿಧಾನಸಭೆ), ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಪಿ.ಸಿ.ಮೋಹನ್ - ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ಕೇಂದ್ರ ಕ್ಷೇತ್ರ
ಶ್ರೀ ಕೆ.ಸಿ.ರಾಮಮೂರ್ತಿ - ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್ - ಮಾನ್ಯ ಸಂಸದರು (ರಾಜ್ಯಸಭೆ)
ಡಾ|| ಎಲ್.ಹನುಮಂತಯ್ಯ - ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ.ಚಂದ್ರಶೇಖರ್ - ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ - ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಬಿ.ಕೆ. ಹರಿಪ್ರಸಾದ್ - ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಪುಟ್ಟಣ್ಣ - ಮಾನ್ಯ ಶಾಸಕರು (ವಿಧಾನಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ.ಕೆ.ಗೋವಿಂದರಾಜ್ - ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಪಿ.ಆರ್.ರಮೇಶ್ - ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಅ.ದೇವೇಗೌಡ - ಮಾನ್ಯ ಶಾಸಕರು (ವಿಧಾನಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಹೆಚ್.ಎಂ.ರಮೇಶಗೌಡ - ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಮುನಿರಾಜುಗೌಡ.ಪಿ.ಎಂ(ತುಳಸಿ) - ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರುಗಳಿಗೆ ಆದರದ ಸ್ವಾಗತ

"ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸೋಣ, ಕೊರೋನಾ ವಿರುದ್ಧ ಜಯಗಳಿಸೋಣ"

ರಾಕೇಶ್ ಸಿಂಗ್, ಭಾ.ಆ.ಸೇ - ಆಡಳಿತಗಾರರು, ಬಿಬಿಎಂಪಿ
ಗೌರವ್ ಗುಪ್ತ, ಭಾ.ಆ.ಸೇ - ಮುಖ್ಯ ಆಯುಕ್ತರು, ಬಿಬಿಎಂಪಿ

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ"

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಮುಖಾಮುಖಿ: ರಂಗ ನಿರ್ದೇಶಕಿ, ಚಿತ್ರನಟಿ 'ರಂಗಶಂಕರ'ದ ರೂವಾರಿ ಆರುಂಧತಿ ನಾಗ್ ಅವರ ಜೊತೆಗೆ
ಸೆಲೆಬ್ರಿಟಿ LIVE
ಸಂಜೆ 4 ರಿಂದ 5

ಜಮ್ಮು–ಕಾಶ್ಮೀರ: ಉರಿ ಸೆಕ್ಟರ್‌ನಲ್ಲಿ ಭದ್ರತಾಪಡೆಗಳ ಕಾರ್ಯಾಚರಣೆ

30 ಕೆ.ಜಿ ನಿಷೇಧಿತ ವಸ್ತು ಜಪ್ತಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉರಿ ಸೆಕ್ಟರ್‌ನಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ₹ 25 ಕೋಟಿ ಮೌಲ್ಯದ 30 ಕೆ.ಜಿಯಷ್ಟು ನಿಷೇಧಿತ ವಸ್ತುವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಕೆಲವರು ಅನುಮಾನಾಸ್ಪದವಾಗಿ ಓಡಾಡುತ್ತಿದ್ದುದನ್ನು ಭದ್ರತಾಪಡೆಗಳು ಶನಿವಾರ ಗಮನಿಸಿ,

ಶೋಧ ಕಾರ್ಯ ಕೈಗೊಂಡವು. ಡ್ರಗ್ಸ್ ಹೋಲುವಂತಹ ವಸ್ತುವನ್ನು ಬೀಳಿಸಿದ್ದನ್ನು ಪತ್ತೆ ಹಚ್ಚಿ, ಆ ವಸ್ತುವನ್ನು ವಶಪಡಿಸಿಕೊಳ್ಳಲಾಯಿತು' ಎಂದು ಹಿರಿಯ ಎಸ್ಪಿ ರಯೀಸ್ ಮೊಹಮ್ಮದ್ ಭಟ್ ಸುದ್ದಿಗಾರರಿಗೆ ತಿಳಿಸಿದರು.

'ಎಲ್‌ಒಸಿಯ ಭಾರತದ ಗಡಿಯೊಳಗೆ ಈ ಮಾದಕವಸ್ತುವಿನ ಕಳ್ಳಸಾಗಣೆಗೆ ಪೆಡ್ಲರ್‌ಗಳು ಯತ್ನಿಸುತ್ತಿದ್ದರು. ಭದ್ರತಾಪಡೆಗಳು ಕಾರ್ಯಾಚರಣೆಗೆ ಮುಂದಾದ ಕೂಡಲೇ ಅವರು ಅಲ್ಲಿಂದ ಕಾಲ್ಕಿತ್ತರು' ಎಂದೂ ಭಟ್ ಹೇಳಿದರು.

'ಘಟನಾ ಸ್ಥಳದಲ್ಲಿ ಒಂದು ಟೋಪಿ, ಎರಡು ಬ್ಯಾಕ್‌ಪ್ಯಾಕ್‌ಗಳು, ಎರಡು ಗೋಣಿಚೀಲಗಳನ್ನು ಸಹ ಜಪ್ತಿ ಮಾಡಲಾಗಿದೆ'.

'ಪಾಕಿಸ್ತಾನದ ಗುರುತುಗಳನ್ನು ಹೊಂದಿರುವ, ಒಟ್ಟು 25–30 ಕೆ.ಜಿ ತೂಕದ ಎರಡು ಬ್ಯಾಗ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡಿರುವ ಮಾದಕವಸ್ತು ಯಾವುದು ಎಂಬ ಬಗ್ಗೆ ಪರಿಶೀಲನೆ ನಡೆಯುತ್ತಿದೆ' ಎಂದರು.

'ಇತ್ತೀಚೆಗೆ ಗಡಿಯಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಪತ್ತೆ ಹಚ್ಚಲಾಗಿದೆ. ಇದು ಪಾಕಿಸ್ತಾನ ಮೂಲದ ಮಾದಕ ವಸ್ತು ಜಾಲ ಹಾಗೂ ಭಯೋತ್ಪಾದಕರ ನಡುವಿನ ನಂಟನ್ನು ಸೂಚಿಸುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ವೈದ್ಯಕೀಯ ಆಮ್ಲಜನಕ ಕೊರತೆ: ಉನ್ನತ ಮಟ್ಟದ ತನಿಖೆ ಕೋರಿ ಅರ್ಜಿ

ನವದೆಹಲಿ (ಪಿಟಿಐ): ಕೋವಿಡ್–19ನ ಎರಡನೇ ಅಲೆ ವೇಳೆ ವೈದ್ಯಕೀಯ ಆಮ್ಲಜನಕ ಲಭ್ಯವಿರಲಿಲ್ಲ ಮತ್ತು ಪೂರೈಕೆ ಇರಲಿಲ್ಲ ಎಂಬ ಆರೋಪಗಳ ಕುರಿತು ಆಯೋಗವೊಂದರಿಂದ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಹಾಗೂ ಬಿ.ವಿ.ನಾಗರತ್ನ ಅವರಿರುವ ನ್ಯಾಯಪೀಠವು ಸೋಮವಾರ (ಅ.4) ಈ ಅರ್ಜಿಯ ವಿಚಾರಣೆ ನಡೆಸಲಿದೆ. ದೆಹಲಿ ನಿವಾಸಿಯೊಬ್ಬರ ಪರವಾಗಿ ವಕೀಲ ರಾಜೀವ್ ಕುಮಾರ್ ದುಬೆ ಈ ಅರ್ಜಿ ಸಲ್ಲಿಸಿದ್ದಾರೆ.

ಕೋವಿಡ್‌ನ 2ನೇ ಅಲೆಯ ಮಾರ್ಚ್ ಹಾಗೂ ಏಪ್ರಿಲ್ ಅವಧಿಯಲ್ಲಿ ವೈದ್ಯಕೀಯ ಆಮ್ಲಜನಕ ಕೊರತೆ ದೇಶದ ವಿವಿಧ ಭಾಗಗಳಲ್ಲಿ ಸಾಕಷ್ಟು ಜನ ರೋಗಿಗಳ ಸಾವಿಗೆ ಕಾರಣವಾಯಿತು ಎಂದು ಅರ್ಜಿಯಲ್ಲಿ ದೂರಲಾಗಿದೆ.

ಈ ವಿಷಯ ಕುರಿತು ಕೋರ್ಟ್ ಮೇಲ್ವಿಚಾರಣೆಯಲ್ಲಿ ಸಿಬಿಐ ಅಥವಾ ಇತರ ಸಂಸ್ಥೆಗಳಿಂದ ತನಿಖೆ ನಡೆಸಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ನೇತೃತ್ವದ ಆಯೋಗದಿಂದ ಈ ಕುರಿತು ತನಿಖೆ ನಡೆಸುವಂತೆಯೂ ಅರ್ಜಿದಾರರು ಕೋರಿದ್ದಾರೆ.

ಕೇಂದ್ರ ಸರ್ಕಾರ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ವಿವಿಧ ರಾಜ್ಯಗಳ ಆರೋಗ್ಯ ಇಲಾಖೆಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಮಹಾರಾಷ್ಟ್ರದ 'ವಾಡಾ ಕೋಲಂ ಅಕ್ಕಿ'ಗೆ ಜಿಐ ಟ್ಯಾಗ್ ಗರಿ

ಠಾಣೆ, ಮಹಾರಾಷ್ಟ್ರ (ಪಿಟಿಐ): ಪಾಲ್ಘರ್ ಜಿಲ್ಲೆಯ ವಾಡಾ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯಲಾಗುವ 'ಕೋಲಂ ಅಕ್ಕಿ'ಗೆ 'ಭೌಗೋಳಿಕ ಸೂಚಿ' (ಜಿಐ ಟ್ಯಾಗ್) ಮಾನ್ಯತೆ ಲಭಿಸಿದೆ.

ಇದು 'ವಾಡಾ ಕೋಲಂ ಅಕ್ಕಿ' ಎಂದೇ ಪ್ರಸಿದ್ಧ. ಈ ವಿಧದ ಅಕ್ಕಿಯನ್ನು 'ಝಿನಿ' ಅಥವಾ 'ಜ್ಹಿನಿ ಅಕ್ಕಿ' ಎಂದೂ ಕರೆಯಲಾಗುತ್ತದೆ.

'ಜಿಐ ಟ್ಯಾಗ್ ಲಭಿಸಿರುವುದರಿಂದ ವಾಡಾ ಅಕ್ಕಿಗೆ ವಿಶಿಷ್ಟ ಗುರುತು ಸಿಗುವುದಲ್ಲದೇ, ಬೃಹತ್ ಮಾರುಕಟ್ಟೆ ಕೂಡ ಲಭಿಸುವುದು' ಎಂದು ಕೃಷಿ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕ ಅಂಕುಶ್ ಮಾನೆ ಭಾನುವಾರ ತಿಳಿಸಿದ್ದಾರೆ.

'ಈ ವಿಶಿಷ್ಟ ತಳಿ ಅಕ್ಕಿಯ ಒಂದು ಕೆ.ಜಿ ದರ ಸ್ಥಳೀಯ ಮಾರುಕಟ್ಟೆಯಲ್ಲಿ ₹ 60–70. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಈ ಅಕ್ಕಿಗೆ ಭಾರಿ ಬೇಡಿಕೆ ಇದೆ' ಎಂದು ಅವರು ತಿಳಿಸಿದರು.

'ವಾಡಾ ತಾಲ್ಲೂಕಿನ 180 ಗ್ರಾಮಗಳ 2,500 ಜನ ರೈತರು ಈ ಅಕ್ಕಿ ಕೃಷಿಯಲ್ಲಿ ತೊಡಗಿದ್ದಾರೆ' ಎಂದು ಮೂರನೇ ತಲೆಮಾರಿನ ಕೃಷಿಕ ಅನಿಲ್ ಪಾಟೀಲ್ ಹೇಳಿದರು.

ಭಯೋತ್ಪಾದಕರಿಗೆ ನೆರವು: ಪೂಂಚ್ ಜಿಲ್ಲೆಯ ವಿವಿಧೆಡೆ ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಮೂಲಕ ವ್ಯಾಪಾರ ಮಾಡಿ ಅದರಿಂದ ಬಂದ ಹಣವನ್ನು ಭಯೋತ್ಪಾದನಾ ಸಂಘಟನೆಗಳಿಗೆ ದೇಣಿಗೆ ನೀಡಲಾಗುತ್ತಿದೆ ಎನ್ನುವ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಭಾನುವಾರ ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯ ಅನೇಕ ಸ್ಥಳಗಳ ಮೇಲೆ ದಾಳಿ ನಡೆಸಿದೆ.

'ಪೊಲೀಸರು, ಸಿಆರ್‌ಪಿಎಫ್ ಸಿಬ್ಬಂದಿ ಜತೆಗೂಡಿ ಎನ್‌ಐಎನ ಅಧಿಕಾರಿಗಳು ಪೂಂಚ್‌ನ ಶಂಕಿತ ಎಲ್‌ಒಸಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿದ್ದ 9 ಸ್ಥಳಗಳ ಮೇಲೆ ದಾಳಿ ಮಾಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರಸ್ತುತ ಪ್ರಕರಣದಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ಕ್ಯಾಲಿಫೋರ್ನಿಯಾ ಬಾದಾಮಿ (ಬಾದಾಮ್–ಗಿರಿ) ಮತ್ತು ಇತರ ವಸ್ತುಗಳನ್ನು ಆಮದು ಮಾಡಿಕೊಳ್ಳುವಾಗ ಭಾರಿ ಮೊತ್ತದ ಹಣವನ್ನು ವರ್ಗಾಯಿಸಲಾಗಿದೆ. ಬಾರಾಮುಲ್ಲಾ ಜಿಲ್ಲೆಯ ಉರಿ ಪ್ರದೇಶ ಹಾಗೂ ಪೂಂಚ್ ಜಿಲ್ಲೆಯ ಚಕ್ಕನ್ ದ ಭಾಗ್ ಪ್ರದೇಶದಲ್ಲಿರುವ ಎಲ್‌ಒಸಿ ಟ್ರೇಡ್ ಫೆಸಿಲಿಟೇಷನ್ ಸೆಂಟರ್ (ಟಿಎಫ್‌ಸಿ) ಮೂಲಕ ಇತರ ವಸ್ತುಗಳನ್ನು ಆಮದು ಮಾಡಿಕೊಳ್ಳುವಾಗ ಹಣ ವರ್ಗಾಯಿಸಲಾಗಿದೆ' ಎಂದು ಎನ್‌ಐಎ ತನ್ನ ಹೇಳಿಕೆಯಲ್ಲಿ ಮಾಹಿತಿ ನೀಡಿದೆ.

'ಹೀಗೆ ಸಾಗಿಸಲಾಗುತ್ತಿದ್ದ ಹಣವನ್ನು ಜಮ್ಮು ಮತ್ತು ಕಾಶ್ಮೀರದಲ್ಲಿನ ಪ್ರತ್ಯೇಕವಾದಿಗಳು ಮತ್ತು ಭಯೋತ್ಪಾದನಾ ಸಂಘಟನೆಗಳ ಬಳಕೆಗಾಗಿ ಒದಗಿಸಲಾಗುತ್ತಿತ್ತು. ಕೆಲವು ವ್ಯಾಪಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಸರಕುಗಳನ್ನು ಆಮದು ಮಾಡಿಕೊಂಡು ಭಯೋತ್ಪಾದನಾ ಸಂಘಟನೆಗಳಿಗೆ ನೆರವು ನೀಡುತ್ತಿದ್ದರು. ಕೆಲ ವ್ಯಾಪಾರಿಗಳು ಈ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಶಂಕೆ ಇದೆ ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದೂ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2008ರಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ನಡುವಣ ಬಾಂಧವ್ಯ ವೃದ್ಧಿಗಾಗಿ ಎಲ್‌ಒಸಿ ವ್ಯಾಪಾರ ಆರಂಭಿಸಲಾಗಿತ್ತು. ಪರಸ್ಪರ ವಿನಿಮಯ ವ್ಯವಸ್ಥೆಯನ್ನು ಆಧರಿಸಿದ್ದ ಈ ವ್ಯಾಪಾರದಲ್ಲಿ ಮೂರನೇ ವ್ಯಕ್ತಿಯ ಸರಕುಗಳಿಗೆ ಅನುಮತಿ ಇರಲಿಲ್ಲ.

ಸಂಭ್ರಮ

ಭವಾನಿಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ದಾಖಲೆಯ ಗೆಲುವು ಸಾಧಿಸಿದ್ದು, ಬೆಂಬಲಿಗರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

'ಝೈಕೋವ್–ಡಿ' ಲಸಿಕೆ ದರ ₹ 1,900 ನಿಗದಿ

ನವದೆಹಲಿ (ಪಿಟಿಐ): ಝೈಡಸ್–ಕ್ಯಾಡಿಲಾ ಕಂಪನಿ ತಾನು ಉತ್ಪಾದಿಸಿರುವ ಕೋವಿಡ್–19 ಲಸಿಕೆ 'ಝೈಕೋವ್–ಡಿ'ಗೆ ₹ 1,900 ದರ ನಿಗದಿಪಡಿಸಿದ್ದು, ಈ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಆದರೆ, ಲಸಿಕೆಯ ದರವನ್ನು ಇನ್ನಷ್ಟು ಕಡಿಮೆಗೊಳಿಸುವ ಸಂಬಂಧ ಕಂಪನಿಯೊಂದಿಗೆ ಕೇಂದ್ರ ಸರ್ಕಾರ ಮಾತುಕತೆ ನಡೆಸುತ್ತಿದೆ. ಈ ವಾರ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಗಳಿವೆ ಎಂದು ಮೂಲಗಳು ಹೇಳಿವೆ.

ಮೂರು ಡೋಸ್‌ಗಳ ಈ ಲಸಿಕೆಯನ್ನು 12 ವರ್ಷ ಮೇಲ್ಪಟ್ಟವರಿಗೆ ನೀಡಬಹುದಾಗಿದೆ. ಮೊದಲ

ಡೋಸ್ ಪಡೆದ ನಂತರ ಕ್ರಮವಾಗಿ 28 ಮತ್ತು 56ನೇ ದಿನ ಎರಡು ಹಾಗೂ ಮೂರನೇ ಡೋಸ್ ನೀಡಲಾಗುತ್ತದೆ.

'ಮೂರು ಡೋಸ್‌ಗಳು ಸೇರಿದಂತೆ ಲಸಿಕೆಗೆ ಕಂಪನಿಯು ₹ 1,900 ದರ ನಿಗದಿಪಡಿಸಿದೆ. ದರ ಇಳಿಸುವಂತೆ ಕಂಪನಿಗೆ ಕೋರಲಾಗಿದೆ. ಈ ಸಂಬಂಧ ಮೂರು ಸುತ್ತಿನ ಸಭೆಗಳನ್ನು ನಡೆಸಲಾಗಿದೆ. ಕಂಪನಿಯ ಪ್ರತಿಕ್ರಿಯೆ ಬಂದ ಬಳಿಕ, ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಇವೇ ಮೂಲಗಳು ಹೇಳಿವೆ.

ಮಮತಾಗೆ ಭಾರಿ ಗೆಲುವು

ಒಂದನೇ ಪುಟದಿಂದ...

'ಭವಾನಿಪುರದ ಜನತೆಯಿಂದ ತಕ್ಕ ಉತ್ತರ': ಗೆಲುವಿನ ಬಳಿಕ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಮಮತಾ, 'ನಂದಿಗ್ರಾಮದಲ್ಲಿ ತಮ್ಮ ವಿರುದ್ಧ ಸಂಚು ರೂಪಿಸಿ, ಸೋಲಿಗೆ ಕಾರಣರಾದವರಿಗೆ ಭವಾನಿಪುರದ ಜನರು ತಕ್ಕ ಉತ್ತರ ನೀಡಿದ್ದಾರೆ' ಎಂದರು.

ಪ್ರತಿಯೊಂದು ವಾರ್ಡ್‌ನಲ್ಲಿಯೂ ತಮಗೆ ಗೆಲುವು ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದ ಅವರು, ಭವಾನಿಪುರ ಹಾಗೂ ಪಶ್ಚಿಮ ಬಂಗಾಳದ ಜನತೆಗೆ ಧನ್ಯವಾದ ಹೇಳಿದರು.

'ಭವಾನಿಪುರದ ಶೇ 46 ರಷ್ಟು ಜನರು ಬಂಗಾಳಿಯೇತರರು. ಅವರೆಲ್ಲರೂ ನನಗೆ ಮತ ಹಾಕಿದ್ದಾರೆ. ಅದರೊಂದಿಗೆ, ಇಡೀ ಪಶ್ಚಿಮ ಬಂಗಾಳದ ಜನರೆಲ್ಲ ಭವಾನಿಪುರದತ್ತಲೇ ನೋಡುತ್ತಿದ್ದುದು ನನಗೆ ಹುಮ್ಮಸ್ಸನ್ನು ನೀಡಿತು' ಎಂದರು.

'ಟಿಎಂಸಿ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಬಿಜೆಪಿ ಏನೆಲ್ಲ ಪಿತೂರಿ ನಡೆಸಿತು. ನಾನು ಚುನಾವಣೆಗೆ ನಿಲ್ಲುವುದನ್ನೇ ತಪ್ಪಿಸುವುದಕ್ಕಾಗಿ ಅವರು ನನ್ನ ಕಾಲಿಗೆ ಗಾಯ ಮಾಡಿದರು' ಎಂದು ಆರೋಪಿಸಿದ ಮಮತಾ, ಬಹುಮತದಿಂದ ತಮ್ಮನ್ನು ಗೆಲ್ಲಿಸಿದ ಜನರಿಗೆ ಹಾಗೂ ಆರು ತಿಂಗಳ ಒಳಗಾಗಿ ಉಪ ಚುನಾವಣೆ ನಡೆಸಿದ ಚುನಾವಣಾ ಆಯೋಗಕ್ಕೆ ಧನ್ಯವಾದ ತಿಳಿಸಿದರು.

'ಜನರಿಗೆ ಮುಕ್ತ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ ಚಿತ್ರಣವೇ ಬೇರೆ ಇರುತ್ತಿತ್ತು' ಎಂದು ಪರಾಜಿತ ಅಭ್ಯರ್ಥಿ ಬಿಜೆಪಿಯ ಪ್ರಿಯಾಂಕಾ ತಿಬ್ರೆಬಾಲ್ ಆರೋಪಿಸಿದ್ದಾರೆ. ಭವಾನಿಪುರದಲ್ಲಿ ಚುನಾವಣಾ ಅಕ್ರಮ ಹಾಗೂ ನಕಲಿ ಮತದಾನ ನಡೆದಿದೆ ಎಂದು ದೂರಿದ್ದಾರೆ.

ಮುರ್ಷಿದಾಬಾದ್: ಕಾಂಗ್ರೆಸ್ ಪ್ರಾಬಲ್ಯ ಮುರಿದ ಟಿಎಂಸಿ

ಮುರ್ಷಿದಾಬಾದ್ ಜಿಲ್ಲೆಯ ಜಂಗೀಪುರ ಹಾಗೂ ಸಂಶೇರ್‌ಗಂಜ್ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲೂ ಟಿಎಂಸಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಜಂಗೀಪುರದ ಜಾಕಿರ್ ಹುಸೇನ್, 1,36,444 ಮತ ಪಡೆದಿದ್ದಾರೆ. ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಸುಜಿತ್ ದಾಸ್ 43,964 ಮತಗಳನ್ನು ಪಡೆದಿದ್ದಾರೆ. ಹುಸೇನ್ ಅವರು 92,480 ಮತಗಳ ಅಂತರದ ಭರ್ಜರಿ ಗೆಲುವು ಕಂಡಿದ್ದಾರೆ.

ಸಂಶೇರ್‌ಗಂಜ್‌ನಲ್ಲಿ ಟಿಎಂಸಿ ಅಭ್ಯರ್ಥಿ ಅಮರುಲ್ ಇಸ್ಲಾಂ ಅವರು 26,379 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಅವರು 96,417 ಮತಗಳನ್ನು ಪಡೆದಿದ್ದರೆ, ಅವರ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷದ ಜೈದುರ್ ರೆಹಮಾನ್ 70,038 ಮತಗಳನ್ನು ಪಡೆದಿದ್ದಾರೆ.

ಈ ಹಿಂದೆ ಕಾಂಗ್ರೆಸ್ ಪ್ರಾಬಲ್ಯವಿದ್ದ ಮುರ್ಷಿದಾಬಾದ್ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಟಿಎಂಸಿ ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ಗೆ ರಾಜ್ಯದಲ್ಲಿ ಮತ್ತಷ್ಟು ಕಠಿಣ ಪರಿಸ್ಥಿತಿ ಎದುರಾಗಿದೆ.

ಚುನಾವಣೆ ಪ್ರಚಾರ: ₹154 ಕೋಟಿ ವೆಚ್ಚ ಮಾಡಿದ ಟಿಎಂಸಿ

ನವದೆಹಲಿ (ಪಿಟಿಐ): ಈ ವರ್ಷದ ಏಪ್ರಿಲ್–ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ತನ್ನ ಪ್ರಚಾರ ಕಾರ್ಯಗಳಿಗಾಗಿ ₹154.28 ಕೋಟಿ ವೆಚ್ಚ ಮಾಡಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಇದರ ಜತೆಗೇ ನಡೆದ ತಮಿಳುನಾಡು ಮತ್ತು ಪುದುಚೇರಿ ಚುನಾವಣೆಗಳಲ್ಲಿ ಡಿಎಂಕೆ ತನ್ನ ಪ್ರಚಾರ ಕಾರ್ಯಗಳಿಗಾಗಿ ₹114.14 ಕೋಟಿ ವೆಚ್ಚ ಮಾಡಿದೆ ಎಂದು ಆಯೋಗ ತಿಳಿಸಿದೆ.

ಉ. ಪ್ರದೇಶ: ಒಬಿಸಿ ಮತ ಸೆಳೆಯಲು ಕಾರ್ಯತಂತ್ರ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ರಾಜ್ಯ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗೆ ಭರದಿಂದ ಸಿದ್ಧತೆ ಆರಂಭಿಸಿರುವ ಬಿಜೆಪಿಯು ಅಲ್ಲಿನ ಪರಿಶಿಷ್ಟ ಜಾತಿ, ಇತರೆ ಹಿಂದುಳಿದ ವರ್ಗಗಳ ಮತಗಳನ್ನು ಸೆಳೆಯಲು ಒತ್ತು ನೀಡಿದೆ.

ಜಾತಿ ಕೇಂದ್ರಿತ ರ‍್ಯಾಲಿಗಳ ಆಯೋಜನೆ, ಜಾತಿ ಆಧರಿಸಿ ಕಾರ್ಯಕರ್ತರ ತಂಡಗಳ ರಚನೆ ಮೂಲಕ ಆಯಾ ಜಾತಿಗಳನ್ನು ಸೆಳೆಯಲು ಯೋಜನೆ ರೂಪಿಸಿದೆ. ಒಬಿಸಿಯ 202 ರ‍್ಯಾಲಿಗಳು, ಪರಿಶಿಷ್ಟರ ಸಮ್ಮೇಳನ ನಡೆಸಲು ಉದ್ದೇಶಿಸಿದೆ.

ಅಲ್ಲದೆ, ಮುಸಲ್ಮಾನರ ಪ್ರಾಬಲ್ಯವುಳ್ಳ ಮತಗಟ್ಟೆಗಳನ್ನು ಕೇಂದ್ರಿಕರಿಸಿ 21 ಸದಸ್ಯರ ತಂಡ ರಚಿಸಲು ಪಕ್ಷ ತೀರ್ಮಾನಿಸಿದೆ. ಈಗಾಗಲೇ ಧರ್ಮೇಂದ್ರ ಪ್ರಧಾನ್ ಒಳಗೊಂಡು ವಿವಿಧ ಜಾತಿಗಳ ಮುಖಂಡರನ್ನು ಚುನಾವಣಾ ಉಸ್ತುವಾರಿಗಳಾಗಿ ನೇಮಿಸಿದೆ.

ಅತ್ಯಧಿಕ ಸಂಖ್ಯೆಯಲ್ಲಿ ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶವು ರಾಜಕೀಯವಾಗಿ ನಿರ್ಣಾಯಕವಾಗಿದೆ. ರಾಜ್ಯದ ವಿವಿಧ ಜಾತಿಗಳ ಪ್ರಾಬಲ್ಯವನ್ನು ಆಧರಿಸಿ ಪೂರಕವಾಗಿ ಸಿದ್ಧತೆ ನಡೆಸಿದೆ.

ಒಬಿಸಿ ವಿವಿಧ ಜಾತಿಗಳನ್ನು ಗುರಿಯಾಗಿಸಿ ರ‍್ಯಾಲಿಗಳ ಆಯೋಜನೆ ಸೇರಿದಂತೆ ಮೂರು ಹಂತದ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥ ನರೇಂದ್ರ ಕುಮಾರ್ ಕಶ್ಯಪ್ ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ, ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಭೂಪೇಂದರ್ ಯಾದವ್ ಅವರು ಮಾತನಾಡುವರು. ಕಶ್ಯಪ್, ರಾಜ್‌ಭರ್, ಪಾಲ್, ಪ್ರಜಾಪತಿ, ಜೋಗಿ, ತೇಲಿ, ಯಾದವ್, ಗುಜ್ಜಾರ್, ಸೈನಿ, ಚೌರಾಸಿಯ, ಕುರ್ಮಿ, ಜಾಟ್ ಸೇರಿದಂತೆ ವಿವಿಧ ಜಾತಿಗಳ ಆಧರಿತ ಸಮ್ಮೇಳನ ನಡೆಯಲಿವೆ.

ಜಾಟ್ ಸಮುದಾಯ ಬಹುತೇಕ ರೈತರನ್ನು ಪ್ರತಿನಿಧಿಸಲಿದೆ. ಇದು, ಉತ್ತರ ಪ್ರದೇಶದಲ್ಲಿ ಒಬಿಸಿ ವ್ಯಾಪ್ತಿಗೆ ಬರುವುದಿಲ್ಲ. ರಾಜ್ಯದಲ್ಲಿ ಜಾಟ್ ಪಾತ್ರ ನಿರ್ಣಾಯಕವಾಗಿದೆ. ಉತ್ತರ ಪ್ರದೇಶವು ಪ್ರಸ್ತುತ ರೈತರ ಪ್ರತಿಭಟನೆಯ ಕೇಂದ್ರಸ್ಥಾನವೂ ಆಗಿದೆ.

ಮೊದಲ ಹಂತದಲ್ಲಿ 20 ಸಾಮಾಜಿಕ ಸಮ್ಮೇಳನ ನಡೆಯಲಿವೆ. ಎರಡನೇ ಹಂತದಲ್ಲಿ ಪಕ್ಷದ ಕಾರ್ಯಕರ್ತರು ಜಾತಿಗಳ ಮುಖಂಡರನ್ನು ಭೇಟಿ ಮಾಡಲಿದ್ದು, ಪಕ್ಷದ ಸಾಧನೆ ವಿವರಿಸುವರು. ಮೂರನೇ ಮತ್ತು ಅಂತಿಮ ಹಂತದಲ್ಲಿ ಎರಡು ಕ್ಷೇತ್ರಗಳಿಗೆ ಒಂದರಂತೆ 202 ಒಬಿಸಿ ರ‍್ಯಾಲಿಗಳನ್ನು ಆಯೋಜಿಸಲಾಗುತ್ತದೆ. ಆಯಾ ಜಾತಿ ಮುಖಂಡರು ಮಾತನಾಡುವರು.

ಅಂತೆಯೇ, ಪಕ್ಷದ ಎಸ್‌ಸಿ ಮೋರ್ಚಾವು ಅನುಸೂಚಿತ ಜಾತಿ ಸಮ್ಮೇಳನಗಳನ್ನು 75 ಜಿಲ್ಲೆಗಳಲ್ಲಿ ಆಯೋಜಿಸಲು ಉದ್ದೇಶಿಸಿದೆ ಎಂದು ಕಶ್ಯಪ್ ಅವರು ತಿಳಿಸಿದರು.

ಬಿಜೆಪಿಯ ನೂತನ ಉಪಾಧ್ಯಕ್ಷೆ ಬೇಬಿ ರಾಣಿ ಮೌರ್ಯ ಅವರಿಗೆ ವಿವಿಧೆಡೆ ಸನ್ಮಾನ ಆಯೋಜಿಸಲಾಗುತ್ತದೆ. ಆಗ್ರಾ ಮೂಲದ ರಾಣಿ ಮೌರ್ಯ, ಜಟಾವ್ ಸಮುದಾಯಕ್ಕೆ ಸೇರಿದ್ದು, ಈಚೆಗೆ ಉತ್ತರಾಖಂಡ ರಾಜ್ಯಪಾಲರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರಾದ ವಿಜಯ್ ಬಹಾದ್ದೂರ್ ಪಾಠಕ್ ಅವರು, ಪಕ್ಷ ಈಗಾಗಲೇ ಚುನಾವಣೆ ಗುಂಗಿನಲ್ಲಿದೆ. ಜನರನ್ನು ತಲುಪುವ ನಿಟ್ಟಿನಲ್ಲಿ ಸಿದ್ಧತೆಗಳು ನಡೆದಿವೆ ಎಂದರು.

ಬಿಜೆಪಿಯು ರಾಜ್ಯದಲ್ಲಿ ಕಳೆದ ಮೂರು ಚುನಾವಣೆಗಳು ಅಂದರೆ 2014, 2017 ವಿಧಾನಸಭೆ ಚುನಾವಣೆ, 2019ರ ಲೋಕಸಭೆ ಚುನಾವಣೆಯಲ್ಲಿ ಪ್ರತಿಪಕ್ಷಗಳನ್ನು ಹಿಂದಿಕ್ಕಿದ್ದು, ಉತ್ತಮ ಸಾಧನೆ ತೋರಿದೆ.

ಡಿಜಿಪಿ, ಅಡ್ವೊಕೇಟ್ ಜನರಲ್ ಬದಲಿಸಲು ಸಿಧು ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಚರಣ್‌ಜಿತ್ ಸಿಂಗ್ ಚನ್ನಿ ಅವರು ಪಂಜಾಬ್ ಮುಖ್ಯಮಂತ್ರಿಯಾಗಿ ಆಯ್ಕೆ ಆದ ಬಳಿಕ ನೇಮಿಸಿದ್ದ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಮತ್ತು ಅಡ್ವೊಕೇಟ್ ಜನರಲ್ ಅವರನ್ನು ಬದಲಿಸುವಂತೆ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಆಗ್ರಹಿಸಿದ್ದಾರೆ. ಅವರಿಬ್ಬರ ಹುದ್ದೆ ಬದಲಾವಣೆ ಆಗದಿದ್ದರೆ ಜನರಿಗೆ ಮುಖ ತೋರಿಸಲು ಕಾಂಗ್ರೆಸ್‌ಗೆ ಆಗುವುದಿಲ್ಲ ಎಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಸಿಧು, 'ಈಗಿನ ಡಿಜಿಪಿ ಅವರು ಗುರು ಗ್ರಂಥ ಸಾಹಿಬ್‌ಗೆ ಅಪಮಾನ ಮಾಡಿದ ಮೊಕದ್ದಮೆಯಲ್ಲಿ ಜನರಿಗೆ ನ್ಯಾಯ ಒದಗಿಸಿಲ್ಲ. ಮಾದಕವಸ್ತು ಮಾರಾಟದ ಹಿಂದಿರುವವರನ್ನು ಬಂಧಿಸುವಲ್ಲಿ ಕೂಡಾ ವಿಫಲರಾಗಿದ್ದಾರೆ. ಇದರಿಂದಾಗಿ ಜನರು ಮುಖ್ಯಮಂತ್ರಿಯನ್ನು ಕೆಳಗಿಳಿಸಿದ್ದಾರೆ. ಈಗ ಈ ನೇಮಕಾತಿಗಳಿಂದ ಸಂತ್ರಸ್ತರ ಗಾಯದ ಮೇಲೆ ಉಪ್ಪು ಸುರಿದಂತಾಗಿದೆ. ಅವರ ಹುದ್ದೆಗಳನ್ನು ಬದಲಾಯಿಸಬೇಕು. ಇಲ್ಲದಿದ್ದರೆ ನಮಗೆ ಮುಖ ಇರುವುದಿಲ್ಲ' ಎಂದಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿ ಇಕ್ಬಾಲ್ ಪ್ರೀತ್ ಸಿಂಗ್ ಸಹೋಟ ಅವರಿಗೆ ಪೊಲೀಸ್ ಮಹಾನಿರ್ದೇಶಕರಾಗಿ ಹೆಚ್ಚುವರಿ ಜವಾಬ್ದಾರಿ ನೀಡಲಾಗಿತ್ತು. ಎಪಿಎಸ್ ಡಿಯೋಲ್ ಅವರನ್ನು ಅಡ್ವೊಕೇಟ್ ಜನರಲ್ ಆಗಿ ನೇಮಿಸಲಾಗಿತ್ತು. ಈ ನೇಮಕಾತಿಗಳ ಕುರಿತು ಅಸಮಾಧಾನಗೊಂಡ ಸಿಧು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸಿಧು ಅವರ ಬೇಡಿಕೆಗಳಿಗೆ ಅನುಗುಣವಾದ ಬದಲಾವಣೆಗಳಿಗೆ ಸೋಮವಾರ ನಡೆಯಲಿರುವ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡುವ ನಿರೀಕ್ಷೆ ಇದೆ. ಡಿಜಿಪಿ ಹುದ್ದೆಗೆ ಯಾರನ್ನು ನೇಮಕ ಮಾಡಬೇಕು ಎಂದು ಯುಪಿಎಸ್‌ಸಿಗೆ ಈಗಾಗಲೇ ಸರ್ಕಾರ ಪಟ್ಟಿ ಕಳಿಸಿದೆ ಎನ್ನಲಾಗಿದೆ.

ಸಿಧು ಮತ್ತು ಚನ್ನಿ ಅವರು ಸಭೆ ನಡೆಸಿ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮಾಲೋಚನೆ ಸಮಿತಿ ರಚಿಸುವ ನಿರ್ಧಾರ ತೆಗೆದುಕೊಂಡಿದ್ದರು. ಅದಾಗಿ ಮೂರೇ ದಿನಗಳಿಗೆ ಸಿಧು ಈ ಹೇಳಿಕೆ ನೀಡಿದ್ದಾರೆ. ಈ ಮೂಲಕ ಪಂಜಾಬ್ ಕಾಂಗ್ರೆಸ್‌ನಲ್ಲಿ ಭಿನ್ನಮತ ಪೂರ್ಣವಾಗಿ ಶಮನವಾಗಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ.

ಗುಜರಾತ್‌ನ ಗಾಂಧಿನಗರ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಭಾನುವಾರ ಮತದಾನ ಮಾಡಿದ ನರೇಂದ್ರ ಮೋದಿ ಅವರ ತಾಯಿ ಹೀರಾ ಬೆನ್ ಅವರು ಶಾಯಿ ಹಚ್ಚಿದ್ದ ಬೆರಳು ತೋರಿಸಿದರು –ಪಿಟಿಐ ಚಿತ್ರ

ರೈತರ ಮೇಲೆ ಹರಿದ ವಾಹನ: 8 ಬಲಿ

ಒಂದನೇ ಪುಟದಿಂದ...

ಮೌರ್ಯ ಅವರ ಕಾರ್ಯಕ್ರಮ ನಿಗದಿಯಾಗಿದ್ದ ಸ್ಥಳಕ್ಕೆ ಬಿಜೆಪಿಯ ಕೆಲವು ಕಾರ್ಯಕರ್ತರು ಕಾರುಗಳಲ್ಲಿ ಹೋಗುತ್ತಿದ್ದರು. ಆಗ, ರೈತರು ಕಪ್ಪು ಬಾವುಟ ತೋರಿಸಿದರು. ವಾಹನ ಸಾಲಿನ ಒಂದು ವಾಹನವು ಮಗುಚಿತು. ಅದು ಕೆಳಗೆ ಸಿಲುಕಿದ ಇಬ್ಬರು ರೈತರು ಮೃತಪಟ್ಟರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಚಿವ ಮಿಶ್ರಾ ಅವರ ಮಗ ಚಲಾಯಿಸಿದ ಕಾರಿನ ಅಡಿಗೆ ಸಿಲುಕಿ ಮೂವರು ರೈತರು ಮೃತಪಟ್ಟಿದ್ದಾರೆ ಎಂದು ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಗಳಲ್ಲಿ ಕಳೆದ ಹತ್ತು ತಿಂಗಳಿನಿಂದ ನಡೆಯುತ್ತಿರುವ ಪ್ರತಿಭಟನೆಯ ನೇತೃತ್ವ ವಹಿಸಿರುವ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಟ್ವೀಟ್ ಮಾಡಿದೆ. ಗಾಜಿಪುರ ಗಡಿಯಲ್ಲಿ ಪ್ರತಿಭಟನೆ ನಡೆಯುತ್ತಿರುವ ಸ್ಥಳದಲ್ಲಿದ್ದ ಬಿಕೆಯು ನಾಯಕ ರಾಕೇಶ್ ಟಿಕಾಯತ್ ಅವರು ಲಖಿಂಪುರ್–ಖೇರಿಗೆ ಧಾವಿಸಿದ್ದಾರೆ. ಲಖಿಂಪುರ್–ಖೇರಿಯ ಹಲವು ಭಾಗಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಪ್ರತಿಭಟನೆಯ ಬಿಸಿ: ಲಖಿಂಪುರ–ಖೇರಿ ಜಿಲ್ಲೆಯ ತಿಕೋನಿಯಾ ಎಂಬಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಜಯ್ ಮಿಶ್ರಾ ಮತ್ತು ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಭಾಗಹಿಸಬೇಕಿತ್ತು. ಆದರೆ, ಕಾರ್ಯಕ್ರಮದಲ್ಲಿ ಪ್ರತಿಭಟನೆ ನಡೆಸುವುದಾಗಿ ರೈತರು ಎಚ್ಚರಿಸಿದ್ದರು.

ಮೌರ್ಯ ಅವರು ಹೆಲಿಕಾಪ್ಟರ್ ಮೂಲಕ ಬಂದು ತಾತ್ಕಾಲಿಕ ಹೆಲಿಪ್ಯಾಡ್‌ನಲ್ಲಿ ಇಳಿಯಬೇಕಿತ್ತು. ಆದರೆ, ಹೆಲಿಪ್ಯಾಡ್‌ಗೆ ನುಗ್ಗಿದ್ದ ನೂರಾರು ರೈತರು ಅಲ್ಲಿ ಡೇರೆಗಳನ್ನು ಹಾಕಿ ಕುಳಿತಿದ್ದರು. ಹಾಗಾಗಿ, ಮೌರ್ಯ ಅವರ ಕಾರ್ಯಕ್ರಮವನ್ನು ರದ್ದುಪಡಿಸಲಾಯಿತು.

ರೈತರ ಸಾವಿಗೆ ಆಕ್ರೋಶ: ಇಂದು ಪ್ರತಿಭಟನೆ

ನವದೆಹಲಿ (ಪಿಟಿಐ): ಉತ್ತರಪ್ರದೇಶದಲ್ಲಿ ರೈತರ ಮೇಲೆ ವಾಹನ ಹರಿಸಿದ ಕೃತ್ಯ, ರೈತರ ಸಾವು ಖಂಡಿಸಿ ಸೋಮವಾರ (ಅ.4) ದೇಶದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ರೈತರಿಗೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಕರೆನೀಡಿದೆ.

ಲಖಿಂಪುರ್–ಖೇರಿಯಲ್ಲಿನ ಕೃತ್ಯವನ್ನು ಖಂಡಿಸಿ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ ಎಂದು ರೈತ ಮುಖಂಡರಾದ ಯೋಗೇಂದ್ರ ಯಾದವ್ ಮತ್ತು ದರ್ಶನ್ ಪಾಲ್ ಸಿಂಗ್ ಭಾನುವಾರ ತಿಳಿಸಿದರು.

ಘಟನೆ ಕುರಿತಂತೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಉತ್ತರ ಪ್ರದೇಶದ ಆಡಳಿತದಿಂದ ತನಿಖೆ ನಡೆಸುವುದು ಬೇಡ ಎಂದು ಒತ್ತಾಯಿಸಿದರು.

ಕೃತ್ಯದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ, ಕ್ಷೇತ್ರದ ಸಂಸದ ಅಜಯ್ ಕುಮಾರ್ ಮಿಶ್ರಾ ಅವರನ್ನು ಸಂಪುಟದಿಂದ ವಜಾ ಮಾಡಬೇಕು, ಸಚಿವರ ಪುತ್ರನ ವಿರುದ್ಧ ಐಪಿಸಿ 302 ಅನ್ವಯ ಪ್ರಕರಣ ದಾಖಲಿಸಲು ಅವರು ಒತ್ತಾಯಿಸಿದ್ದಾರೆ.

ವಿಪಕ್ಷಗಳ ಖಂಡನೆ: ಉತ್ತರಪ್ರದೇಶದ ಲಖಿಂಪುರ್–ಖೇರಿಯಲ್ಲಿ ನಡೆದ ಘಟನೆಯ ವಿರುದ್ಧ ಪ್ರತಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆಗ್ರಹಿಸಿವೆ.

ವಿರೋಧ ಪಕ್ಷಗಳಾದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ರಾಷ್ಟ್ರೀಯ ಕಾಂಗ್ರೆಸ್ ಪಕ್ಷ, ಸಮಾಜವಾದಿ ಪಕ್ಷ, ಬಹುಜನ ಸಮಾಜ ಪಕ್ಷ ಸೇರಿದಂತೆ ವಿವಿಧ ಪಕ್ಷಗಳು ಆಡಳಿತಾರೂಢ ಬಿಜೆಪಿ ವಿರುದ್ಧ ಹರಿಹಾಯ್ದಿದ್ದು ಕೇಂದ್ರ ಸಚಿವ ಅಜಯ್‌ಕುಮಾರ್ ಮಿಶ್ರಾ ಅವರ ವಜಾಗೆ ಒತ್ತಾಯಿಸಿವೆ.

ನಿಧನ ಸುದ್ದಿ

ನಟ ಘನಶ್ಯಾಂ ನಾಯಕ್

ಮುಂಬೈ: ಹೆಸರಾಂತ ನಟ ಘನಶ್ಯಾಂ ನಾಯಕ್ ಭಾನುವಾರ ಇಲ್ಲಿ ನಿಧನರಾದರು. 77 ವರ್ಷದ ಅವರು ಕೆಲ ತಿಂಗಳಿನಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

ಜನಪ್ರಿಯ ಧಾರಾವಾಹಿ 'ತಾರಕ್ ಮೆಹ್ತಾ ಕಾ ಉಲ್ಟಾ ಚಶ್ಮಾ'ದಲ್ಲಿ 'ನಟ್ಟು ಕಾಕಾ' ಪಾತ್ರದಿಂದ ಜನಪ್ರಿಯರಾಗಿದ್ದರು. 'ನಟ್ಟು ಕಾಕಾ ಇನ್ನಿಲ್ಲ' ಎಂದು ಆ ಧಾರಾವಾಹಿಯ ನಿರ್ದೇಶಕ ಅಸಿತ್ ಮೋದಿ ಟ್ವೀಟ್ ಮಾಡಿದ್ದಾರೆ.

ನಾಯಕ್ ಅವರು 100ಕ್ಕೂ ಹೆಚ್ಚು ಗುಜರಾತಿ ಮತ್ತು ಹಿಂದಿ ಸಿನಿಮಾಗಳು, 350ಕ್ಕೂ ಹೆಚ್ಚು ಕಿರುತೆರೆ ಧಾರಾವಾಹಿಗಳು, 100ಕ್ಕೂ ಹೆಚ್ಚು ಗುಜರಾತಿ ನಾಟಕಗಳಲ್ಲಿ ನಟಿಸಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಯ ಮಾರ್ಗದರ್ಶಕ 'ಮಾಸ್ಟರ್‌ಮೈಂಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ನಡೆಸುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಹೊರತಂದಿರುವ 'ಮಾಸ್ಟರ್ ಮೈಂಡ್' ಡಿಜಿಟಲ್ ಕೈಪಿಡಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಬಿಡುಗಡೆ ಮಾಡಿದರು.

'ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುತ್ತಿರುವ ಯುವಕರಿಗೆ ಈ ಪತ್ರಿಕೆ ನೆರವಾಗಲಿದೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಸೇರಿದಂತೆ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಮಾಸ್ಟರ್ ಮೈಂಡ್ ಡಿಜಿಟಲ್ ಕೈಪಿಡಿ ಮಾರ್ಗದರ್ಶನ ನೀಡಲಿದೆ' ಎಂದು ಅಶ್ವತ್ಥ ನಾರಾಯಣ ಹೇಳಿದರು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ 'ಮಾಸ್ಟರ್‌ಮೈಂಡ್' ಡಿಜಿಟಲ್ ಕೈಪಿಡಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು –ಪ್ರಜಾವಾಣಿ ಚಿತ್ರ

'ವಿಡಿಯೊ ಮತ್ತು ಲೇಖನಗಳ ಮೂಲಕ ಪ್ರಚಲಿತ ವಿಷಯಗಳು ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಎಲ್ಲ ಮಾಹಿತಿ ಲಭ್ಯವಾಗುವಂತೆ ಮಾಸ್ಟರ್ ಮೈಂಡ್ ರೂಪಿಸಿರುವುದು ಶ್ಲಾಘನೀಯ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಯುವಕರು ಯಶಸ್ಸು ಸಾಧಿಸಲು ವಿಶೇಷ ಪ್ರಯತ್ನ ಮಾಡಲಾಗಿದೆ' ಎಂದು ಹೇಳಿದರು.

ಪರೀಕ್ಷಾ ಸಿದ್ಧತೆಗೆ ವಸ್ತುನಿಷ್ಠ ವಿಷಯಗಳು, ಪ್ರಚಲಿತ ವಿದ್ಯಮಾನ, ಸಾಮಾನ್ಯ ಜ್ಞಾನ, ಮಾನಸಿಕ ಸಾಮರ್ಥ್ಯ, ಭಾಷೆಯ ಅತ್ಯುನ್ನತ ಬಳಕೆ, ವಿಶ್ಲೇಷಣೆ, ಅಭಿಪ್ರಾಯ, ಸಂಪಾದಕೀಯ, ಪ್ರಬಂಧ ಮತ್ತು ಅನುವಾದ ಹಾಗೂ ಸಂದರ್ಶನಕ್ಕೆ ಸಹಾಯವಾಗುವ ಅಂಶಗಳನ್ನು ಮಾಸ್ಟರ್ ಮೈಂಡ್ ಒಳಗೊಂಡಿದೆ.

ಶಾರುಕ್ ಖಾನ್ ಪುತ್ರನ ಬಂಧನ

ಒಂದನೇ ಪುಟದಿಂದ...

ಬಂಧಿತರಿಂದ ಅಧಿಕಾರಿಗಳು 13 ಗ್ರಾಂ ಕೊಕೇನ್, 5 ಗ್ರಾಂ ಎಂಡಿ, 21 ಗ್ರಾಂ ಚರಸ್ ಮತ್ತು 22 ಎಂಡಿಎಂಎ ಮಾತ್ರೆಗಳನ್ನು ವಶಕ್ಕೆ ಪಡೆದಿದ್ದಾರೆ. ಇಷ್ಟೂ ಮಾದಕವಸ್ತುಗಳ ಮಾರುಕಟ್ಟೆ ಮೌಲ್ಯ ₹1.33 ಲಕ್ಷ. ಬಂಧಿತ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಪ್ರಕರಣದಲ್ಲಿ ಅವು ಮಹತ್ವದ ಸಾಕ್ಷ್ಯಗಳು ಎಂದು ಎನ್‌ಸಿಬಿ ಮಾಹಿತಿ ನೀಡಿದೆ.

ಆರ್ಯನ್ ಖಾನ್ ಅವರ ಬಂಧನ ಖಚಿತವಾದ ನಂತರ ಶಾರುಕ್ ಖಾನ್ ಅವರು ತಮ್ಮ ಮನೆಯಿಂದ, ತಮ್ಮ ವಕೀಲ ಸತೀಶ್ ಮನೀಶಿಂಧೆ ಅವರ ಮನೆಗೆ ತೆರಳುತ್ತಿರುವ ವಿಡಿಯೊ ವೈರಲ್ ಆಗಿದೆ. ಆದರೆ ಶಾರುಕ್ ಅವರು, ತಮ್ಮ ಮಗನ ಬಂಧನದ ಬಗ್ಗೆ ಈವರೆಗೆ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ.

ಅವರ ವಕೀಲ ಸತೀಶ್ ಅವರು, 'ಆರ್ಯನ್ ಖಾನ್ ಅವರು ಹಡಗಿನ ಟಿಕೆಟ್ ಖರೀದಿಸಿರಲಿಲ್ಲ, ಅವರ ಬಳಿ ಬೋರ್ಡಿಂಗ್ ಪಾಸ್ ಸಹ ಇರಲಿಲ್ಲ. ಪಾರ್ಟಿಯಲ್ಲಿ ಭಾಗಿಯಾಗಲು ಬಂದಿದ್ದ ಆಹ್ವಾನದ ಮೇರೆಗೆ ಅವರು ಹಡಗಿಗೆ ಹೋಗಿದ್ದರು. ಕೇವಲ ಚಾಟ್ ಆಧಾರದಲ್ಲಿ ಅವರನ್ನು ಎನ್‌ಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ' ಎಂದು ಆರೋಪಿಸಿದ್ದಾರೆ. ಆರ್ಯನ್ ಅವರ ಪರವಾಗಿ ಸೋಮವಾರ ಜಾಮೀನು ಅರ್ಜಿ ಸಲ್ಲಿಸಲಿದ್ದಾರೆ.

ಹಡಗಿನಲ್ಲಿ ಡ್ರಗ್ಸ್ ಪಾರ್ಟಿ ನಡೆಯುತ್ತಿದ್ದ ಸಂಬಂಧ ಕಾರ್ಡೀಲಿಯಾ ಕ್ರೂಸಸ್ ಕಂಪನಿಗೆ ನೋಟಿಸ್ ನೀಡಲಾಗಿದೆ. 'ನಮ್ಮ ಹಡಗಿನಲ್ಲಿ ನಡೆಯುತ್ತಿದ್ದ ಪಾರ್ಟಿಗೂ, ನಮಗೂ ಸಂಬಂಧವಿಲ್ಲ. ನಾವು ಹಡಗನ್ನು ದೆಹಲಿಯ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯೊಂದಕ್ಕೆ ಬಾಡಿಗೆಗೆ ನೀಡಿದ್ದೆವು' ಎಂದು ಕಂಪೆನಿಯು ಹೇಳಿದೆ. ಆ ಕಂಪನಿಯ ಅಧಿಕಾರಿಗಳಿಗೂ, ವಿಚಾರಣೆಗೆ ಹಾಜರಾಗುವಂತೆ ಎನ್‌ಸಿಬಿ ನೋಟಿಸ್ ಜಾರಿ ಮಾಡಿದೆ.

ವಿಮರ್ಶಾತ್ಮಕ ಚಿಂತನೆಗೆ ಪ್ರಶ್ನೆ ಕೇಳು ಮಗುವೇ..

ಭವಿಷ್ಯದ ಉದ್ಯೋಗಗಳಿಗೆ ಹೊಸ ಬಗೆಯ ಕೌಶಲಗಳು ಅಗತ್ಯ. ಈಗಿನ ಮಕ್ಕಳನ್ನು ಅದಕ್ಕೆ ತಕ್ಕಂತೆ ಬೆಳೆಸಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಅವರಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಿದರೆ ಅನುಕೂಲ.



ಮಂಜುಳಾ ರಾಜ್

ನಾವು ಚಿಕ್ಕಂದಿನಲ್ಲಿ ಕಲಿತದ್ದು ಒಂದೇ, ಶಿಕ್ಷಕರು ಅಥವಾ ಪೋಷಕರು ಹೇಳಿದ್ದನ್ನು ಕೇಳಬೇಕು, ಇಲ್ಲವಾದರೆ ಬೆತ್ತದಿಂದ ಸರಿಯಾದ ಪೆಟ್ಟು ಬೀಳುತ್ತಿತ್ತು. ಅವರು ಕಲಿಸಿದ್ದನ್ನು ಬಾಯಿಪಾಠ ಮಾಡಿ ಒಪ್ಪಿಸುವುದು, ನಂತರ ಪರೀಕ್ಷೆಯಲ್ಲಿ ಬರೆಯುವುದು. ನಾವು ಬರೆದದ್ದು ನಮಗೇ ಎಷ್ಟರ ಮಟ್ಟಿಗೆ ಅರ್ಥವಾಗುತ್ತಿತ್ತೋ ಅದು ಬೇರೆ ಮಾತು. ಅಲ್ಲಿ ವಿಮರ್ಶಾತ್ಮಕ ಚಿಂತನೆ ಇರಲಿ, ಆಲೋಚನೆಗೂ ಅವಕಾಶವಿರಲಿಲ್ಲ. ಆಗಿನ ಶಿಕ್ಷಣ ನೀತಿಯೇ ಹಾಗಿತ್ತು. ಈಗ ಎಲ್ಲವೂ ಅಲ್ಲದಿದ್ದರೂ ಒಂದಷ್ಟು ಖಂಡಿತ ಬದಲಾಗಿದೆ. ಮಕ್ಕಳು ತಾವು ಕಲಿಯುವುದನ್ನು ಅರ್ಥ ಮಾಡಿಕೊಳ್ಳಲು ಅವಕಾಶವಿದೆ. ಸರಳವಾಗಿ ಅದನ್ನೇ ವಿಮರ್ಶಾತ್ಮಕ ಚಿಂತನೆ ಎನ್ನಬಹುದು. ಚಿಕ್ಕ ಮಕ್ಕಳಲ್ಲಿ ಸ್ಪಷ್ಟವಾಗಿ ಮತ್ತು ತರ್ಕಬದ್ಧವಾಗಿ ಚಿಂತಿಸಲು ಅವಕಾಶ ನೀಡಿದಾಗ ವಿಷಯವನ್ನು ಅರ್ಥ ಮಾಡಿಕೊಳ್ಳಲು ಅವಕಾಶವಿರುತ್ತದೆ. ಮಕ್ಕಳು ವಿಷಯ ಅಥವಾ ಮಾಹಿತಿಯನ್ನು ಸುಮ್ಮನೆ ಸ್ವೀಕರಿಸುವವರಾಗ ಬಾರದು. ಅದರ ಬದಲು ಅವರು ಸ್ವತಂತ್ರ ಯೋಚನಾ ಶಕ್ತಿಯ ಪರಿಣಾಮವನ್ನು ಅರ್ಥ ಮಾಡಿಕೊಳ್ಳುವಂತಿರಬೇಕು.

ಮಕ್ಕಳ ಆಟದಲ್ಲಿ ಗಮನವಿಡಿ..

‘ಈಗಿನ ವೇಗದ ಯುಗದಲ್ಲಿ ಎಲ್ಲರೂ ಅವರವರ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ. ಈ ಜಂಜಾಟದಲ್ಲಿ ನಮ್ಮ ಮಕ್ಕಳ ಆಟವೂ ಎಷ್ಟು ಮುಖ್ಯ ಎನ್ನುವುದನ್ನು ಮರೆತು ಬಿಡುತ್ತೇವೆ. ಮಕ್ಕಳು ತಮ್ಮಷ್ಟಕ್ಕೇ ಆಟವಾಡುವಾಗ ಅಲ್ಲಿ ಅವರಿಗೆ ಕೆಲವು ತೊಡಕುಗಳು ಬರಬಹುದು. ಉದಾ –ಒಂದು ಮಗು ಆಟಿಕೆಯ ಕಾರು ಅಥವಾ ರೈಲಿನಲ್ಲಿ ಆಡುವಾಗ ಬಹಳಷ್ಟು ಬಾರಿ ಅದರ ಚಕ್ರ ಕಳಚಿ ಹೋಗಬಹುದು ಅಥವಾ ಮತ್ತೆ ಯಾವುದಾದರೂ ಭಾಗ ಬಿಟ್ಟು ಹೋಗಬಹುದು. ಆಗ ಮಕ್ಕಳು ಆಶ್ರಯಿಸುವುದು ತಾಯಿಯನ್ನೇ, ಆದರೆ ತಾಯಿ ತಾನೇ ಎಷ್ಟು ಬಾರಿ ಅದನ್ನು ಸರಿ ಮಾಡುವುದಾಗುತ್ತದೆ. ಆಗ ತಾಯಿ ಅದನ್ನು ಹೇಗೆ ಸರಿಮಾಡಿಕೊಳ್ಳಬಹುದೆಂದು ಅರ್ಥಮಾಡಿಸಬೇಕಾಗುತ್ತದೆ. ಮೆಲ್ಲಗೆ ಆ ಮಗುವೂ ಅರ್ಥ ಮಾಡಿಕೊಳ್ಳುತ್ತದೆ. ಈ ರೀತಿ ಮುಕ್ತವಾಗಿ ಅವರನ್ನೇ ಆಟವಾಡಲು ಬಿಡಬೇಕು, ಆಗ ಅದಕ್ಕೆ ತಾನೇ ಸ್ವತಂತ್ರವಾಗಿ ಜೋಡಿಸಲೂ ಸಾಧ್ಯ ಎನ್ನುವ ಚಿಂತನೆ ಮೂಡುತ್ತದೆ’ ಎನ್ನುತ್ತಾರೆ ಆಶಾ ಇನ್ಫಿನೈಟ್ ಸಂಸ್ಥೆಯ ಶಿಕ್ಷಣ ವಿಭಾಗದ ನಿರ್ದೇಶಕಿ ಕಾಂತಿ ಅವರು.

ಕಲ್ಪನಾ ಶಕ್ತಿ ಹೆಚ್ಚಾಗ ಬೇಕೆಂದರೆ...

ಆಟವಾಡುವಾಗ ಆಗಲೀ ಅಥವಾ ಮಿಕ್ಕ ಕೆಲಸವಿರಲಿ ಮಗು ತಾನೇ ಮಾಡುವಾಗ ಅವರಲ್ಲಿ ಖಂಡಿತ ತನಗೆ ತಾನೇ ಆಲೋಚಾನಾ ಶಕ್ತಿ ಹೆಚ್ಚುತ್ತದೆ, ಬಂದ ಸವಾಲುಗಳನ್ನು ಎದುರಿಸುವ ಚಾಕಚಕ್ಯತೆ ಅರ್ಥಾತ್ ವಿಮರ್ಶಾತ್ಮಕ ಚಿಂತನೆಯೂ ಮೂಡುತ್ತದೆ. ಅದು ಖಂಡಿತಾ ಅವರಿಗೆ ಮುಂದೆ ಜೀವನದಲ್ಲಿ ಸವಾಲುಗಳನ್ನು ಎದುರಿಸಲು ಸಹಾಯಕವಾಗುತ್ತದೆ, ತನಗೆ ತಾನೇ ಅವರಲ್ಲಿನ ಕಲ್ಪನಾ ಶಕ್ತಿ ಗರಿಗೆದರುತ್ತದೆ.

ಪ್ರಶ್ನೆ ಕೇಳು ಮಗುವೆ...

ಆಗಾಗ ಮಕ್ಕಳಿಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕು ಮತ್ತು ಅವರಿಂದ ಉತ್ತರ ತರಿಸಬೇಕು. ಹಿಂದೆ ಅಜ್ಜಿಯರು ಮಕ್ಕಳಿಗೆ ರೋಚಕ ಕಥೆಗಳನ್ನು ಹೇಳುತ್ತಿದ್ದಾಗ ಮಕ್ಕಳು ಕುತೂಹಲದಿಂದ ಪ್ರಶ್ನೆ ಕೇಳುತ್ತಿದ್ದರು. ಈಗ ಅಜ್ಜಿಯರ ಕಥೆಗಳ ಬದಲು ಮಕ್ಕಳು ಹ್ಯಾರಿ ಪಾಟರ್ ಕಥೆ, ಚಲನಚಿತ್ರ ನೋಡುತ್ತಾರೆ. ಅಲ್ಲಿಯೂ ರೋಚಕತೆಗೆ, ಪ್ರಶ್ನೆಗಳಿಗೆ ಜೊತೆಗೆ ಚಿಂತನೆಗೂ ಕೊರತೆ ಇಲ್ಲ.

ಮಕ್ಕಳು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ನೀವು ಯಾವ ರೀತಿ ಸಹಾಯ ಮಾಡಬಹುದು ಎನ್ನುವುದಕ್ಕೆ ಮನೆಯಲ್ಲೇ ಪ್ರಯತ್ನಿಸಬಹುದಾದ ಕೆಲವು ಚಟುವಟಿಕೆಗಳು

- **ಕಂಡು ಹಿಡಿ:** ನಿಮ್ಮ ಮಗುವಿನ ಒಂದು ಆಟದ ಸಾಮಾನನ್ನು ನಿಮ್ಮ ಬೆನ್ನ ಹಿಂದೆ ಅಡಗಿಸಿಡಿ. ನಿಮ್ಮ ಮಗುವಿಗೆ ಕೆಲವು ಸುಳಿವುಗಳನ್ನು ಕೊಡಿ. ಬೇಕಾದರೆ ಬಣ್ಣ, ಆಕಾರ ಮತ್ತು ಅದರ ಮೇಲಿನ ಡಿಸೈನ್ ಇರಬಹುದು ಆ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಬಹುದೆಂದು ಹೇಳಿ. ಒಮ್ಮೆ ಆಟವೇನೆಂದು ನಿಮ್ಮ ಮಗು ಅರ್ಥ ಮಾಡಿಕೊಂಡರೆ ಆ ಮಗುವಿಗೆ ಊಹಿಸಲು ಸ್ವಲ್ಪ ಸಹಾಯ ಮಾಡಿ. ಈ ರೀತಿ ಅದರ ಊಹಾ ಶಕ್ತಿಯನ್ನು ಚುರುಕುಗೊಳಿಸಬಹುದು.
- **ಅಡುಗೆ ಆಟ:** ನಮ್ಮ ಬಾಲ್ಯದಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಮಕ್ಕಳಿಗೆ ಆಡಲು ಪುಟ್ಟ ಪುಟ್ಟ ಅಡುಗೆಮನೆಯ ಪಾತ್ರೆ, ಪರಿಕರಗಳಿರುತ್ತಿದ್ದವು. ಅವುಗಳನ್ನಿಟ್ಟುಕೊಂಡು ಅಡುಗೆ ಆಟ ಆಡಿ ಎಲ್ಲರಿಗೂ ಕೊಡುತ್ತಿದ್ದೆವು. ಈ ಅಡುಗೆ ಆಟದಿಂದ ಮಗುವಿನ ಕಲ್ಪನಾ ಶಕ್ತಿ ಹೆಚ್ಚಾಗುತ್ತದೆ.
- **ಫೋಟೊ ಆಲ್ಬಮ್ ತೋರಿಸಿ:** ಎಲ್ಲರ ಮನೆಯಲ್ಲೂ ಇರುವ ಪ್ರತಿಯೊಂದು ಫೋಟೊ ಹಿಂದೆ ಒಂದು ಕಥೆ ಇರುತ್ತದೆ. ನೀವು ಅದನ್ನು ವಿವರಿಸಿದಾಗ ಅವರ ಮನದಲ್ಲಿ ಪ್ರಶ್ನೆಗಳು ಏಳುತ್ತವೆ. ಮತ್ತು ನಿಮ್ಮ ಕುಟುಂಬದ ಪರಿಚಯವೂ ಆಗುತ್ತದೆ.

ಭವಿಷ್ಯತ್ತಿನಲ್ಲಿ ಉದ್ಯೋಗಕ್ಕಾಗಿ ಹೊಸ ಹೊಸ ಕೌಶಲಗಳು ಅಗತ್ಯ. ಆದ್ದರಿಂದ ಮಕ್ಕಳನ್ನು ಚಿಕ್ಕಂದಿನಿಂದ ತಯಾರು ಮಾಡಿ, ಅವರ ಬುದ್ಧಿಮತ್ತೆಯನ್ನು ಚುರುಕುಗೊಳಿಸುವ ಆಶಯ ಹಿರಿಯರದು. ಆದರೆ ಮಕ್ಕಳಲ್ಲಿ ಈ ವಿಮರ್ಶಾತ್ಮಕ ಚಿಂತನೆಯನ್ನು ಮೂಡಿಸುವುದು ಸುಲಭವೇನಲ್ಲ. ಆದರೂ ಪ್ರಯತ್ನ ನಮ್ಮದು, ಈ ಬಗ್ಗೆ ಯೋಚಿಸುವಾಗ ‘ಮೆಟಾಕಾಗ್ನಿಷನ್’ ಎಂಬ ಪದ ನೆನಪಾಗುತ್ತದೆ. ಅರಿವಿನ ಬಗ್ಗೆ ಯೋಚಿಸಲು ಹೆಚ್ಚು ಅನೌಪಚಾರಿಕವಾಗಿ ಚಿಂತನೆಯ ಬಗ್ಗೆ ಯೋಚಿಸಲು ಸಾಧ್ಯವೇನೋ. ಒಟ್ಟಾರೆ ಈ ಚಿಂತನೆಯನ್ನು ಮೂಡಿಸಿಕೊಳ್ಳುವುದು ಮಕ್ಕಳಿಗಿರಲಿ, ದೊಡ್ಡವರಿಗೂ ಸುಲಭವಲ್ಲ. ಇದು ಬಹಳ ಕಷ್ಟಸಾಧ್ಯವಾದರೂ, ಅಸಾಧ್ಯವಾದುದು ಏನೂ ಇಲ್ಲ ಅಲ್ಲವೇ?

ಪೋಷಕರು ಮತ್ತು ಶಿಕ್ಷಕರ ಪಾತ್ರ

- ಮಕ್ಕಳಿಗೆ ತಾವೇ ಆಟವಾಡಲು ಸಾಕಷ್ಟು ಅವಕಾಶ ನೀಡಬೇಕು.
- ಎಲ್ಲಕ್ಕೂ ಅವಸರಿಸಬೇಡಿ. ಅವರು ಏನು ಮಾಡುತ್ತಾರೆ ಎಂದು ಸ್ವಲ್ಪ ಕಾದು ನೋಡಿ.
- ಅವರಿಗೆ ನೀಡಿದ ಚಟುವಟಿಕೆ ಮಾಡಲು ಕಷ್ಟ ಪಡುತ್ತಾರೆಂದು ಮಧ್ಯ ಪ್ರವೇಶಿಸಿ ಸಹಾಯ ಮಾಡಲು ಹೋಗಬೇಡಿ.
- ಮುಕ್ತವಾದ ಪ್ರಶ್ನೆಗಳನ್ನು ಕೇಳಿ.
- ಕಲ್ಪನೆಗಳಿಗೆ ಪ್ರೇರಣೆ ನೀಡಿ ಪ್ರಶ್ನೆ ಕೇಳಲು ಅವಕಾಶ ಕೊಡಿ.
- ಹೊಸದಾದ ಮತ್ತು ವಿಭಿನ್ನ ಚಿಂತನೆಗಳಿಗೆ ಪ್ರೋತ್ಸಾಹ ನೀಡಿ.
- ಅಂತಃ ಪ್ರಜ್ಞೆ ಮತ್ತು ಸಹಜತೆಯನ್ನು ಮಕ್ಕಳಲ್ಲಿ ಗುರುತಿಸಿ, ವಿಶ್ಲೇಷಿಸಿದಾಗ ಸಮಸ್ಯೆಯನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಾಧ್ಯ. ಇದು ವಿಮರ್ಶಾತ್ಮಕ ಚಿಂತನೆಯಿಂದಲೇ ಸಾಧ್ಯ.
- ಈಗ ಚಿಕ್ಕ ಮಕ್ಕಳಿಗೆ ಆಟದ ಮೂಲಕವೇ ಹೊಸ ವಿಷಯಗಳನ್ನು ತಿಳಿಯಲು, ಅರ್ಥ ಮಾಡಿಕೊಳ್ಳಲು ಅಪರಿಮಿತ ಅವಕಾಶಗಳನ್ನು ಶಾಲೆಯಲ್ಲಿಯೇ ನೀಡಲಾಗುತ್ತದೆ. ತನ್ಮೂಲಕ ಕಲಿಕೆಗೆ ಮುಕ್ತ ಹಾಗೂ ಸುರಕ್ಷಿತ ವಾತಾವರಣ ಸೃಷ್ಟಿಯಾಗುತ್ತದೆ.
- ಆಟದ ಮೂಲಕ ಪ್ರಾತ್ಯಕ್ಷಿಕ ಅನುಭವಗಳಿಂದ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಮೂಡಿಸುವುದು ಸ್ವಲ್ಪ ಸುಲಭವಾಗುತ್ತದೆ.

ಸ್ವಂತ ಉದ್ಯಮಕ್ಕೂ ಬೇಕು ಆಹಾರ ತಂತ್ರಜ್ಞಾನ ಪದವಿ

ಅನಿಲ್ ಈ. ಕೆಂಬಾಳೆ

ಆಹಾರ ತಂತ್ರಜ್ಞಾನವೆಂಬುದು ಸದ್ಯ ಮುಂಚೂಣಿಯಲ್ಲಿರುವ ಕ್ಷೇತ್ರ. ಉದ್ಯೋಗ ಮಾತ್ರವಲ್ಲ, ಸ್ವಂತ ಉದ್ಯಮ ಆರಂಭಿಸಲು ಕೂಡ ಇದರ ಹಿನ್ನೆಲೆಯಿದ್ದರೆ ನಿರೀಕ್ಷಿತ ಸಾಧನೆಯನ್ನು ಮಾಡಬಹುದು. ಲಾಕ್‌ಡೌನ್ ಸಂದರ್ಭದಲ್ಲಂತೂ ಆಹಾರ ತಯಾರಿಕೆಗೆ ಸಂಬಂಧಿಸಿದ ಗೃಹೋದ್ಯಮಗಳು ಸಾಕಷ್ಟು ಬೆಳವಣಿಗೆ ಕಂಡಿವೆ ಎಂದು ಅಧ್ಯಯನವೊಂದು ಹೇಳಿದೆ.

ಹೆಸರೇ ಹೇಳುವಂತೆ ಕಚ್ಚಾ ರೂಪದಲ್ಲಿರುವ ಆಹಾರ ಧಾನ್ಯ ಅಥವಾ ಇತರ ಆಹಾರದ ಸಾಮಗ್ರಿಗಳನ್ನು ತಿನ್ನಲು ಯೋಗ್ಯವಾದ ರೂಪಕ್ಕೆ ಪರಿವರ್ತಿಸುವ ತಂತ್ರಜ್ಞಾನವಿದು. ಇದು ದೈಹಿಕ ಶ್ರಮ ಬೇಡಬಹುದು, ಯಂತ್ರೋಪಕರಣಗಳ ಅಗತ್ಯವಿರಬಹುದು ಅಥವಾ ರಾಸಾಯನಿಕ, ಜೈವಿಕ ತಂತ್ರಜ್ಞಾನದ ಬಳಕೆಯ ಮೂಲಕವೂ ಆಗಿರಬಹುದು. ಒಟ್ಟಿನಲ್ಲಿ ಗ್ರಾಹಕರಲ್ಲಿ ಬೇಡಿಕೆಯಿರುವ ಉತ್ಪನ್ನಗಳನ್ನು ಶುಚಿಯಾಗಿ, ಪೌಷ್ಟಿಕಾಂಶಯುಕ್ತವಾಗಿ ಸಿದ್ಧಪಡಿಸುವುದು ಇದರ ಮೂಲ ಸೂತ್ರ. ಮಾರುಕಟ್ಟೆಯಲ್ಲಿ ಹೆಚ್ಚು ದಿನ ಕೆಡದಂತೆ ಉಳಿಯುವಂತಹ ತಂತ್ರಜ್ಞಾನವನ್ನೂ ಅಳವಡಿಸಿಕೊಳ್ಳಬೇಕಾಗುತ್ತದೆ.

ಸದ್ಯ ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ವಿವಿಧ ಉದ್ಯಮಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಆಹಾರ ತಂತ್ರಜ್ಞಾನದಲ್ಲಿ ಪದವಿ ಪಡೆದವರಿಗೆ ಸಾಕಷ್ಟು ಅವಕಾಶಗಳಿವೆ. ಕೃಷಿ ಆಧಾರಿತ ಆರ್ಥಿಕತೆಯು ಸದ್ಯಕ್ಕೆ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಆಹಾರ ತಂತ್ರಜ್ಞಾನದಲ್ಲಿ ನುರಿತವರಿಗೆ ಬೇಡಿಕೆ ಸಾಕಷ್ಟಿದೆ.

ಪಿಯುಸಿ ಅಥವಾ 12ನೇ ತರಗತಿಯಲ್ಲಿ ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡು ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತವನ್ನು ಓದಿರಬೇಕು. ಇದು ಮುಂದಿನ ಶಿಕ್ಷಣಕ್ಕೆ ಅನುಕೂಲ. ಇದಲ್ಲದೇ ಜೀವವಿಜ್ಞಾನ, ಜೈವಿಕ ಎಂಜಿನಿಯರಿಂಗ್, ಕೆಮಿಕಲ್ ಎಂಜಿನಿಯರಿಂಗ್, ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೂ ಕೂಡ ಈ ಕ್ಷೇತ್ರದಲ್ಲಿ ಅವಕಾಶಗಳಿವೆ. ಆಹಾರ ವಿಜ್ಞಾನವಲ್ಲದೇ ನಂತರ ಸಂಸ್ಕರಣೆ, ಪ್ಯಾಕಿಂಗ್, ದೀರ್ಘಕಾಲ ಬಾಳಿಕೆ ಬರುವಂತಹ ತಂತ್ರಜ್ಞಾನವೂ ಇಲ್ಲಿ ಬಳಕೆಯಾಗುವುದರಿಂದ ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದವರಿಗೂ ಅವಕಾಶಗಳಿವೆ. ಹಾಗೆಯೇ ಪ್ರಾಧ್ಯಾಪಕರಾಗಿ, ಪೌಷ್ಟಿಕಾಂಶ ತಜ್ಞರಾಗಿ, ಗುಣಮಟ್ಟದ ನಿರ್ವಾಹಕರಾಗಿ, ಲ್ಯಾಬ್ ತಂತ್ರಜ್ಞರಾಗಿ, ಕನ್ಸಲ್ಟೆಂಟ್ ಆಗಿಯೂ ಕೆಲಸ ಮಾಡಬಹುದು.

ಬೇಡಿಕೆ ಹೆಚ್ಚಾಗಿರುವುದರಿಂದ ವಿಶ್ವವಿದ್ಯಾಲಯಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳು ಈ ಕೋರ್ಸ್ ಅನ್ನು ಆರಂಭಿಸಿವೆ. ರಾಜ್ಯದಲ್ಲಿ ಆಹಾರ ಸಂಸ್ಕರಣೆ ಕುರಿತ ಡಿಪ್ಲೊಮಾ ಕೋರ್ಸ್ ಅನ್ನೂ ಈ ವರ್ಷ ಆರಂಭಿಸಲಾಗಿದ್ದು, ಎಸ್ಸೆಸ್ಸೆಲ್ಸಿ ನಂತರ ಓದಬಹುದು. ಮೈಸೂರಿನ ಸಿಎಫ್‌ಟಿಆರ್‌ಐ, ಪುಣೆಯ ಎಂಐಟಿ ಆಹಾರ ತಂತ್ರಜ್ಞಾನ ಕಾಲೇಜ್, ತಮಿಳುನಾಡಿನ ತಂಜಾವೂರಿನ ಭಾರತೀಯ ಆಹಾರ ಸಂಸ್ಕರಣ ತಂತ್ರಜ್ಞಾನ ಸಂಸ್ಥೆ, ಔರಂಗಾಬಾದ್‌ನ ಭಾರತೀಯ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಗುವಾಹಟಿಯ ಐಐಟಿ, ಹರ್ಯಾಣದ ಸೋನೆಪತ್‌ನ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಉದ್ಯಮ ಮತ್ತು ನಿರ್ವಹಣೆ ಸಂಸ್ಥೆ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳಲ್ಲದೇ, ಹಲವು ಖಾಸಗಿ ಕಾಲೇಜುಗಳಲ್ಲಿಯೂ ಈ ಕೋರ್ಸ್‌ಗಳನ್ನು ಓದಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಸಿನಿ ಇಂಪ್ಯಾಕ್ಟ್ ಫಿಲ್ಮ್ ಫೆಲೋಶಿಪ್ 2021

ವಿವರ: ಸಿನಿಮಾ ಮಾಡುವ ಕನಸಿರುವ 25 ವರ್ಷಕ್ಕಿಂತ ಕೆಳಗಿನವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸಾಮಾಜಿಕ ವಿಷಯಗಳನ್ನು ಇಟ್ಟುಕೊಂಡು ಸ್ವತಂತ್ರವಾಗಿ ಸಿನಿಮಾ ತಯಾರು ಮಾಡುವ ಯುವಪೀಳಿಗೆಯವರಿಗೆ ಅವಕಾಶ. ಇಂಡಿಯಾ ಸಿಎಸ್‌ಆರ್‌ನ ಸಹಯೋಗದೊಂದಿಗೆ ಹೈಫನ್ ಈ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಭಾರತೀಯರಿಗೆ ಮಾತ್ರ. 25 ವರ್ಷದ ಕೆಳಗಿನವರಿಗೆ ಮಾತ್ರ ಅವಕಾಶ.

ಆರ್ಥಿಕ ಸಹಾಯ: ಸಿನಿಮಾ ಮಾಡಲು ₹1 ಲಕ್ಷದವರೆಗೆ, ನಗದು ಬಹುಮಾನ ₹1 ಲಕ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಅಕ್ಟೋಬರ್, 2021

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/CIFF1

ದಿ ಟಾಟಾ ಕ್ಯಾಪಿಟಲ್ ಪಂಕ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021-22

ವಿವರ: 6ನೇ ತರಗತಿಯಿಂದ 12ನೇ ತರಗತಿ, ಪಾಲಿಟೆಕ್ನಿಕ್, ಡಿಪ್ಲೊಮಾ ಮತ್ತು ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆರ್ಥಿಕ ಸಮಸ್ಯೆ ಇರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು.

ಅರ್ಹತೆ: ಹಿಂದಿನ ಪರೀಕ್ಷೆಯಲ್ಲಿ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹4 ಲಕ್ಷವನ್ನು ಮೀರಿರಬಾರದು. ಕೋವಿಡ್ ಕಾರಣದಿಂದ ಪೋಷಕರು ತೀರಿಹೋಗಿದ್ದರೆ, ಅಂತಹ 6ನೇ ಮತ್ತು 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು.

ಆರ್ಥಿಕ ಸಹಾಯ: ಟ್ಯೂಷನ್ ಶುಲ್ಕದ ಶೇ 80ರಷ್ಟು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಅಕ್ಟೋಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿ: www.b4s.in/praja/TCPS5

ಕೃಪೆ: buddy4study.com

ಅರ್ಥಶಾಸ್ತ್ರ ಎಂಎ: ಮುಂದೇನು ಮಾಡಬಹುದು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್‌ಕುಮಾರ್

- **ನಾನು ಎಂಎ (ಅರ್ಥಶಾಸ್ತ್ರ) ಮುಗಿಸಿ, ಎರಡು ವರ್ಷ ಕೆಲಸ ಮಾಡಿದ್ದೇನೆ. ನಾನು ಓದಿರುವ ವಿಷಯಕ್ಕೆ ಸಂಬಂಧಿಸಿದ ಉದ್ಯೋಗವೇ ನನಗೆ ಇಷ್ಟ. ಕಿವಿ ಸಮಸ್ಯೆ ಇದೆ. ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ಉದ್ಯೋಗಗಳ ಬಗ್ಗೆ ತಿಳಿಸಿ.**

ಶರತ್ ಬಾಬು, ಹಿರಿಯೂರು.

ಅರ್ಥಶಾಸ್ತ್ರದಲ್ಲಿ ಉನ್ನತ ಪದವಿಯನ್ನು ಗಳಿಸಿರುವ ನಿಮಗೆ ಅನೇಕ ವೃತ್ತಿಯ ಅವಕಾಶಗಳಿವೆ. ಬೇಡಿಕೆಯಲ್ಲಿರುವ ಈ ಕ್ಷೇತ್ರದಲ್ಲಿ ನಿಮ್ಮ ಆಸಕ್ತಿಯ ಅನುಸಾರ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ಶಿಕ್ಷಣ, ಬ್ಯಾಂಕಿಂಗ್, ಹಣಕಾಸು, ಸಂಶೋಧನೆ ಮತ್ತು ವಿಶ್ಲೇಷಣೆ, ಬಂಡವಾಳ ಹೂಡಿಕೆ, ಮಾಧ್ಯಮ, ವಿಷಯಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಅವಕಾಶಗಳಿವೆ. ಇದಲ್ಲದೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದ ಇಲಾಖೆಗಳಲ್ಲಿಯೂ ವೃತ್ತಿಯನ್ನು ಅರಸಬಹುದು. ಕಿವಿಯ ಸಮಸ್ಯೆಗೆ ತಜ್ಞ ವೈದ್ಯರೊಡನೆ ಸಮಾಲೋಚಿಸಿ ಪರಿಹಾರವನ್ನು ಕಂಡುಕೊಳ್ಳಿ.

- **ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಪಿಯುಸಿ ಕಲಾ ವಿಭಾಗದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ನಿರ್ಧರಿಸಿದ್ದೇನೆ. ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಯಲ್ಲಿ ಪಾಸಾದರೆ, ಅದು ರೆಗ್ಯುಲರ್ ಪಿಯುಸಿಗೆ ಸರಿಸಮವಾಗಿರುತ್ತದೆಯೇ? ಸರ್ಕಾರಿ ಉದ್ಯೋಗಕ್ಕೆ ಅರ್ಜಿ ಹಾಕಬಹುದೇ? ಎಸ್‌ಡಿಎ, ಪೊಲೀಸ್ ಕಾನ್‌ಸ್ಟೇಬಲ್ ಇನ್ನೂ ಮುಂತಾದ ಸರ್ಕಾರಿ ಉದ್ಯೋಗಗಳಿಗೆ ಪರೀಕ್ಷೆ ಬರೆಯಬಹುದೇ? ದಯಮಾಡಿ ತಿಳಿಸಿ. ಮುಂದೆ ಐಎಎಸ್ ಆಗಬೇಕೆಂದು ಕನಸು ಕಂಡಿದ್ದೇನೆ.**

ರಾಜ್, ಮೈಸೂರು

ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಪಾಸಾದ ಪಿಯುಸಿಗೆ ಮಾನ್ಯತೆ ಇರುತ್ತದೆ. ಹಾಗಾಗಿ, ನಿಮ್ಮ ಯೋಜನೆಯಂತೆ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

- **ನನಗೆ ಈಗ 25 ವರ್ಷ ವಯಸ್ಸು. ನಾನು ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸಾಗಬೇಕೆನ್ನುವ ಹಂಬಲ, ಹಠ ಎರಡೂ ಇದೆ. ಆದರೆ, ಸಮಯದ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಸಲಹೆ ನೀಡಿ.**

ಶ್ಯಾಮು, ಬೆಂಗಳೂರು.

- **ನಾನು ಕನ್ನಡ ಮಾಧ್ಯಮದ ವಿದ್ಯಾರ್ಥಿಯಾಗಿದ್ದು ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಇಚ್ಛಿಸಿದ್ದೇನೆ. ನನ್ನ ತಯಾರಿ ಹೇಗಿರಬೇಕು? ಹಾಗೂ ಮೊದಲ ಪತ್ರಿಕೆಗೆ ಯಾವ ರೀತಿ ತಯಾರಾಗಬೇಕು?**

ಹೆಸರು, ಊರು ತಿಳಿಸಿಲ್ಲ.

- **ಕೆಪಿಎಸ್‌ಸಿ ಎಂದರೆ ಗೊಂದಲ ಶುರುವಾಗುತ್ತದೆ. ಅಂತಹದರಲ್ಲಿ, ನಾನು ಕೆಎಎಸ್ ಮಾಡಬೇಕು ಅಂದುಕೊಂಡಿದ್ದೇನೆ. ಆದರೆ ಇಂಗ್ಲಿಷ್ ಭಯವಿದ್ದು ಅದರಿಂದ ಹೊರಗೆ ಬರುವುದು ಹೇಗೆ ಮತ್ತು ಕೆಎಎಸ್ ಪಠ್ಯಕ್ರಮದ ಬಗ್ಗೆ ತಿಳಿಸಿಕೊಡಿ.**

ಮಂಜು ಗೌಡ್ರ, ಕುಷ್ಟಗಿ.

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳ ಮಾದರಿ ಹೆಚ್ಚುಕಡಿಮೆ ಒಂದೇ ವಿಧದಲ್ಲಿರುತ್ತವೆ. ಕೆಎಎಸ್ ಪರೀಕ್ಷೆಯನ್ನು ಕನ್ನಡದಲ್ಲಿಯೂ ಬರೆಯಬಹುದು. ಇಂಗ್ಲಿಷ್ ಭಾಷೆಯನ್ನು ಆಫ್‌ಲೈನ್ ಅಥವಾ ಆನ್‌ಲೈನ್ ಕೋರ್ಸ್‌ಗಳ ಮುಖಾಂತರ ಕಲಿಯಬಹುದು. ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳ ವಿವರ, ಪಠ್ಯಕ್ರಮ ಮತ್ತು ತಯಾರಿಯ ಬಗ್ಗೆ ಇದೇ ವರ್ಷದ ಜೂನ್ 21, ಜೂನ್ 28 ಮತ್ತು ಸೆಪ್ಟೆಂಬರ್ 27ರ ಪ್ರಶ್ನೋತ್ತರದಲ್ಲಿ ವಿವರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ.

- **ನನಗೆ ಬಣ್ಣಗುರುಡು ಇದೆ. ನಾನು ಕೆಪಿಎಸ್‌ಸಿ ಮುಖಾಂತರ ವಿವಿಧ ಹುದ್ದೆಗಳಿಗೆ ಅಂಗವಿಕಲತೆಯ ಕೋಟಾದಡಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದೇ?.**

ಚೆನ್ನಬಸವ ಎಸ್., ಧಾರವಾಡ.

ತಮಗಿರುವ ಮಾಹಿತಿಯಂತೆ ನಿಮಗಿರುವ ಸಮಸ್ಯೆಗೆ ಅಂಗವಿಕಲತೆಯ ಕೋಟಾ ಅನ್ವಯವಾಗುವುದಿಲ್ಲ. ಖಚಿತವಾದ ಮಾಹಿತಿಗಾಗಿ ಕೆಪಿಎಸ್‌ಸಿಯ ಮಾಹಿತಿ ಕೇಂದ್ರವನ್ನು ಸಂಪರ್ಕಿಸಿ.

- **ಬಿ.ಫಾರ್ಮಾ ಕೋರ್ಸ್ ಮುಗಿಸಿದ ನಂತರದ ಸರ್ಕಾರಿ ಉದ್ಯೋಗಗಳ ಬಗ್ಗೆ ದಯವಿಟ್ಟು ತಿಳಿಸಿ.**

ಚಂದ್ರಮೋಹನ್ ಎ.ಆರ್., ಮಂಡ್ಯ.

4 ವರ್ಷದ ಬಿ.ಫಾರ್ಮಾ ಕೋರ್ಸ್ ರಸಾಯನ ವಿಜ್ಞಾನ, ಆರೋಗ್ಯ, ಔಷಧೋಪಚಾರ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಪದವಿಯ ನಂತರ ಸರ್ಕಾರಿ ಮತ್ತು ಖಾಸಗಿ ವಲಯದ ಆಸ್ಪತ್ರೆಗಳು, ಫಾರ್ಮಾ ಕಂಪನಿಗಳು, ಸಂಶೋಧನಾ ಸಂಸ್ಥೆಗಳು, ಆರೋಗ್ಯ ಮತ್ತು ಡ್ರಗ್ ಕಂಟ್ರೋಲ್ ಇಲಾಖೆಗಳು, ಲ್ಯಾಬೊರೇಟರಿಗಳು, ಕಾಲೇಜುಗಳು, ಮೆಡಿಕಲ್ ಟ್ರಾನ್ಸ್‌ಸ್ಕ್ರಿಪ್ಷನ್ ಸಂಸ್ಥೆಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವೃತ್ತಿಯ ಅವಕಾಶಗಳಿವೆ.

- **ನಾನು ನನ್ನ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಕೋರ್ಸ್ ಮುಗಿಸಿದ್ದೇನೆ. ಮುಂದಿನ ಉದ್ಯೋಗಾವಕಾಶಗಳೇನು ಎಂದು ಮಾಹಿತಿ ನೀಡಿ.**

ಜೀವನ್ ಗೌಡ, ಊರು ತಿಳಿಸಿಲ್ಲ.

ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿಯ ನಂತರ ವಿದ್ಯುತ್ ಉತ್ಪಾದನೆ, ಪ್ರಸರಣೆ ಮತ್ತು ವಿತರಣೆ ಸಂಸ್ಥೆಗಳು, ರೈಲ್ವೇಸ್, ಆಟೋಮೊಬೈಲ್, ಏರೋಸ್ಪೇಸ್, ಪ್ರಾಪರ್ಟಿ, ಎಂಜಿನಿಯರಿಂಗ್ ಸೇವೆಗಳ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಅವಕಾಶಗಳಿವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.

ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 69

941. ‘ತಿಥಿ’ ಕನ್ನಡ ಚಲನಚಿತ್ರದ ನಿರ್ದೇಶಕರು ಯಾರು?
ಎ) ಗಿರೀಶ್ ಕಾಸರವಳ್ಳಿ ಬಿ) ಗಿರೀಶ್ ಕಾರ್ನಾಡ್
ಸಿ) ನಾಗಾಭರಣ ಡಿ) ರಾಮರೆಡ್ಡಿ

942. ಸುಭಾಸ್ ಚಂದ್ರ ಬೋಸ್‌ಗೆ ‘ನೇತಾಜಿ’ಎಂಬ ಬಿರುದು ನೀಡಿದವರು ಯಾರು?
ಎ) ಗಾಂಧೀಜಿ ಬಿ) ಲೋಕಮಾನ್ಯ ತಿಲಕ್
ಸಿ) ರವೀಂದ್ರನಾಥ ಟ್ಯಾಗೋರ್
ಡಿ) ಗೋಪಾಲಕೃಷ್ಣ ಗೋಖಲೆ

943. ಮಹಾತ್ಮಾ ಗಾಂಧಿಯವರ ಪುಣ್ಯತಿಥಿಯನ್ನು ಏನೆಂದು ಆಚರಿಸಲಾಗುತ್ತದೆ?
ಎ) ವಿಶ್ವ ಶಾಂತಿ ದಿನ ಬಿ) ಕೋಮು ಸೌಹಾರ್ದದಿನ
ಸಿ) ಹುತಾತ್ಮರ ದಿನ ಡಿ) ಮೇಲಿನ ಯಾವುದೂ ಅಲ್ಲ

944. ‘ಭಾರತದ ಕೋಗಿಲೆ’ ಎಂದು ಪ್ರಸಿದ್ಧರಾದವರು ಯಾರು?
ಎ) ಸರೋಜಿನಿ ನಾಯ್ಡು ಬಿ) ಆನ್ನಿಬೆಸೆಂಟ್
ಸಿ) ಸಿಸ್ಟರ್ ನಿವೇದಿತಾ ಡಿ) ವಿಜಯಲಕ್ಷ್ಮಿ ಪಂಡಿತ್

945. ‘ಆದಿಪುರಾಣ’ದ ಕರ್ತೃ ಯಾರು?
ಎ) ರನ್ನ ಬಿ) ಪಂಪ ಸಿ) ಪೊನ್ನ ಡಿ) ಜನ್ನ

946. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಯಾವಾಗ ನಡೆಯಿತು?
ಎ) ಏಪ್ರಿಲ್ 13, 1918 ಬಿ) ಏಪ್ರಿಲ್ 13, 1919
ಸಿ) ಏಪ್ರಿಲ್ 13, 1920 ಡಿ) ಏಪ್ರಿಲ್ 20, 1921

947. ಸ್ಮಾರ್ಟ್ ಜಿಲ್ಲೆ ಯೋಜನೆಗೆ ಆಯ್ಕೆಯಾದ ಪ್ರಥಮ ಜಿಲ್ಲೆ ಯಾವುದು?
ಎ) ಉತ್ತರ ಕನ್ನಡ ಬಿ) ದಕ್ಷಿಣ ಕನ್ನಡ
ಸಿ) ಶಿವಮೊಗ್ಗ ಡಿ) ಮೈಸೂರು

948. ಅಲ್ಫಾನ್ಸೋ ಮಾವಿನ ತಳಿಯ ತವರು ಯಾವುದು?
ಎ) ವಿಜಯವಾಡಾ ಬ) ಬನಾರಸ್
ಸಿ) ರತ್ನಗಿರಿ ಡಿ) ಮೇಲಿನ ಯಾವುದೂ ಅಲ್ಲ

949. ಒಬ್ಬ ವ್ಯಕ್ತಿಯನ್ನು ತೋರಿಸಿ ಒಬ್ಬ ಪುರುಷ ಮಹಿಳೆಗೆ ಹೀಗೆ ಹೇಳುತ್ತಾನೆ; ‘ಈತನ ತಾಯಿ ನಿನ್ನ ತಂದೆಯ ಒಬ್ಬಳೇ ಮಗಳು’, ಹಾಗಾದರೆ, ಆ ವ್ಯಕ್ತಿಯೊಂದಿಗೆ ಮಹಿಳೆಯ ಸಂಬಂಧವೇನು?
ಎ) ಮಗಳು ಬಿ) ಸಹೋದರಿ
ಸಿ) ತಾಯಿ ಡಿ) ಪತ್ನಿ

950. ಜೇಡ:ಕೀಟ::ಮೊಸಳೆ:?
ಎ) ಸರೀಸೃಪ ಬಿ) ಸಸ್ತನಿ
ಸಿ) ಕಪ್ಪೆ ಡಿ) ಮಾಂಸಾಹಾರಿ

951. ಐಹೊಳೆ ಮತ್ತು ಬಾದಾಮಿಯ ದೇವಸ್ಥಾನಗಳು ಯಾರ ಶಿಲ್ಪಕಲೆಗಳ ನಿದರ್ಶನವಾಗಿದೆ?
ಎ) ಚಾಲುಕ್ಯರು ಬಿ) ರಾಷ್ಟ್ರಕೂಟರು
ಸಿ) ಗಂಗರು ಡಿ) ಹೊಯ್ಸಳರು

952. ಎಲ್ಲಾ ಆಮ್ಲಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಸ್ತು ಯಾವುದು?
ಎ) ಜಲಜನಕ ಬಿ) ಇಂಗಾಲ
ಸಿ) ಗಂಧಕ ಡಿ) ಆಮ್ಲಜನಕ

953. ಸೌರವ್ಯೂಹದಲ್ಲಿ ಅತಿ ಚಿಕ್ಕ ಗ್ರಹ ಯಾವುದು?
ಎ) ಯುರೇನಸ್ ಬಿ) ನೆಪ್ಚೂನ್
ಸಿ) ಬುಧ ಡಿ) ಮಂಗಳ

954. ರೋಗಗಳ ಅಧ್ಯಯನವನ್ನು ಏನೆಂದು ಕರೆಯುತ್ತಾರೆ?
ಎ) ಪ್ಯಾಥಾಲಜಿ ಬಿ) ನೆಫ್ರಾಲಾಜಿ
ಸಿ) ನ್ಯೂರಾಲಾಜಿ ಡಿ) ಆಂಜಿಯಾಲಾಜಿ

955. ‘ಧಾರವಾಡಿ’ ಇದು ಯಾವ ಪ್ರಾಣಿಯ ತಳಿ?
ಎ) ಆಕಳು ಬಿ) ಎಮ್ಮೆ
ಸಿ) ಕುರಿ ಡಿ) ಆಡು?

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 68ರ ಉತ್ತರಗಳು: 926. ಸಿ, 927. ಡಿ, 928. ಎ, 929. ಡಿ, 930. ಡಿ, 931. ಬಿ, 932. ಎ, 933. ಸಿ, 934. ಬಿ, 935. ಸಿ, 936. ಡಿ, 937. ಎ, 938. ಡಿ, 939. ಬಿ, 940. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿರಂತರವಾಗಿ ಕಲಿಯಿರಿ- ಸದಾಕಾಲ ಕಲಿಯಲು 'ಇನ್ನೂ ಒಂದು ವಿಷಯ' ಇದ್ದೇ ಇರುತ್ತದೆ!

–ಸ್ಟೀವ್ ಜಾಬ್ಸ್

ಆರೋಗ್ಯ ಕಾರ್ಡ್: ಉದ್ದೇಶ ಸ್ವಾಗತಾರ್ಹ ದತ್ತಾಂಶ ಸುರಕ್ಷತೆಯ ಖಾತರಿ ಬೇಕು

ಆಯುಷ್ಮಾನ್ ಭಾರತ ಡಿಜಿಟಲ್ ಆರೋಗ್ಯ ಅಭಿಯಾನದ ಭಾಗವಾಗಿ ದೇಶದ ಪ್ರತೀ ಪ್ರಜೆಗೆ 14 ಅಂಕಿಗಳ ಡಿಜಿಟಲ್ ಆರೋಗ್ಯ ಸಂಖ್ಯೆಯೊಂದನ್ನು ನೀಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕೇಂದ್ರವು ಇರಿಸಿರುವ ಬಹುದೊಡ್ಡ, ಮಹತ್ವಾಕಾಂಕ್ಷೆಯ ಹೆಜ್ಜೆ ಇದು. ಕೇಂದ್ರ ಸರ್ಕಾರದ ಉದ್ದೇಶಗಳು ಈಡೇರಿದರೆ ಚೆನ್ನ. ಆದರೆ, ಈ ಯೋಜನೆಯ ಪರಿಣಾಮಗಳು ಅಹಿತಕರವೂ ಆಗಬಹುದು ಎಂಬ ಎಚ್ಚರ ಅಗತ್ಯ. ಈ ಯೋಜನೆಗೆ ಕಳೆದ ವಾರ ಚಾಲನೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಹೊಸ ಹಾಗೂ ಅಸಾಮಾನ್ಯ ಕಾಲಘಟ್ಟವೊಂದು ಶುರುವಾಗಲಿದೆ ಎಂದು ಬಣ್ಣಿಸಿದ್ದಾರೆ. ದೇಶದ ಬಡ ಜನರಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಇರುವ ಹಲವು ಸಮಸ್ಯೆಗಳು ಈ ಯೋಜನೆಯಿಂದಾಗಿ ಪರಿಹಾರ ಕಾಣಲಿವೆ ಎಂದು ಹೇಳಿದ್ದಾರೆ. ಈ ಆರೋಗ್ಯ ಕಾರ್ಡ್‌ನಲ್ಲಿ ವ್ಯಕ್ತಿಯ ಆರೋಗ್ಯ ಸಂಬಂಧಿ ವಿವರಗಳು, ಆತನ ವೈದ್ಯಕೀಯ ಜಾತಕ ಅಡಕವಾಗಿರಲಿವೆ. ವ್ಯಕ್ತಿಯಲ್ಲಿ ಇರುವ ಕಾಯಿಲೆಗಳು, ಆತ ಒಳಪಟ್ಟಿರುವ ಪರೀಕ್ಷೆಗಳು, ಆತನಿಗೆ ಸೂಚಿಸಿರುವ ಚಿಕಿತ್ಸೆಗಳು ಮುಂತಾದ ವಿವರಗಳನ್ನು ಇದು ಹೊಂದಿರಲಿದೆ. ವಿವರಗಳೆಲ್ಲ ಡಿಜಿಟಲ್ ರೂಪದಲ್ಲಿ ಸಂಗ್ರಹವಾಗಿ ಇರಲಿವೆ. ಈ ವಿವರಗಳನ್ನು ದೇಶದ ಯಾವುದೇ ಮೂಲೆಯಲ್ಲಿ ಕುಳಿತಿರುವ ವೈದ್ಯರು ಮೊಬೈಲ್ ಆ್ಯಪ್ ಬಳಸಿ ವೀಕ್ಷಿಸಬಹುದು. ವಿವರಗಳು ಸುರಕ್ಷಿತವಾಗಿ ಇರಲಿವೆ ಹಾಗೂ ವಿವರಗಳನ್ನು ಇನ್ನೊಬ್ಬರು ವೀಕ್ಷಿಸಬೇಕು ಎಂದಾದಲ್ಲಿ ವ್ಯಕ್ತಿಯ ಸಮ್ಮತಿಯ ಅಗತ್ಯವಿದೆ ಎಂದು ಇದನ್ನು ರೂಪಿಸಿದವರು ಹೇಳಿದ್ದಾರೆ. ವೈದ್ಯಕೀಯ ಸೇವೆಗಳನ್ನು ಒದಗಿಸುವವರ ದತ್ತಾಂಶ ಹಾಗೂ ವೈದ್ಯಕೀಯ ಸೇವೆಗಳ ದತ್ತಾಂಶ ಕೂಡ ಸಿದ್ಧವಾಗಲಿದೆ ಎಂದು ಈ ಯೋಜನೆಯಲ್ಲಿ ಹೇಳಲಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳು ಮೂಡುತ್ತವೆ. ದತ್ತಾಂಶದ ಸಂಗ್ರಹ ಹಾಗೂ ಖಾಸಗಿತನಕ್ಕೆ ಸಂಬಂಧಿಸಿದಂತೆ ಒಂದಿಷ್ಟು ಆತಂಕಗಳೂ ಮೂಡುತ್ತವೆ

ಇಂಥದ್ದೊಂದು ಆರೋಗ್ಯ ಗುರುತಿನ ಚೀಟಿಯ ಅಗತ್ಯ ಇದೆ ಎಂದು ಹೇಳಬಹುದು. ಆದರೆ, ಈ ಯೋಜನೆಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳು ಮೂಡುತ್ತವೆ. ದತ್ತಾಂಶದ ಸಂಗ್ರಹ ಹಾಗೂ ಖಾಸಗಿತನಕ್ಕೆ ಸಂಬಂಧಿಸಿದಂತೆ ಒಂದಿಷ್ಟು ಆತಂಕಗಳೂ ಮೂಡುತ್ತವೆ. ಆರೋಗ್ಯ ಹಾಗೂ ವೈದ್ಯಕೀಯ ವಿವರಗಳನ್ನೆಲ್ಲ ಒಂದೆಡೆ, ಡಿಜಿಟಲ್ ಸ್ವರೂಪದಲ್ಲಿ ಸಂಗ್ರಹಿಸಿ ಇಡುವ ಈ ಯೋಜನೆಯು ಇಂತಹ ವಿವರಗಳನ್ನೆಲ್ಲ ಮುದ್ರಿತ ರೂಪದಲ್ಲಿ ವೈದ್ಯರ ಬಳಿ ಕೊಂಡೊಯ್ಯಬೇಕಾದ ಅಗತ್ಯವನ್ನು ಇಲ್ಲವಾಗಿಸುತ್ತದೆ. ಆದರೆ, ವಾಸ್ತವದಲ್ಲಿ ಯಾವುದೇ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ, ಮುದ್ರಿತ ರೂಪದಲ್ಲಿರುವ ವಿವರಗಳನ್ನು ವೈದ್ಯರ ಬಳಿ ಒಯ್ಯುವುದು ವ್ಯಕ್ತಿ ಎದುರಿಸುವ ಸಮಸ್ಯೆಗಳ ಸಾಲಿನಲ್ಲಿ ಅತ್ಯಂತ ಸಣ್ಣದು. ದೇಶದ ಆರೋಗ್ಯ ಸೇವಾ ವಲಯ ಎದುರಿಸುತ್ತಿರುವ ಸಮಸ್ಯೆಗಳ ಪಟ್ಟಿಯಲ್ಲಿಯೂ ವೈದ್ಯರ ಬಳಿ ಕಡತಗಳನ್ನು ಒಯ್ಯುವುದು ಮೊದಲ ಸ್ಥಾನದಲ್ಲಿ ಇರುವ ಸಮಸ್ಯೆ ಅಲ್ಲ. ಆರೋಗ್ಯ ಸೇವೆಗಳಿಗೆ ಅಗತ್ಯವಾಗಿರುವ ಮೂಲಸೌಕರ್ಯಗಳ ಕೊರತೆ, ವೈದ್ಯಕೀಯ ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯ ಕೊರತೆ, ಚಿಕಿತ್ಸಾ ವೆಚ್ಚವು ದುಬಾರಿ ಆಗಿರುವುದು, ಜನರಲ್ಲಿನ ಬಡತನ, ವೈದ್ಯಕೀಯ ಅಸಾಕ್ಷರತೆ... ಇಂಥವು ಪ್ರಮುಖ ಸಮಸ್ಯೆಗಳು. ಅತ್ಯಾಧುನಿಕ ಸೌಲಭ್ಯಗಳ ಆಸ್ಪತ್ರೆಗಳು ಇಲ್ಲದ ತಾಲ್ಲೂಕುಗಳು ಕರ್ನಾಟಕದಲ್ಲಿಯೇ ಹಲವು ಇವೆ. ಹೃದಯಾಘಾತದಂತಹ, ತಕ್ಷಣದ ಚಿಕಿತ್ಸೆ ಬೇಕಿರುವ ಸಂದರ್ಭಗಳು ಎದುರಾದಾಗ ಚಿಕಿತ್ಸೆ ಪಡೆಯಲು ನೂರಾರು ಕಿಲೊಮೀಟರ್ ಪ್ರಯಾಣಿಸಬೇಕಾದ ಸ್ಥಿತಿ ಕೂಡ ರಾಜ್ಯದ ಕೆಲವೆಡೆ ಇದೆ. ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಬೇಕಾಗುವ ವೆಚ್ಚವು ಮಧ್ಯಮ ವರ್ಗದವರಿಗೂ ಎಟುಕದಂತೆ ಇದೆ. ಆರೋಗ್ಯ ವಿಮೆಗಳನ್ನು ಪಡೆಯುವ ಅಗತ್ಯದ ಬಗ್ಗೆ ಎಲ್ಲರಿಗೂ ಅರಿವು ಇಲ್ಲ. ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ಕೆಲವು ಖಾಸಗಿ ಆಸ್ಪತ್ರೆಗಳು ವಿಪರೀತ ಪ್ರಮಾಣದಲ್ಲಿ ಶುಲ್ಕ ವಸೂಲಿ ಮಾಡಿದ ವರದಿಗಳು ಇವೆ. ಸರ್ಕಾರಿ ಆಸ್ಪತ್ರೆಗಳ ಗುಣಮಟ್ಟವು ಜನರಲ್ಲಿ ವಿಶ್ವಾಸ ಮೂಡಿಸುವಷ್ಟು ಇಲ್ಲ ಎಂದು ಹೇಳುವುದಕ್ಕೆ ಸಂಶೋಧನೆ ನಡೆಸಬೇಕಾದ ಅಗತ್ಯ ಇಲ್ಲ. ಈ ಎಲ್ಲ ಸಮಸ್ಯೆಗಳು ತೀರಾ ತುರ್ತಾಗಿ ನಿವಾರಣೆ ಆಗಬೇಕಾದವುಗಳು. ಆದರೆ, ಇವುಗಳನ್ನೆಲ್ಲ ಈ ಡಿಜಿಟಲ್ ಆರೋಗ್ಯ ಕಾರ್ಡ್ ಮೂಲಕ ನಿವಾರಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ದೇಶದ ಆರೋಗ್ಯ ಸೇವಾ ವಲಯದಲ್ಲಿ ಇರುವ ಮಿತಿಗಳು, ಆರೋಗ್ಯ ಕಾರ್ಡ್ ಸೌಲಭ್ಯವನ್ನು ಪೂರ್ತಿ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದೇ ಅನುಮಾನ. ಪ್ರಾಥಮಿಕ ಆರೋಗ್ಯ ಸೇವೆಗಳಾದರೂ ದೇಶದ ಪ್ರತೀ ಪ್ರಜೆಗೆ ಖಾತರಿಯಾಗಿ ಸಿಗುವ ಪರಿಸ್ಥಿತಿ ಇದ್ದರೆ ಈ ಕಾರ್ಡ್‌ನ ಪೂರ್ಣ ಪ್ರಯೋಜನ ಬಳಸಿಕೊಳ್ಳಲು ಸಾಧ್ಯವಾಗಬಹುದು.

ಖಾಸಗಿತನವು ಮೂಲಭೂತ ಹಕ್ಕುಗಳ ಪೈಕಿ ಒಂದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ವರ್ಷಗಳ ನಂತರವೂ ದೇಶದಲ್ಲಿ ಖಾಸಗಿತನವನ್ನು ರಕ್ಷಿಸುವ ಪ್ರತ್ಯೇಕ ಕಾನೂನಿನ ರಚನೆ ಆಗಿಲ್ಲ. ಇಂತಹ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬನ ಎಲ್ಲ ವೈದ್ಯಕೀಯ ವಿವರಗಳನ್ನು ಒಂದೆಡೆ ಡಿಜಿಟಲ್ ರೂಪದಲ್ಲಿ ಶೇಖರಿಸಿ ಇಡುವುದು ಅಪಾಯಕಾರಿ ಆಗಬಹುದು. ಮಾಹಿತಿ ಕಳ್ಳತನ ಹಾಗೂ ವಿವರಗಳ ದುರ್ಬಳಕೆಯನ್ನು ತಡೆಯಲು ಬಲಿಷ್ಠ ಕಾನೂನು ಇಲ್ಲ. ಖಾಸಗಿತನದ ವಿಚಾರವಾಗಿ ದೇಶದಲ್ಲಿ ಅರಿವು ಕೂಡ ಕಡಿಮೆ. ಜನರ ವೈದ್ಯಕೀಯ ವಿವರಗಳನ್ನು ಪಡೆದುಕೊಂಡು ವಿಮಾ ಕಂಪನಿಗಳು, ಔಷಧ ಕಂಪನಿಗಳು ಆ ವಿವರಗಳನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲು ಆಗದು. ಆಗ ಇಡೀ ಯೋಜನೆಯು ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿ ಪರಿಣಮಿಸಬಹುದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಇಂತಹ ಗುರುತಿನ ಚೀಟಿಗಳು ತೃಪ್ತಿಕರ ಮಟ್ಟದಲ್ಲಿ ಪ್ರಯೋಜನಕಾರಿ ಆಗಿಲ್ಲ. ಹೊಸ ಯೋಜನೆಯನ್ನು ವ್ಯಾಪಕವಾಗಿ ಜಾರಿಗೊಳಿಸುವ ಮುನ್ನ ಈ ಸಂಗತಿಗಳ ಬಗ್ಗೆ ಪರಿಶೀಲನೆ ನಡೆಸಿದರೆ ಒಳಿತು.

ದಿನದ ಟ್ವೀಟ್

ಭದ್ರತೆ ಬಿಗಿಯಾಗಲಿ

ಮಾರಣಾಂತಿಕ ಮತ್ತು ವ್ಯಸನಕಾರಿಯಾಗಿರುವ ಮಾದಕದ್ರವ್ಯವು ದೇಶದಾದ್ಯಂತ ಯುವಪೀಳಿಗೆ ವಲಯದಲ್ಲಿ ವ್ಯಾಪಿಸಿದೆ. ಪೋಷಕರು ತಮ್ಮ ಮಕ್ಕಳ ಮೇಲೆ ನಿಗಾ ಇರಿಸಬೇಕು. ಅಲ್ಲದೇ ಅಪಾಯಕಾರಿ ಮಾದಕವಸ್ತುಗಳು ಸುಲಭವಾಗಿ ಸಿಗದಂತೆ ನೋಡಿಕೊಳ್ಳಲು ಗಡಿಗಳಲ್ಲಿ, ಬಂದರು, ವಿಮಾನ ನಿಲ್ದಾಣ ಹಾಗೂ ರೈಲುಗಳಲ್ಲಿ ಭದ್ರತಾ ವ್ಯವಸ್ಥೆ ಕುರಿತು ಮರುಪರಿಶೀಲಿಸಬೇಕಾಗಿದೆ.

ಪ್ರಿಯಾಂಕಾ ಚತುರ್ವೇದಿ, ರಾಜ್ಯಸಭಾ ಸದಸ್ಯೆ, ಶಿವಸೇನಾ ನಾಯಕಿ

ಕಿಡಿನುಡಿ

ಜಾತಿ ಸಮ್ಮೇಳನಗಳನ್ನು ಮಾಡುವುದು ತಪ್ಪು ಎಂದು ಕೆಲವರು ಹೇಳುತ್ತಾರೆ. ಮುಂದೆ ತಮ್ಮ ವಿರುದ್ಧವೇ ಧ್ವನಿ ಎತ್ತಬಹುದು ಎಂಬ ಹತಾಶೆ ಇದಕ್ಕೆ ಕಾರಣ. ಅವಕಾಶಗಳಿಂದ ವಂಚಿತವಾಗಿರುವ ಸಮುದಾಯಗಳು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ, ಪರಿಹಾರ ಕಂಡುಕೊಳ್ಳುವುದು ಅತಿ ಅಗತ್ಯ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಶುಕ್ರವಾರ, 4-10-1996

• ರಾಜ್ಯದಲ್ಲಿ ಶೀಘ್ರವೇ 4 ಹೊಸ ಜಿಲ್ಲೆ: ಪಟೇಲ್

ರಾಯಚೂರು, ಅ. 3– ನಾಲ್ಕು ಹೊಸ ಜಿಲ್ಲೆಗಳನ್ನು ರಚಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಹೇಳಿದರು.

ವಿಧಾನಸಭೆ ಉಪಚುನಾವಣೆಗಾಗಿ ಪಕ್ಷದ ಅಭ್ಯರ್ಥಿ ಪರ ಯಲ್ಬುರ್ಗದಲ್ಲಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡ ನಂತರ ಮುಖ್ಯಮಂತ್ರಿ ಅವರು ಯಲ್ಬುರ್ಗ ತಾಲ್ಲೂಕಿನ ಕುಕನೂರಿನಲ್ಲಿ ವರದಿಗಾರರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿದರು. ಆದರೆ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾದೀತು ಎಂಬ ದೃಷ್ಟಿಯಿಂದ, ಉದ್ದೇಶಿತ ಈ ಜಿಲ್ಲೆಗಳು ಯಾವುವು ಎಂಬುದನ್ನು ಹೇಳಬಯಸಲಿಲ್ಲ.

ಹೊಸ ಜಿಲ್ಲೆಗಳನ್ನು ರಚಿಸುವುದಕ್ಕೆ ಸರ್ಕಾರದ ಕಾಲಮಿತಿ ಏನು ಎಂಬುದನ್ನೂ ಅವರು ತಿಳಿಸಲಿಲ್ಲ. ಕೊಪ್ಪಳ, ಬಾಗಲಕೋಟೆ, ಧಾರವಾಡ ದಕ್ಷಿಣ ಹಾಗೂ ದಾವಣಗೆರೆ ಜಿಲ್ಲೆಗಳನ್ನು ರಚಿಸಬೇಕು ಎಂಬ ಬೇಡಿಕೆ ಹಲವು ದಿನಗಳಿಂದ ಇರುವುದನ್ನು ಇಲ್ಲಿ ಸ್ಮರಿಸಬಹುದು.

50 ವರ್ಷಗಳ ಹಿಂದೆ
ಸೋಮವಾರ, 4-10-1971

• ಹರಿಜನರಿಗೆ ಸಮಾಜದಲ್ಲಿ ಗೌರವ ಸ್ಥಾನ: ಜನಸಂಘ ಚುನಾವಣೆ ಪ್ರಣಾಳಿಕೆ ಭರವಸೆ

ಬೆಂಗಳೂರು, ಅ. 3– 'ಹರಿಜನ' ಎಂಬ ಪ್ರತ್ಯೇಕ ವರ್ಗವೇ ಉಳಿಯದೆ ಅವರಿಗೆ ಸಮಾಜದಲ್ಲಿ ಗೌರವದ ಸ್ಥಾನ ಲಭಿಸಿ ಇಡೀ ಸಮಾಜವು ಒಂದಾಗಿ ಬಾಳುವಂತೆ ಪ್ರಯತ್ನ ಮಾಡಲಾಗುವುದೆಂದು ಇಂದು ಇಲ್ಲಿ ಪ್ರಕಟವಾದ ಭಾರತೀಯ ಜನಸಂಘದ ಕರ್ನಾಟಕ ಶಾಖೆಯ ಚುನಾವಣಾ ಪ್ರಣಾಳಿಕೆ ಭರವಸೆ ನೀಡಿತು.

1972ರ ಚುನಾವಣಾ ಪ್ರಣಾಳಿಕೆಯನ್ನು ಇಂದು ಇಲ್ಲಿ ಸಮಾವೇಶಗೊಂಡಿದ್ದ ಸಂಘದ ಪ್ರತಿನಿಧಿ ಸಭೆಯಲ್ಲಿ ಮಂಡಿಸಲಾಯಿತು.

ಅದರ ಇತರ ಪ್ರಮುಖ ಅಂಶಗಳು: ಅಭಾವಪೀಡಿತ ಪ್ರತೀ ತಾಲ್ಲೂಕಿಗೆ 1 ಸಾವಿರ ನೀರಾವರಿ ಬಾವಿ ನಿರ್ಮಾಣ, ಬೆಳೆ ವಿಮೆ ಯೋಜನೆ, ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ, ಸಂಚಾರಿ ಆಸ್ಪತ್ರೆಗಳ ಸ್ಥಾಪನೆ, ಆಕ್ಟ್ರಾಯ್ ರದ್ದು, ಆಹಾರಧಾನ್ಯಗಳ ಮೇಲಿನ ಮಾರಾಟ ತೆರಿಗೆ ರದ್ದು, ಮಂತ್ರಿಗಳು, ಅಧಿಕಾರಿಗಳ ವಿರುದ್ಧ ಬರುವ ದೂರುಗಳನ್ನು ವಿಚಾರಿಸಲು ಆಡಳಿತಾತ್ಮಕ ಸಮಿತಿ ರಚನೆ.

ಅಮೆರಿಕದ ಆಟಗಳಿಗೆ ಭಾರತ ದಾಳವಾಗುವುದರಿಂದ ಆಗಬಹುದಾದ ಪರಿಣಾಮಗಳೇನು?

'ಕ್ವಾಡ್', 'ಆಕಸ್' ಸುಳಿಯಲ್ಲಿ ಏಷ್ಯಾ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಗುರುದೇವ ರವೀಂದ್ರನಾಥ ಟ್ಯಾಗೋರ್ ಇಂದು ಬದುಕಿದ್ದಿದ್ದರೆ ಅವರು ದುಃಖಭರಿತ ವ್ಯಕ್ತಿಯಾಗಿರುತ್ತಿದ್ದರು. ಏಷ್ಯನ್ ಏಕತೆಯನ್ನು ಪಟ್ಟುಹಿಡಿದು ಪ್ರತಿಪಾದಿಸಿದ ಕವಿ, ತತ್ವಜ್ಞಾನಿ ಅವರು. ಏಷ್ಯಾದಲ್ಲಿನ ಸಂಘರ್ಷಗಳು, ಅನೈಕ್ಯತೆ ಹಾಗೂ ಏಷ್ಯಾ ಖಂಡವನ್ನು ಪ್ರಾಂತ್ಯವಾರು ಪೈಪೋಟಿಯ ರಾಡಿಯಲ್ಲಿ ಇರಿಸುವಲ್ಲಿ ಪಾಶ್ಚಿಮಾತ್ಯ ಶಕ್ತಿಗಳ ಸದ್ಯದ ಪ್ರಯತ್ನಗಳಿಂದ ಅವರು ಖಂಡಿತ ಯಾತನೆ ಅನುಭವಿಸಿರುತ್ತಿದ್ದರು. ಅವರ ಕಾಲದಲ್ಲಿ ಅವರಷ್ಟು ಅಷ್ಟೊಂದು ಏಷ್ಯನ್ ರಾಷ್ಟ್ರಗಳಿಗೆ ಭೇಟಿ ನೀಡಿದ ಭಾರತೀಯ ನೇತಾರರೇ ಇರಲಿಲ್ಲ.

'ಏಷ್ಯನ್ ಮನಸ್ಸು ಸೃಷ್ಟಿ'- ಅವರ ಜೀವಿತದ ಧ್ಯೇಯವಾಗಿತ್ತು. 1921ರಲ್ಲಿ ಅವರು 'ವಿಶ್ವ ಭಾರತಿ'ಯನ್ನು ಸ್ಥಾಪಿಸಿದಾಗ, ಏಷ್ಯಾದ ಇತರ ರಾಷ್ಟ್ರಗಳ ಜೊತೆಗೆ ಭಾರತವನ್ನು ಬೆಸೆದಿದ್ದ ನಾಗರಿಕ, ಸಾಂಸ್ಕೃತಿಕ ಹಾಗೂ ಅಧ್ಯಾತ್ಮದ ಬಂಧಗಳನ್ನು ಪುನರುಜ್ಜೀವಗೊಳಿಸುವುದೇ ಅವರ ಮುಖ್ಯ ಗುರಿಯಾಗಿತ್ತು.

ಗುರುದೇವರ ಕನಸಿನ 'ಏಷ್ಯನ್ ಮನಸ್ಸು' ಇಂದು ಛಿದ್ರಗೊಂಡಿದೆ. ಒಂದಾನೊಂದು ಕಾಲದಲ್ಲಿ ವಸಾಹತುಶಾಹಿಯ ಬಲಿಪಶುಗಳಾಗಿದ್ದಂತಹ ರಾಷ್ಟ್ರಗಳು ಪರಸ್ಪರ ದೂರ ಸರಿದಿವೆ. ಸ್ಪರ್ಧಾತ್ಮಕ ಗುಂಪುಗಳನ್ನು ಸೃಷ್ಟಿಸಿ ಸಂಘರ್ಷದ ಕಿಡಿಯನ್ನು ಹೊತ್ತಿಸಲು ಪಾಶ್ಚಿಮಾತ್ಯ ಶಕ್ತಿಗಳು ಯತ್ನಿಸುತ್ತಿರುವ ಸಂದರ್ಭದಲ್ಲಿ ವಿಶ್ವದ ಶೇಕಡ 60ರಷ್ಟು ಜನಸಂಖ್ಯೆಗೆ ನೆಲೆಯಾದ ಏಷ್ಯಾ, ಅಶಾಂತಿಯ ಬೀಡಾಗುತ್ತಿರುವುದು ಹೆಚ್ಚಾಗುತ್ತಿದೆ. ದುಃಖದ ಸಂಗತಿ ಎಂದರೆ, ಏಷ್ಯಾದ ಆಂತರಿಕ ಕಲಹಗಳು ಶಾಂತಿಗೆ ಮಾರಕವಾಗುತ್ತಿರುವುದಲ್ಲದೇ ಜನರ ಯೋಗಕ್ಷೇಮ ಹೆಚ್ಚಿಸಲು ಪರಸ್ಪರ ಪೂರಕವಾಗಿರುವಂತಹ ಸಹಕಾರದ ಅವಕಾಶಗಳ ಬಾಗಿಲುಗಳನ್ನೂ ಮುಚ್ಚಿಬಿಡುತ್ತಿವೆ.

ಪಶ್ಚಿಮ ಏಷ್ಯಾ ಇತ್ತೀಚಿನ ವರ್ಷಗಳಲ್ಲಿ ಅನೇಕ ಯುದ್ಧಗಳನ್ನು ಕಂಡಿದೆ: ಇರಾನ್- ಇರಾಕ್ ಯುದ್ಧ, ಇರಾಕ್ ಮೇಲೆ ಅಮೆರಿಕ ದಾಳಿ, ಸಿರಿಯಾ ಮತ್ತು ಯೆಮನ್‌ಗಳಲ್ಲಿ ನಡೆಯುತ್ತಿರುವ ಯುದ್ಧಗಳು. ದಕ್ಷಿಣ ಏಷ್ಯಾದಲ್ಲಿ, ಅಫ್ಗಾನಿಸ್ತಾನವು ನಾಲ್ಕು ದಶಕಗಳ ಕಾಲ ಹೊರಗಿನ ಯುದ್ಧಗಳು ಹಾಗೂ ಆಂತರಿಕ ಕಾದಾಟಗಳನ್ನು ಅನುಭವಿಸಿದೆ. ಇತ್ತೀಚೆಗೆ ಅಮೆರಿಕ ಸೇನೆ ವಾಪಸಾತಿಯ ನಂತರವೂ ಅಫ್ಗಾನಿಸ್ತಾನದಲ್ಲಿ ಸ್ಥಿರತೆ ಸಾಧಿಸಲು, ರಾಷ್ಟ್ರದ ಮರುರಚನೆಗೆ ನೆರವಾಗಲು ಭಾರತದಿಂದಾಗಲೀ ನೆರೆಹೊರೆ ರಾಷ್ಟ್ರಗಳಿಂದಾಗಲೀ ಯಾವುದೇ ಸಹಕಾರದ ಪ್ರಯತ್ನಗಳಾಗಿಲ್ಲ.

ಇದಕ್ಕೆ ಒಂದು ಕಾರಣ, ತಾಲಿಬಾನ್‌ನ ಧಾರ್ಮಿಕ ಮತಾಂಧತೆ. ಮತ್ತೊಂದು, ಭಾರತ- ಪಾಕಿಸ್ತಾನದ ನಡುವಿನ ಹಗೆತನ. ನಮ್ಮ ಎಡೆಬಿಡದ ಶತ್ರುತ್ವದಿಂದಾಗಿ, ಅಫ್ಗಾನಿಸ್ತಾನ ಸಹ ಸದಸ್ಯ ರಾಷ್ಟ್ರವಾಗಿರುವ ಸಾರ್ಕ್ (ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ಸಂಘಟನೆ) ಪೂರ್ಣ ನಿಷ್ಕ್ರಿಯಗೊಂಡಿದೆ ಹಾಗೂ ಕೋಮಾ ಸ್ಥಿತಿಯಲ್ಲಿದೆ. ಇದರ ನೇತಾರರು 2014ರಿಂದಲೂ ಶೃಂಗಸಭೆ ನಡೆಸುವುದು ಸಾಧ್ಯವಾಗಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಶಾಂಘೈ ಸಹಕಾರ ಸಂಘಟನೆಯನ್ನು (ಎಸ್‌ಸಿಒ), ಈ ಪ್ರದೇಶದಲ್ಲಿ ಪಾಶ್ಚಿಮಾತ್ಯೇತರ ಕಾರ್ಯಸಾಧ್ಯ ವೇದಿಕೆಯಾಗಿ ರೂಪಿಸುವಲ್ಲಿ ಚೀನಾ ಒಂದಿಷ್ಟು ಯಶಸ್ಸು ಸಾಧಿಸಿದೆ.

ಹೆಚ್ಚು ಆತಂಕದ ಸಂಗತಿ ಎಂದರೆ, ಅಫ್ಗಾನಿಸ್ತಾನದಲ್ಲಿನ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳನ್ನು ಆ ದೇಶದ ಹೊರಗಿನಿಂದ ನಡೆಸುವುದಕ್ಕಾಗಿ ವಾಯವ್ಯ ಭಾರತದ ಒಂದು ಜಾಗದಲ್ಲಿ ಮಿಲಿಟರಿ ನೆಲೆಯನ್ನು ಹೊಂದಲು ಅಮೆರಿಕ ನಡೆಸಿರುವ ಪ್ರಯತ್ನ ಕುರಿತಾದಂತಹ ವರದಿ. ಇದಕ್ಕೆ ಒಪ್ಪಿಕೊಳ್ಳುವುದು ಭಾರತ ಹಾಗೂ ಸುತ್ತಲಿನ ವಲಯಕ್ಕೆ ವಿಪ್ಲವಕಾರಿಯಾದುದು. ಇದರಿಂದ ದ್ವಿಮುಖ ಮಾನದಂಡಗಳನ್ನು ಅನುಸರಿಸುವ ಕುರಿತಾದ ಟೀಕೆಗಳಿಗೂ ನಮ್ಮನ್ನು ನಾವೇ ತೆರೆದುಕೊಂಡಂತಾಗುತ್ತದೆ.

ಭಾರತದ ವಿರುದ್ಧದ ಕಾರ್ಯಾಚರಣೆಗಳಿಗೆ ಅಫ್ಗನ್ ನೆಲ ಬಳಸಿಕೊಳ್ಳಲು ತಾಲಿಬಾನ್ ಅವಕಾಶ ನೀಡಬಾರದೆಂದು ಭಾರತ ಸರಿಯಾಗಿಯೇ ಒತ್ತಾಯಿಸುತ್ತಿದೆ. ಹಾಗಿದ್ದಲ್ಲಿ, ಭಾರತೀಯ ನೆಲದಿಂದ ಅಮೆರಿಕದ ಅಫ್ಗನ್ ವಿರೋಧಿ ಕಾರ್ಯಾಚರಣೆಗಳಿಗೆ ನಾವು ಹೇಗೆ ಅವಕಾಶ ನೀಡಬಹುದು?

ಏಷ್ಯಾದ ಒಳಗಿನ ಮತ್ತೊಂದು ಪ್ರಮುಖ ವೈರತ್ವವನ್ನು ಪರಿಶೀಲಿಸೋಣ. ಏಷ್ಯಾ ನಾಗರಿಕತೆಯ ಎರಡು ದೊಡ್ಡ ನೆರೆಹೊರೆಯ ರಾಷ್ಟ್ರಗಳಾದ ಭಾರತ ಮತ್ತು ಚೀನಾ, ಪರಸ್ಪರ ಶಕ್ತಿ ಸಮರದಲ್ಲಿ ಸಿಲುಕಿಕೊಂಡಿವೆ. ದಕ್ಷಿಣ ಚೀನಾ ಸಮುದ್ರದಲ್ಲಿ ನೆರೆಹೊರೆಯವರೊಂದಿಗೆ ಕಡಲ ವ್ಯಾಜ್ಯಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸಿಕೊಳ್ಳುವಲ್ಲಿನ ಚೀನಾದ ವೈಫಲ್ಯವೂ ಕದಡಿದ ಜಲದಲ್ಲಿ ಮೀನು ಹಿಡಿಯಲು ದೂರದ ಅಮೆರಿಕಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ.

ಏಷ್ಯನ್ ವಿವಾದಗಳಲ್ಲಿ ತಲೆಹಾಕಲು ಅಮೆರಿಕಕ್ಕೆ ಯಾವ ಪ್ರಮೇಯವೂ ಇಲ್ಲ. ಹೀಗಿದ್ದೂ ಜಾಗತಿಕ ನಾಯಕತ್ವ ಪಡೆದುಕೊಳ್ಳುವಂತಹ ಹಿತಾನುಭವವನ್ನು ಭಾರತದ ಪಾಶ್ಚಾತ್ಯ ಅನುಕರಣೆಯ ಆಡಳಿತದ ಗಣ್ಯರಿಗೆ ನೀಡುವ ರೀತಿಯಲ್ಲಿ 'ಭಾರತ- ಪೆಸಿಫಿಕ್' ಕೃತಕ ಪರಿಕಲ್ಪನೆಯನ್ನು ಮುಂದೆ ಮಾಡಿ, ಭಾರತ-ಚೀನಾ ಜಗಳದಲ್ಲಿ ತನಗೂ ನೆಲೆ ಒದಗಿಸಿಕೊಳ್ಳಲು ಮೋದಿ ನೇತೃತ್ವದ ಸರ್ಕಾರದ ಮನ ಒಲಿಸಿದೆ ಅಮೆರಿಕ.

ಎರಡನೇ ವಿಶ್ವ ಮಹಾಯುದ್ಧ ಮುಗಿದ ನಂತರ, ತಮ್ಮ ರಾಷ್ಟ್ರವೇ ಜಾಗತಿಕ ದೊಡ್ಡಣ್ಣನಾಗಿದ್ದು, ವಿಶ್ವದಲ್ಲಿ ಎಲ್ಲಿ ಬೇಕಾದರೂ ಶಕ್ತಿ ಪ್ರದರ್ಶಿಸುವ ಹಕ್ಕು ಇದೆ ಎಂಬಂಥ ನಂಬಿಕೆಯಲ್ಲಿ ಅಮೆರಿಕದ ಆಡಳಿತಗಾರರು ವರ್ತಿಸುತ್ತಿದ್ದಾರೆ. ಆದರೆ, ಇತ್ತೀಚಿನ ದಶಕಗಳಲ್ಲಿ ಚೀನಾದ ಪ್ರಬಲ ಹೊಮ್ಮುವಿಕೆಯಿಂದಾಗಿ ಜಾಗತಿಕವಾಗಿ ಅಮೆರಿಕ ಪ್ರಾಬಲ್ಯದ ದಿನಗಳನ್ನು ಸ್ಪಷ್ಟವಾಗಿ ಎಣಿಸುವಂತಾಗಿದೆ. ಈ ಖಚಿತತೆಯಿಂದ ಆತಂಕಗೊಂಡಿರುವ ಅಮೆರಿಕವು ಏಷ್ಯಾದಲ್ಲಿ ಅನೈಕ್ಯತೆಯ ಬೀಜಗಳನ್ನು ಬಿತ್ತುವ ಕ್ರಿಯೆಯಲ್ಲಿ ತೊಡಗಿಕೊಂಡಿದೆ. ಈ ಉದ್ದೇಶಕ್ಕಾಗಿ ಚೀನಾವನ್ನು ನಿಗ್ರಹಿಸಲು ಮಿಲಿಟರಿ ಗುಂಪುಗಳನ್ನು ಇದು ನಿರ್ಮಿಸುತ್ತಿದೆ. ದುರದೃಷ್ಟವಶಾತ್ ನಾವು ಭಾರತೀಯರು, ಚೀನಾದ ಜೊತೆಗಿನ ನಮ್ಮ ವಿವಾದಗಳನ್ನು ನಮ್ಮದೇ ಸಮಾನತೆ ಹಾಗೂ ನ್ಯಾಯದ ಆಧಾರದ ಮೇಲೆ ಪರಿಹರಿಸಿಕೊಳ್ಳುವ ಬದಲಿಗೆ, ಅಮೆರಿಕ ನೇತೃತ್ವದ ನಾಲ್ಕು ರಾಷ್ಟ್ರಗಳ ಕೂಟಕ್ಕೆ ಸೇರಿಕೊಳ್ಳುವುದನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಮೂಲಭೂತವಾಗಿ ಚೀನಾ ವಿರೋಧಿ ಮೈತ್ರಿಕೂಟವಾಗಿರುವ 'ಕ್ವಾಡ್', ಏಷ್ಯಾವನ್ನು ಹೊಸ ಶೀತಲ ಸಮರ ಹಾಗೂ ದುಬಾರಿ ಶಸ್ತ್ರಾಸ್ತ್ರ ಪೈಪೋಟಿಯ ರಂಗಮಂಚವಾಗಿಸಬಹುದು. ಚೀನಾದ ಮೇಲೆ ಗುಂಡು ಹಾರಿಸಲು ತನ್ನ ಭುಜದ ಮೇಲೆ ಬಂದೂಕುಗಳನ್ನು ಇಡಲು ಹೊರಗಿನವರಿಗೆ ಭಾರತ ಅವಕಾಶ ಮಾಡಿಕೊಡಬೇಕೇ? ಅಮೆರಿಕದ ಆಟಗಳಿಗೆ ಭಾರತ ದಾಳವಾಗುವುದರಿಂದ ಆಗಬಹುದಾದ ಪರಿಣಾಮಗಳೇನು?



'ಆಕಸ್' (AUKUS) ಎಂಬ ಮತ್ತೊಂದು ಚೀನಾ ವಿರೋಧಿ ಗುಂಪನ್ನು ಈಗ ಅಮೆರಿಕ ಸೃಷ್ಟಿಸಿದೆ. ಆಸ್ಟ್ರೇಲಿಯಾ, ಬ್ರಿಟನ್ ಹಾಗೂ ಅಮೆರಿಕ ಮಧ್ಯದ ಭದ್ರತಾ ಒಡಂಬಡಿಕೆ ಇದು. ಈ ಮೂರೂ, ಬ್ರಿಟಿಷ್ ಸಂಸ್ಕೃತಿಯಲ್ಲಿ ಮೂಲ ಎಳೆ ಹೊಂದಿ ಆಂಗ್ಲ ಭಾಷೆ ಮಾತನಾಡುವಂತಹ ರಾಷ್ಟ್ರಗಳು. ಚೀನಾವನ್ನು ತಡೆಯುವುದಕ್ಕಾಗಿ ಪರಮಾಣುಶಕ್ತ ಸಬ್‌ಮರಿನ್‌ಗಳನ್ನು ಅಭಿವೃದ್ಧಿಪಡಿಸಿ ನಿಯೋಜಿಸಲು ಆಸ್ಟ್ರೇಲಿಯಾಗೆ ಅಮೆರಿಕ ಮತ್ತು ಬ್ರಿಟನ್ ನೆರವಾಗಲಿವೆ. ತನ್ನೆರಡು ನ್ಯಾಟೊ ಮಿತ್ರರಾಷ್ಟ್ರಗಳ ಬಗ್ಗೆ ಫ್ರಾನ್ಸ್‌ಗೆ ತೀವ್ರ ಕೋಪವಿದೆ. ಏಕೆಂದರೆ, ಲಾಭದಾಯಕವಾದ 8,000 ಕೋಟಿ ಡಾಲರ್ ಮೌಲ್ಯದ ಫ್ರೆಂಚ್ – ಆಸ್ಟ್ರೇಲಿಯನ್ ಸಬ್‌ಮರಿನ್ ಒಪ್ಪಂದಕ್ಕೆ ಈ ಒಡಂಬಡಿಕೆಯಿಂದ ಕುತ್ತುಬಂದಿದೆ. ಹಲವು ಪಾಶ್ಚಿಮಾತ್ಯ ರಾಷ್ಟ್ರಗಳು ಹೇಗೆ ಈಗ ಪ್ರಮುಖವಾಗಿ ಯುದ್ಧ ಆರ್ಥಿಕತೆಗಳಾಗುತ್ತಿವೆ ಎಂಬುದನ್ನು ಇದು ತೋರಿಸುತ್ತದೆ.

'ಕ್ವಾಡ್' ಇರಲಿ, 'ಆಕಸ್' ಇರಲಿ, ಹೇಗೆ ನಮ್ಮ ಸಮುದ್ರಗಳು ಹಾಗೂ ಸಾಗರಗಳು, ವಿಪತ್ತುಕಾರಕ ಸಮರನೌಕೆಗಳು ಹಾಗೂ ಸಬ್‌ಮರಿನ್‌ಗಳ ಕ್ರೀಡಾಂಗಣಗಳಾಗುತ್ತಿರುವುದು ಹೆಚ್ಚುತ್ತಿದೆ ಎಂಬುದು ಭಾರತೀಯರು ಹಾಗೂ ಇತರ ಎಲ್ಲಾ ಏಷ್ಯನ್ನರ ಚಿಂತೆಗೆ ಕಾರಣವಾಗಬೇಕು. ತಮ್ಮ ನೌಕಾಪಡೆಗಳನ್ನು ಬಳಸಿಕೊಂಡು ಶಕ್ತ ರಾಷ್ಟ್ರಗಳು 'ವಿಶ್ವದ ಶಾಂತಿಗೆ ಬೆದರಿಕೆಯೊಡ್ಡಿ ವಿಶ್ವದ ಸಂಪನ್ಮೂಲಗಳನ್ನು ದೋಚಬಹುದು' (ಯಂಗ್ ಇಂಡಿಯಾ; 8 ಡಿಸೆಂಬರ್ 1921) ಎಂಬಂಥ ಭವಿಷ್ಯದ ಬಗ್ಗೆ ಮಹಾತ್ಮ ಗಾಂಧಿಯವರು ಸರಿಯಾಗಿ ನೂರು ವರ್ಷಗಳ ಹಿಂದೆ ಎಚ್ಚರಿಕೆ ನೀಡಿದ್ದರು. ಅವರ ಎಚ್ಚರಿಕೆ, ಈಗ ಭಯಾನಕ ಸತ್ಯವಾಗಿ ಪರಿಣಮಿಸುತ್ತಿದೆ.

ಎರಡು ಭಯಂಕರ ವಿಶ್ವಯುದ್ಧಗಳಿಗೆ ಪ್ರೇರಕವಾದ ಯುರೋಪಿಯನ್ ಪೈಪೋಟಿಯ ರಾಕ್ಷಸೀಯ ಲಕ್ಷಣಗಳ ಅನುಕರಣೆಯ ವಿರುದ್ಧ ಏಷ್ಯನ್ನರನ್ನು ಟ್ಯಾಗೋರ್ ಸಹ ಎಚ್ಚರಿಸಿದ್ದರು. ಗುರುದೇವರ ಈ ಎಚ್ಚರಿಕೆಯನ್ನೂ 'ವಿಶ್ವ ಗುರು' ಆಗಲು ಉತ್ಕಟಾಕಾಂಕ್ಷಿಯಾಗಿರುವ ಭಾರತವು ತನ್ನದೇ ಆನಂದದಲ್ಲಿ ಮೈಮರೆತು ಕಡೆಗಣಿಸುತ್ತಿದೆ.

ಚುರುಮುರಿ

ನಿಜವಾದ 'ತಲೈವಿ'

• ಸುಮಂಗಲಾ

'ಲಖನೌಗೆ ಹೋಕ್ತೀನಿ, ಟಿಕೆಟ್ ತೆಗೆಸಿಕೊಡು' ಎಂದು ಬೆಕ್ಕಣ್ಣ ದುಂಬಾಲು ಬಿದ್ದಿತ್ತು. 'ಎದಕ್ಕೆ ಹೋಕ್ತೀಯಲೇ' ಎಂದರೆ ಬಾಯಿ ಬಿಡಲಿಲ್ಲ. ಆಮೇಲೆ ಮತ್ತಗೆ 'ನೋಡಿಲ್ಲಿ' ಎಂದು ಸುದ್ದಿಯೊಂದಿಗೆ ವಿಡಿಯೊ ಕ್ಲಿಪಿಂಗ್ ಅನ್ನೂ ತೋರಿಸಿತು.

'ಕಂಗನಾಗೆ ಯೋಗಿಮಾಮಾ ಬೆಳ್ಳಿನಾಣ್ಯ ಉಡುಗೊರೆ ಕೊಟ್ಟಾನ. ನಾನೂ ಭೆಟ್ಟಿಯಾಗಿ, ನಾಣ್ಯ ಇಸಗೋತೀನಿ' ಎಂದಿತು.

ನನಗೆ ನಗು ತಡೆಯಲಾಗಲಿಲ್ಲ. 'ಮಂಗ್ಯಾನಂಥವ್ನೆ... ಅವರೇನು ಸುಮ್‌ಸುಮ್ನೆ ಎಲ್ಲಾರಿಗೂ ಕೊಡತಾರೇನು? ಆಕಿ ಸ್ಟಾರ್ ನಟಿ ಅದಾಳ, ಉತ್ತರಪ್ರದೇಶಕ್ಕೆ ರಾಯಭಾರಿ, ಅಂದ್ರ ಬ್ರಾಂಡ್ ಅಂಬಾಸಡರ್ ಆಗ್ತಾಳಂತ. ಅದಕ್ಕೆ ಕೊಟ್ಟಾರ. ನಿನ್ನಂಥೋರು ಹೋದ್ರೆ ಅವರಿಗೆ ಭೆಟ್ಟಿಯಾಗಾಕೂ ಟೈಮಿರಂಗಿಲ್ಲ' ಎಂದೆ.

'ಆಕಿ ತಲೈವಿ ಸಿನಿಮಾಗೆ ಆರು ತಿಂಗಳಿನಾಗೆ ಇಪ್ಪತ್ತು ಕೆಜಿ ತೂಕ ಹೆಚ್ಚಿಸ್ಕಂಡು, ಮತ್ತೆ ಆರೇ ತಿಂಗಳಿನಾಗೆ ಇಪ್ಪತ್ತು ಕೆಜಿ ಇಳಿಸಿ ಬಳಕೂಬಳ್ಳಿ ಆಗ್ಯಾಳಂತ. ಮಹಾರಾಜಾ, ನಿಮ್ಮದೇ ರಾಜ್ಯಭಾರ ಮುಂದುವರೆದರೆ ಎಷ್ಟ ಛಂದ ಅಂತ ಯೋಗಿಮಾಮಾನ ವರ್ಣನಾ ಮಾಡ್ಯಾಳ. ಕಂಗನಾ ಭಯಂಕರ ಶಾಣೇ ಅದಾಳ' ಎಂದು ಗುಣಗಾನ ಮಾಡಿತು.

'ಹ್ಞೂಂ ಮತ್ತ... ಜಯಲಲಿತಾನ ಪಾತ್ರ ಮಾಡಿದ ಮ್ಯಾಗೆ ಒಂದೀಟು ರಾಜಕೀಯ ಮಾಡದಿದ್ದರೆ ಹೆಂಗ? ಉತ್ತರಪ್ರದೇಶದ ಚುನಾವಣೆ ಬರೂದೈತಿ... ಎಲ್ಲ ವಿರೋಧ ಪಕ್ಷಗಳವರೂ ಚುನಾವಣೆ ಬಂದಾಗಷ್ಟೇ ಮೈಕೊಡವಿ ಏಳ್ತಾರ, ಇಲ್ಲಕಂದ್ರ ಅವರದೇ ಒಳಜಗಳದಾಗೆ ಮುಳುಗಿರ್ತಾರ. ಯೋಗಿಮಾಮಾನೇ ಮತ್ತೆ ಸಿಎಂ ಆಗತಾನಂತ ಆಕಿಗಿ ಗೊತ್ತೈತಿ. ಅದಕ್ಕೇ ಈಗಿಂದಲೇ ಪುಂಗಿ ಊದತಾಳ' ಎಂದೆ.

'ಹಂತಾವೆಲ್ಲ ಚೀಪ್ ಪದ ಬಳಸಬ್ಯಾಡ. ಆಕಿ ಪೊಲಿಟಿಕಲಿ ಕರೆಕ್ಟ್ ಅದಾಳ, ಗಾಳಿ ಬೀಸಿದ ಕಡಿಗಿ ತೂರುವ ಶಾಣೇತನ ತೋರತಾಳ ಅನ್ನಬೇಕು' ಎಂದು ನನ್ನ ಭಾಷೆಯನ್ನು ತಿದ್ದುತ್ತಿದ್ದ ಬೆಕ್ಕಣ್ಣ, ಬಂಗಾಳದ ಉಪಚುನಾವಣೆಯಲ್ಲಿ ದೀದಿ ಗೆದ್ದ ಸುದ್ದಿ ನೋಡಿದ್ದೇ 'ಖೇಲಾ ಹೋಬೆ ಅಂದವ್ರಿಗೆ ಮತದಾರರು ಸರಿಯಾದ ಉತ್ತರ ಕೊಟ್ಟಾರ, ಖರೇ ಅಂದ್ರ ಈಗ ಮಮತಕ್ಕನೇ ತಲೈವಿ' ಎಂದು ಕೇಕೆ ಹಾಕಿತು!

ಸಂಗತ

ಹಿರಿಯರ ಬಗ್ಗೆ 'ಹಿರಿ' ಮನಸ್ಸಿರಲಿ

ವೃದ್ಧರಿಗೆ ಕೈಲಾದಷ್ಟು ನೆರವಾಗುವ ಜೀವನಮೌಲ್ಯ ಬೆಳೆಸಿಕೊಳ್ಳೋಣ

• ಡಾ. ವಿನಯ ಶ್ರೀನಿವಾಸ್

ನಿಮ್ಮ ಬಡಾವಣೆಯಲ್ಲಿರುವ ಮನೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಒಂದೆರಡು ಮನೆಗಳಲ್ಲಾದರೂ ಒಬ್ಬಂಟಿಗರಾಗಿ ಅಥವಾ ಗಂಡ-ಹೆಂಡತಿ ಮಾತ್ರವೇ ಇರುವ ಹಿರಿಯರು ಕಂಡು ಬರಬಹುದು. ಮಕ್ಕಳು ದೂರದ ಬೆಂಗಳೂರಿನಲ್ಲೋ ಮುಂಬೈನಲ್ಲೋ ನೆಲೆಸಿರುತ್ತಾರೆ. ಇಲ್ಲವೇ ಕಡಲಾಚೆಯ ನಗರಗಳಲ್ಲೋ ನೆಲೆ ನಿಂತಿರುತ್ತಾರೆ. ಇಲ್ಲಿ ಈ ಹಿರಿ ಜೀವಗಳು ತಮ್ಮ ಬಾಳ ಸಂಜೆಯ ದಿನಗಳನ್ನು ಕುಂಟುತ್ತಾ ಸಾಗಿಸಬೇಕಾಗಿರುತ್ತದೆ.

ಒಂದೊಂದು ಮನೆಯದ್ದು ಒಂದೊಂದು ಬವಣೆ. ಕೆಲವು ಮನೆಗಳಲ್ಲಿ ಹಣಕಾಸಿಗೆ ತೊಂದರೆ ಇರುವುದಿಲ್ಲ. ಪ್ರತೀ ತಿಂಗಳೂ ಇವರದ್ದೇ ಪಿಂಚಣಿ ಬರುತ್ತಿರುತ್ತದೆ ಅಥವಾ ಮಕ್ಕಳು ತಪ್ಪದೇ ಹಣ ಕಳುಹಿಸುತ್ತಿರುತ್ತಾರೆ. ಇನ್ನೂ ಮುಂದುವರಿದು ಮಕ್ಕಳು ಆನ್‌ಲೈನ್ ಮೂಲಕ ಅಗತ್ಯ ವಸ್ತುಗಳೇ ಇಲ್ಲಿನ ಮನೆಯನ್ನು ತಲುಪುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇನ್ನು ಕೆಲವು ಮನೆಗಳಲ್ಲಿ ವೃದ್ಧಾಪ್ಯದ ಇತರ ಕಷ್ಟ-ಕೋಟಲೆಗಳ ಜೊತೆಯಲ್ಲಿ ಹಣಕಾಸಿನ ತೊಂದರೆ ಕೂಡ ಇರುತ್ತದೆ. ಪಿಂಚಣಿ ಸೌಲಭ್ಯ ಇಲ್ಲದ ಕೆಲಸದಿಂದ ನಿವೃತ್ತರಾಗಿದ್ದರೆ ಅಥವಾ ಉಳಿತಾಯ ಮಾಡಿಟ್ಟ ಹಣವಿಲ್ಲದಿದ್ದರೆ ಇವರ ಜೀವನ ನಿರ್ವಹಣೆ ನಿಜಕ್ಕೂ ದುಸ್ತರ. ಮಕ್ಕಳು ಇವರ ಖರ್ಚನ್ನು ಅರಿತು ಹಣ ಕಳುಹಿಸಿದರೇನೊ ಸರಿ, ಇಲ್ಲದಿದ್ದಲ್ಲಿ ಇವರ ಕಷ್ಟ ಹೇಳತೀರದು.

ಇದು ಹಣಕಾಸಿಗೆ ಸಂಬಂಧಿಸಿದ ವಿಚಾರವಾದರೆ, ಇನ್ನು ಆ ಇಳಿ ವಯಸ್ಸಿನ ಜೀವಗಳ ವಯೋಸಹಜ ತುಮುಲಗಳು ಒಂದೇ ಎರಡೇ? ಮಗ-ಮಗಳು ಅಥವಾ ಮೊಮ್ಮಕ್ಕಳನ್ನು ನೋಡಬೇಕು, ಅವರೊಂದಿಗೆ ಸಮಯ ಕಳೆಯಬೇಕು, ಮಾತನಾಡಬೇಕು ಎಂಬ ಉತ್ಕಟ ಬಯಕೆಯನ್ನು ಅದುಮಿಟ್ಟುಕೊಂಡು ಬದುಕು ಸಾಗಿಸುವ ಎಷ್ಟು ಹಿರಿಯರು ನಮ್ಮೊಂದಿಗಿಲ್ಲ?

ಈ ಕೊರೊನಾ ಕಾಲದಲ್ಲಂತೂ ಹಿರಿಯರು ಅನುಭವಿಸಿದ ಕಷ್ಟಕಾರ್ಪಣ್ಯಗಳು ಒಂದೆರಡಲ್ಲ. ಲಾಕ್‌ಡೌನ್ ದಿನಗಳಲ್ಲಿ ದಿನನಿತ್ಯದ ಅಗತ್ಯಗಳಿಗೂ ಪೇಚಾಡಿದ ಹಿರಿಯರನ್ನು ನಾವು ನೋಡಿದ್ದೇವೆ. ಅನಾರೋಗ್ಯಕ್ಕೆ ತುತ್ತಾದಾಗ ಆಸ್ಪತ್ರೆಯ ಭೇಟಿಯೂ ಸುಲಭದ್ದಾಗಿರಲಿಲ್ಲ. ಇನ್ನು ಕೋವಿಡ್ ಲಸಿಕಾ ಅಭಿಯಾನ ಆರಂಭವಾದಾಗಲೂ ಸರತಿಯಲ್ಲಿ ನಿಂತು ಚುಚ್ಚುಮದ್ದನ್ನು ಹಾಕಿಸಿಕೊಳ್ಳಲು ಹರಸಾಹಸ ಮಾಡಿದ ಹಿರಿಯರು ಒಬ್ಬಿಬ್ಬರಲ್ಲ. ಲಸಿಕೆ ಹಾಕಿಸಿಕೊಳ್ಳಲು ಆನ್‌ಲೈನ್‌ನಲ್ಲಿ ನೋಂದಣಿ ಮಾಡುವ ಪ್ರಕ್ರಿಯೆಯೂ ಹಿರಿಯರಿಗೆ ತ್ರಾಸದಾಯಕವೇ ಆಗಿತ್ತು. ಮೊಬೈಲ್ ಆ್ಯಪ್ ಅಥವಾ ಇತರ ತಂತ್ರಜ್ಞಾನ ಬಳಸಿಯೇ ಮಾಡಬೇಕಾದ ಯಾವುದೇ ವ್ಯವಹಾರದ ಬಗ್ಗೆ ಅಷ್ಟಾಗಿ ಅರಿವಿರದ ನಮ್ಮ ಹಿರಿಯರಿಗೆ ಅದು ತುಸು ಕಷ್ಟವೇ ಸರಿ.

ಪಿಂಚಣಿ ಪಡೆಯುವ ಹಿರಿಯ ನಾಗರಿಕರು ಪ್ರತಿವರ್ಷವೂ ಬ್ಯಾಂಕ್‌ಗೆ ತೆರಳಿ ಜೀವನ ಪ್ರಮಾಣ ಪತ್ರವನ್ನು ಪಡೆಯುವ, ಅಂದರೆ ತಾವು ಜೀವಂತ ಇರುವುದನ್ನು ದೃಢೀಕರಿಸುವ ನಿಯಮ ಇರುತ್ತದೆ. ಅಲ್ಲಿಗೆ ಅಗತ್ಯ ದಾಖಲೆಗಳನ್ನು ಒದಗಿಸುವಂತಹ ಕಾಯಕವೆಲ್ಲವನ್ನೂ ತಾವೊಬ್ಬರೇ ಹೋಗಿ ಮಾಡಿಸಿಕೊಳ್ಳುವುದು ಕಷ್ಟವೇ ಸರಿ.

ವೃದ್ಧಾಪ್ಯದಲ್ಲಿ ಕಾಡುವ ಆರೋಗ್ಯ ಸಮಸ್ಯೆಗಳಂತೂ ಅವರನ್ನು ಇನ್ನೂ ಹಣ್ಣಾಗಿಸುತ್ತವೆ. ಆಸ್ಪತ್ರೆಗೆ ತೆರಳಿ ವೈದ್ಯರನ್ನು ಭೇಟಿ ಮಾಡಿ, ಅವರು ಸೂಚಿಸಿದ ತಪಾಸಣೆ- ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದು ಕೂಡ ಹಿರಿಯರಿಗೆ ಬಹಳಷ್ಟು ಪರಿಶ್ರಮವನ್ನು ಕೊಡುತ್ತವೆ. ಎಷ್ಟೋ ಬಾರಿ ಅಗತ್ಯಕ್ಕಿಂತ ಹೆಚ್ಚು ಮಾತ್ರೆಗಳನ್ನು ಸೇವಿಸಿ ಅಥವಾ ಯಾವುದೋ ಸಮಸ್ಯೆಗೆ ಇನ್ನಾವುದೋ ಮಾತ್ರೆಗಳನ್ನು ತಿಂದು ಅಪಾಯಕ್ಕೊಳಗಾದ ಹಿರಿಯರನ್ನು ನಾವು ನೋಡಿದ್ದೇವೆ.

ಎಷ್ಟೋ ಬಾರಿ 'ಹೇಗಿದ್ದೀರಿ' ಎಂದು ಯಾರಾದರೂ ಪ್ರಶ್ನಿಸಿದರೆ, 'ಭಗವಂತ ಕರೆದುಕೊಳ್ಳುವ ತನಕ ಇರಬೇಕಲ್ಲ' ಎಂಬ ನೋವು ತುಂಬಿದ ಉತ್ತರ ಹಿರಿ ಜೀವಗಳಿಂದ ಬರುತ್ತದೆ.

ಅಂತರರಾಷ್ಟ್ರೀಯ ಹಿರಿಯರ ದಿನಾಚರಣೆ (ಅ. 1) ಈಗಷ್ಟೇ ಮುಗಿದಿದೆ. ಈ ಸಂದರ್ಭದಲ್ಲಿ ಎಲ್ಲ ಯುವಜನರು ತಮ್ಮ ಒಡನಾಟದಲ್ಲಿರುವ ಅಥವಾ ನೆರೆಹೊರೆಯಲ್ಲಿರುವ ಅಥವಾ ತಮ್ಮ ಪರಿಚಯದ ಹಿರಿಯರಿಗೆ ಒಂದಿಲ್ಲೊಂದು ರೀತಿಯಲ್ಲಿ ನೆರವಾಗುವ ಸಂಕಲ್ಪವನ್ನು ಏಕೆ ಮಾಡಬಾರದು?

ನಿಮ್ಮ ಬಡಾವಣೆಯಲ್ಲಿ ಒಂಟಿಯಾಗಿ ಇರುವ ಹಿರಿಯರನ್ನು ದಿನದಲ್ಲಿ ಒಮ್ಮೆಯಾದರೂ ಮಾತನಾಡಿಸಿ. ಮನೆಗೇ ಹೋಗಲು ಸಾಧ್ಯವಾಗದಿದ್ದಲ್ಲಿ ಕಡೇಪಕ್ಷ ಕರೆ ಮಾಡಿ ಮಾತನಾಡಿಸಿ. ಇದರಿಂದ ಅವರ ಮನಸ್ಸು ಒಂದಿಷ್ಟು ಹಗುರಾದೀತು. ಅಂಗಡಿಗಳಿಂದ ಅಗತ್ಯ ವಸ್ತುಗಳನ್ನು ಕೊಂಡು ತರಲು ಅವರಿಗೆ ನೆರವಾಗಿ. ನಿಮ್ಮ ಮಕ್ಕಳಿಗೆ ಆ ಹಿರಿಯರ ಸಣ್ಣ ಪುಟ್ಟ ಕೆಲಸಗಳಿಗೆ ಸಹಾಯ ಮಾಡಲು ತಿಳಿ ಹೇಳಿ. ಅದರಿಂದ ಅವರಲ್ಲಿಯೂ ಮೌಲ್ಯಗಳು ಬೆಳೆಯಲು ಸಾಧ್ಯವಾಗುತ್ತದೆ. ಕಣ್ಣಿನಪೊರೆ ಶಸ್ತ್ರಚಿಕಿತ್ಸೆಯಾದ ನಂತರ ಸುಮಾರು ಒಂದು ತಿಂಗಳವರೆಗೂ ಕಣ್ಣಿಗೆ ಔಷಧಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಅಂತಹದ್ದಕ್ಕೂ ನೀವು ನೆರವಾಗಬಹುದು.

ಬ್ಯಾಂಕ್ ಅಥವಾ ಯಾವುದೇ ಕಚೇರಿಗಳಲ್ಲಿ ವೃದ್ಧರು ಸರತಿಯಲ್ಲಿ ನಿಂತಿದ್ದರೆ ಅವರಿಗೆ ಮೊದಲು ಅನುವು ಮಾಡಿಕೊಡಿ. ಅವರ ವ್ಯವಹಾರ ಶೀಘ್ರವಾಗಲು ಸಹಕರಿಸಿ. ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗಾಗಿ ವಿಶೇಷ ಕೌಂಟರ್‌ಗಳನ್ನು ಮಾಡಿ, ಅವರಿಗೆ ವೈದ್ಯರ ಭೇಟಿ ಹಾಗೂ ತಪಾಸಣೆಗಳನ್ನು ಸುಲಭವಾಗಿ ಮಾಡಿಸಿಕೊಳ್ಳಲು ಒಂದಿಬ್ಬರು ಪ್ರತಿನಿಧಿಗಳನ್ನು ನೇಮಿಸಿ. ಅಲ್ಲಿ ಕೆಲಸ ಮಾಡುವವರಿಗೆ ತಾಳ್ಮೆಯಿಂದ ವರ್ತಿಸಲು ಸೂಚಿಸಿ.

ಬನ್ನಿ, ತುಸು ವಿಶಾಲ ದೃಷ್ಟಿಯುಳ್ಳವರಾಗಿ, ನಮ್ಮೊಡನಿರುವ ಹಿರಿಯರಿಗೆ ನಮ್ಮಿಂದಾಗುವ ಸಹಾಯ ಮಾಡೋಣ.

ವಾಚಕರ ವಾಣಿ

ಚಿಕ್ಕೋಡಿ ಜಿಲ್ಲೆಯಾಗುವುದು ಎಂದು?

ವಿಜಯನಗರ ಜಿಲ್ಲೆ ಉದ್ಘಾಟನೆಗೊಂಡಿದೆ. ಅದೇ ರೀತಿ ಬೆಳಗಾವಿ ಜಿಲ್ಲೆಯೂ ವಿಭಜನೆಗೊಂಡು ಚಿಕ್ಕೋಡಿ ಜಿಲ್ಲೆ ಆಗಬೇಕಿತ್ತು. 60 ಲಕ್ಷ ಜನಸಂಖ್ಯೆಯನ್ನು ಒಳಗೊಂಡ ಬೆಳಗಾವಿ ಜಿಲ್ಲೆಯ ಆಡಳಿತ ನಿರ್ವಹಣೆ ಕಷ್ಟವಾಗುತ್ತಿದೆ. ಅನೇಕ ಉದ್ದಿಮೆಗಳು, ವಾಣಿಜ್ಯ ಚಟುವಟಿಕೆಗಳು ಬೆಳೆದಿವೆ. ಪ್ರತಿವರ್ಷವೂ ನೆರೆಹಾವಳಿ ಉಪಟಳ ಇದೆ. ಗಡಿ ಸಮಸ್ಯೆ ಇದೆ ಸರಿ, ಆದರೆ ಅದು ಬೇಗ ಇತ್ಯರ್ಥ ಆಗುವಂಥದ್ದಲ್ಲ. ಹೊಸ ಜಿಲ್ಲೆಗಾಗಿ ಇಲ್ಲಿನ ಜನ ಎಲ್ಲಿಯವರೆಗೆ ಕಾಯಬೇಕು?

ಜಿಲ್ಲಾ ಕೇಂದ್ರದಿಂದ ಕೆಲವು ಗ್ರಾಮಗಳು ಇನ್ನೂರು ಕಿ.ಮೀ.ನಷ್ಟು ದೂರ ಇವೆ. ಎಷ್ಟೊಂದು ಚಿಕ್ಕ ಜಿಲ್ಲೆಗಳು ರಚನೆ ಆಗಿರುವಾಗ, ಚಿಕ್ಕೋಡಿ ಇನ್ನೂ ಜಿಲ್ಲೆಯಾಗದಿರುವುದು ಸಮಂಜಸವಲ್ಲ. ಜಿಲ್ಲೆ ಆಗುವ ಎಲ್ಲ ಅರ್ಹತೆಯೂ ಚಿಕ್ಕೋಡಿಗೆ ಇದೆ. ಸರ್ಕಾರ ಶೀಘ್ರದಲ್ಲಿ ಈ ಕುರಿತು ಕ್ರಮ ಕೈಗೊಳ್ಳಬೇಕು.

ವೆಂಕಟೇಶ ಮಾಚಕನೂರ, ಧಾರವಾಡ

ಕಾಡಲ್ಲಷ್ಟೇ ವನ್ಯಜೀವಿಗಳ ಬೇಟೆಯಾಗದು

ಕರ್ನಾಟಕದಲ್ಲಿ ಅರಣ್ಯದ ಪ್ರಮಾಣ ಶೇ 20ರಷ್ಟಿದ್ದು ಇದನ್ನು ಶೇ 30ಕ್ಕೆ ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದು ಅರಣ್ಯ ಸಚಿವರು ಹೇಳಿರುವುದು (ಪ್ರ.ವಾ., ಅ. 3) ಸ್ವಾಗತಾರ್ಹ. ಈ ದಿಸೆಯಲ್ಲಿ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗಾಗಿ ರಾಜ್ಯದ ಪ್ರತೀ ಗ್ರಾಮ ಪಂಚಾಯಿತಿಯಲ್ಲಿ 'ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಪಡೆ' ರಚನೆಯಾಗಬೇಕು. ಏಕೆಂದರೆ ಕಾಡು ಇರುವಲ್ಲಿ ಮಾತ್ರ ವನ್ಯಜೀವಿಗಳ ಬೇಟೆಯಾಗುತ್ತದೆ ಎಂಬುದು ತಪ್ಪುಗ್ರಹಿಕೆ. ಮಾನವನ ಹಸ್ತಕ್ಷೇಪದಿಂದ ತೀವ್ರವಾಗಿ ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳಲು ಅನೇಕ ಜೀವಿಗಳಿಗೆ ವಿವಿಧ ಪ್ರದೇಶಗಳಲ್ಲಿ ಬದುಕುವುದು ಅನಿವಾರ್ಯವಾಗಿದೆ. ಉದಾಹರಣೆಗೆ, ಪಶ್ಚಿಮಘಟ್ಟಗಳಲ್ಲಿ ಬದುಕುವ ಪುನುಗು ಬೆಕ್ಕು ಬಯಲುಸೀಮೆಯಾದ ವಿಜಯನಗರದಲ್ಲಿ ಬದುಕು ಕಟ್ಟಿಕೊಂಡಿದೆ. ಅಂತೆಯೇ ಮಲೆನಾಡಿನ ಹಸಿರು ಪಾರಿವಾಳಗಳು ಬಯಲುಸೀಮೆಗೆ ತಾತ್ಕಾಲಿಕ ವಲಸೆ ಬರುತ್ತಿವೆ.

ವನ್ಯಜೀವಿಗಳ ಬೇಟೆ ತಡೆಯಲು ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ, ತಂತ್ರಜ್ಞಾನದ ಕೊರತೆ ಇದೆ. ಇನ್ನು ಸ್ಥಳೀಯರು ವನ್ಯಜೀವಿಗಳ ಬೇಟೆಯನ್ನು ತಡೆಯಲು ಪ್ರಯತ್ನಿಸಿದರೆ ಅವರ ಮೇಲೆಯೇ ಹಲ್ಲೆ ಅಥವಾ ಒತ್ತಡ ಎದುರಾಗುತ್ತದೆ. ಆದ್ದರಿಂದ ಹೊಸ ಕಾರ್ಯಪಡೆಯು ಪಿಡಿಒ, ಶಾಲಾ ಮಕ್ಕಳು, ಶಿಕ್ಷಕರು, ಸ್ಥಳೀಯವಾಸಿಗಳು, ಪರಿಸರಾಸಕ್ತರನ್ನು ಹೊಂದಿರಬೇಕು. ಇವರಿಗೆ ಅರಣ್ಯಾಧಿಕಾರಿಗಳ ನೇರ ಸಂಪರ್ಕ ಸಾಧ್ಯವಾದರೆ ಸಾಧ್ಯವಾದಷ್ಟು ಮಟ್ಟಿಗೆ ವನ್ಯಜೀವಿಗಳ ಬೇಟೆಯನ್ನು ತಡೆಯಬಹುದು.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹೊಸ ಪದ ಟಂಕಿಸುವ ಕಲೆಗಾರರು!

ರಾಜಕೀಯ ನಾಯಕರು ತಮ್ಮ ಬೇಳೆ ಬೇಯಿಸಿಕೊಳ್ಳಲು ಇತ್ತೀಚೆಗೆ ಹೊಸ ಹೊಸ ಪದಗಳನ್ನು ಪರಿಚಯಿಸುತ್ತಿರುವುದು ನಮ್ಮೆಲ್ಲರ ದೌರ್ಭಾಗ್ಯವೇ ಸರಿ. ತುಕ್ಡೆ ತುಕ್ಡೆ ಗ್ಯಾಂಗ್, ರಾತ್ರಿ ರಾಜಕೀಯದಂತಹ ಪದಗಳನ್ನು ಬಳಸುವುದು, ತಾಲಿಬಾನ್ ಹೋರಾಟಕ್ಕೆ ಹೋಲಿಸುವುದು ನಡೆಯುತ್ತಿದೆ. ಹೀಗೆ ಮಾತನಾಡುವ ನಮ್ಮ ನಾಯಕರನ್ನು ಪಕ್ಷಭೇದ ಮರೆತು ಖಂಡಿಸಬೇಕಾಗಿದೆ. ಸಾರ್ವಜನಿಕವಾಗಿ ಹೇಗೆ ಮಾತನಾಡಬೇಕು ಜೊತೆಗೆ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬ ಬಗ್ಗೆ ಜನಪ್ರತಿನಿಧಿಗಳಿಗೆ ಕಾರ್ಯಾಗಾರಗಳನ್ನು ನಡೆಸಿ, ಅವರನ್ನು ಪ್ರಜ್ಞಾವಂತ ನಾಯಕರನ್ನಾಗಿ ರೂಪಿಸಬೇಕಾಗಿದೆ. ಇಲ್ಲವಾದಲ್ಲಿ ಇಂತಹವರಿಂದ ಸಮಾಜ ಏನನ್ನೂ ನಿರೀಕ್ಷೆ ಮಾಡಲು ಸಾಧ್ಯವಾಗದು.

ಹರವೆಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ವಿಶ್ವಾಸ ತುಂಬಿದ ಕೋರ್ಟ್ ತೀರ್ಪು

ವಿಶ್ವವಿದ್ಯಾಲಯವೊಂದರ ಘನತೆ ಹೆಚ್ಚಲು ಹಾಗೂ ಸಂಶೋಧನೆ ಮೂಲಕ ಅದು ಉನ್ನತ ಸ್ಥಾನಕ್ಕೆ ಏರಲು ಅಲ್ಲಿರುವ ಬೋಧಕ ಸಿಬ್ಬಂದಿ ಕಾರಣರಾಗುತ್ತಾರೆ. ದುರ್ದೈವದ ಸಂಗತಿ ಎಂದರೆ, ರಾಜ್ಯದ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಯನ್ನು ಆಯ್ಕೆ ಮಾಡುವ ವ್ಯವಸ್ಥೆಯನ್ನೇ ಭ್ರಷ್ಟಗೊಳಿಸಿರುವುದು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 2014ರಲ್ಲಿ ನಡೆದಿದ್ದ ಅಭ್ಯರ್ಥಿಯೊಬ್ಬರ ನೇಮಕಾತಿಯನ್ನು ಆರು ವರ್ಷಗಳ ನಂತರ ಹೈಕೋರ್ಟ್ ಇತ್ತೀಚೆಗೆ ಅಸಿಂಧುಗೊಳಿಸಿರುವುದು ಇದಕ್ಕೊಂದು ನಿದರ್ಶನ. ಸ್ನಾತಕೋತ್ತರ ವಿಭಾಗವೊಂದಕ್ಕೆ ನೇಮಕಗೊಂಡ ಅಭ್ಯರ್ಥಿಯು ಸಾಮಾನ್ಯ ಶೈಕ್ಷಣಿಕ ಅರ್ಹತೆಯನ್ನೂ ಹೊಂದಿಲ್ಲ ಹಾಗೂ ಯುಜಿಸಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಈ ನೇಮಕ ಮಾಡಲಾಗಿದೆ ಎಂದು ಕೋರ್ಟ್ ಹೇಳಿದೆ.

ಈ ನೇಮಕಾತಿಯನ್ನು ರದ್ದುಪಡಿಸಲು ನ್ಯಾಯಾಲಯ ಉಲ್ಲೇಖಿಸಿರುವ ಕಾರಣಗಳನ್ನು ನೋಡಿದರೆ, ಆಯ್ಕೆ ಸಮಿತಿಯ ಕಣ್ತಪ್ಪಿನಿಂದ ಈ ನೇಮಕಾತಿ ಆಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿರುವ ಕುಲಪತಿಯವರ ಮೂಗಿನ ನೇರದಲ್ಲೇ ಇದು ಆಗಿರುತ್ತದೆ. ರಾಜ್ಯದ ಹಲವು ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ ಅಕ್ರಮ ನೇಮಕಾತಿಗಳಾಗಿವೆ ಎಂಬ ಕೂಗಿಗೆ ಈ ಆದೇಶ ಇನ್ನಷ್ಟು ಪುಷ್ಟಿ ನೀಡಿದೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಎರಡು ವಿಶ್ವವಿದ್ಯಾಲಯಗಳ ಮೂವರು ಬೋಧಕ ಸಿಬ್ಬಂದಿಯ ನೇಮಕಾತಿಯನ್ನು ಹೈಕೋರ್ಟ್ ರದ್ದುಗೊಳಿಸಿರುವುದು ನೇಮಕಾತಿಯ ಅಪಾರದರ್ಶಕತೆಗೆ ಹಿಡಿದ ಕೈಗನ್ನಡಿ ಎಂದೇ ಭಾವಿಸಬೇಕಾಗುತ್ತದೆ.

ಈ ಪ್ರಕರಣ ಕೇವಲ ಒಬ್ಬ ವ್ಯಕ್ತಿ ಅಥವಾ ವಿಶ್ವವಿದ್ಯಾಲಯಕ್ಕೆ ಸೀಮಿತವಾಗಿರುವುದಲ್ಲ. ಅನರ್ಹರ ನೇಮಕದಿಂದ ವಿಶ್ವವಿದ್ಯಾಲಯದ ಘನತೆಗೆ ಕುಂದುಂಟಾಗುವುದಲ್ಲದೆ ಪ್ರತಿಭಾವಂತ ಯುವಕರು ವ್ಯವಸ್ಥೆಯ ಮೇಲೆ ವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ. ವಿಶ್ವವಿದ್ಯಾಲಯಗಳು ನೇಮಕಾತಿಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳದಿದ್ದಲ್ಲಿ ಉನ್ನತ ಶಿಕ್ಷಣದ ಅಭಿಲಾಷೆಯನ್ನೇ ಕೊಂದಂತೆ ಆಗುತ್ತದೆ. ಕುಲಪತಿಗಳ ನೇಮಕಾತಿಯಿಂದ ಹಿಡಿದು ಸಿಬ್ಬಂದಿ ನೇಮಕಾತಿ ಆಯ್ಕೆ ಸಮಿತಿಯಲ್ಲಿನ ಸದಸ್ಯರ ಆಯ್ಕೆಯೂ ಪಾರದರ್ಶಕವಾಗಿ ಇರಬೇಕು. ಇಲ್ಲವಾದರೆ ವಿಶ್ವವಿದ್ಯಾಲಯದ ಆಡಳಿತದಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡುವುದು ಅನಿವಾರ್ಯವಾಗುತ್ತದೆ. ಕೋರ್ಟ್‌ನ ಈಗಿನ ಆದೇಶದಿಂದ ಜನರಿಗೆ ನ್ಯಾಯಾಂಗದಲ್ಲಿ ವಿಶ್ವಾಸ ಮತ್ತಷ್ಟು ಗಟ್ಟಿಗೊಂಡಿರುವುದಂತೂ ಸತ್ಯ. ಇದರಿಂದಲಾದರೂ ಪಾಠ ಕಲಿತು, ನೇಮಕ ಮಾಡುವವರು ಮತ್ತು ನೇಮಕಗೊಳ್ಳುವವರು ವಾಮಮಾರ್ಗ ಬಿಟ್ಟು ಪ್ರತಿಭೆಗೆ ಅವಕಾಶ ಸಿಗುವಂತಾಗಲಿ.

ಜಯಂತ ಕೆ.ಎಸ್., ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಮೊಗೆದಷ್ಟೂ ಮುಗಿಯದ ಡ್ರಗ್ಸ್ ಲೋಕ

ವಿಶ್ವದ ಅತ್ಯಂತ ದೊಡ್ಡ ಮಾದಕವಸ್ತು ಮಾರುಕಟ್ಟೆಗಳಲ್ಲಿ ಭಾರತವೂ ಒಂದು. ಇಲ್ಲಿ ಮಾದಕವಸ್ತುಗಳ ಬಳಕೆಯು ದೊಡ್ಡ ಪ್ರಮಾಣದಲ್ಲಿದೆ, ಉತ್ಪಾದನೆಯೂ ದೊಡ್ಡ ಪ್ರಮಾಣದಲ್ಲಿ ಇದೆ. ಭಾರತದಲ್ಲಿ ಪ್ರತಿ ವರ್ಷ ಮಾರಾಟವಾಗುವ ಮಾದಕವಸ್ತುಗಳ ಮೊತ್ತ ₹35,000-₹40,000 ಕೋಟಿಯಷ್ಟಾಗುತ್ತದೆ. ಭಾರತದಲ್ಲಿ ಬಳಕೆಯಾಗುವ ಮಾದಕವಸ್ತುಗಳಲ್ಲಿ ಗಾಂಜಾದ್ದೇ ಸಿಂಹಪಾಲು. ಇಲ್ಲಿ ಬಳಕೆಯಾಗುವ ಗಾಂಜಾವನ್ನು ಸಂಪೂರ್ಣವಾಗಿ ಇಲ್ಲಿಯೇ ಉತ್ಪಾದಿಸಲಾಗುತ್ತದೆ. ಕೆಲವು ಮಾದಕವಸ್ತುಗಳನ್ನು ಮಾತ್ರ ವಿದೇಶಗಳಿಂದ ಕಳ್ಳಸಾಗಣೆ ಮಾಡಲಾಗುತ್ತದೆ. ಭಾರತದಲ್ಲಿ ಮಾದಕವಸ್ತುಗಳ ಬಳಕೆ ಕುರಿತು ಅಂತರರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಮಂಡಳಿಯ 2018ನೇ ಸಾಲಿನ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ಇದೆ.

ಗಾಂಜಾ, ಅಫೀಮು ಮತ್ತು ಗಸಗಸೆಯನ್ನು ಭಾರತದಲ್ಲಿ ಅಕ್ರಮವಾಗಿ ಬೆಳೆಯಲಾಗುತ್ತದೆ. ಭಾರತದಲ್ಲಿ ಬೆಳೆಯುವ ಮಾದಕವಸ್ತುಗಳಲ್ಲಿ ಗಾಂಜಾದ ಪ್ರಮಾಣ ಅತ್ಯಂತ ಹೆಚ್ಚು. ಇಲ್ಲಿನ ಬಯಲುಸೀಮೆ ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಗಾಂಜಾವನ್ನು ಬೆಳೆಯಲಾಗುತ್ತದೆ. ಗಾಂಜಾವನ್ನು ಒಣ ಗಿಡ, ಸೊಪ್ಪು ಮತ್ತು ಪುಡಿಯ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. ಅಂಗಡಿಗಳಲ್ಲಿ, ಬೀದಿ ಬದಿಯಲ್ಲಿ, ನಿಗದಿತ ವಿತರಣಾ ಜಾಲದ ಮೂಲಕ ಗಾಂಜಾವನ್ನು ಮಾರಾಟ ಮಾಡಲಾಗುತ್ತದೆ. ದೇಶದಲ್ಲಿ 2015ರಿಂದ 2018ರ ನಡುವೆ ಒಟ್ಟು 10.7 ಟನ್‌ನಷ್ಟು ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಇನ್ನು ಪತ್ತೆಯಾಗದೇ, ಬಳಕೆಯಾಗಿರುವ ಗಾಂಜಾದ ಪ್ರಮಾಣ ಎಷ್ಟಿರಬಹುದು ಎಂಬುದನ್ನು ಊಹಿಸಲಸಾಧ್ಯ ಎಂದು ಅಂತರರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಮಂಡಳಿಯ ವರದಿಯಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಗಾಂಜಾ, ಅಫೀಮು, ಕೊಕೇನ್ ಮತ್ತು ಹೆರಾಯಿನ್ ಬಳಕೆ ಹೆಚ್ಚು. ಮಾದಕ ಪದಾರ್ಥ ಬಳಕೆದಾರರಲ್ಲಿ 10–75 ವರ್ಷದವರೆಗಿನ ವಯೋಮಾನದವರು ಇದ್ದಾರೆ. ಮಾದಕ ವಸ್ತು ಬಳಕೆಯಲ್ಲಿ ಮಹಿಳೆಯರು ಮತ್ತು ಪುರುಷರು ಎಂಬ ಭೇದವೇನೂ ಇಲ್ಲ. ಮೇಲೆ ಹೇಳಿದ ಮಾದಕವಸ್ತುಗಳು ಮಾತ್ರವಲ್ಲದೆ, ಕೆಲವು ನಿಷೇಧಿತ ಔಷಧಗಳನ್ನೂ ನಶೆ ಏರಿಸಿಕೊಳ್ಳಲು ಬಳಸಲಾಗುತ್ತದೆ. ಮಾತ್ರೆಗಳು ಮತ್ತು ಲಸಿಕೆ ರೂಪದಲ್ಲಿ ಇವುಗಳನ್ನು ಭಾರತಕ್ಕೆ ಕಳ್ಳಸಾಗಣೆ ಮಾಡಲಾಗುತ್ತದೆ. ಇವುಗಳ ಬಳಕೆಯೂ ವ್ಯಾಪಕವಾಗಿ ಇದೆ. ನೋವು ನಿವಾರಕಗಳ ಹೆಸರಿನಲ್ಲಿ ಇವುಗಳ ಬಳಕೆಯನ್ನು ಉತ್ತೇಜಿಸಲಾಗುತ್ತದೆ. ಔಷಧದ ಅಂಗಡಿಗಳಲ್ಲೂ ಇವುಗಳನ್ನು ಮಾರಾಟ ಮಾಡಲಾಗುತ್ತದೆ ಎನ್ನುತ್ತದೆ ವರದಿ.

ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ಹಲವು ರಾಷ್ಟ್ರಗಳಿಂದ ಕೊಕೇನ್ ಮತ್ತು ಹೆರಾಯಿನ್ ಭಾರತಕ್ಕೆ ಕಳ್ಳಸಾಗಣೆಯಾಗುತ್ತದೆ. ಭಾರತಕ್ಕೆ ಅಫ್ಗಾನಿಸ್ತಾನದ ಮೂಲಕ ಬರುತ್ತದೆ. ಇರಾನ್ ಮೂಲಕ ಹಡಗುಗಳಲ್ಲಿ ಭಾರತದ ಮಂಗಳೂರು, ಕೊಚ್ಚಿ, ಮುಂಬೈ, ಕಛ್ ಬಂದರುಗಳಿಗೆ ಇವನ್ನು ಕಳ್ಳಸಾಗಣೆ ಮಾಡಲಾಗುತ್ತದೆ. ಹೀಗಾಗಿ ಈ ಬಂದರುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಮಾದಕವಸ್ತುಗಳನ್ನು ಜಪ್ತಿಮಾಡಲಾಗಿದೆ. ವಿಮಾನದ ಮೂಲಕ ದೆಹಲಿ ವಿಮಾನ ನಿಲ್ದಾಣಕ್ಕೆ ಕಳ್ಳಸಾಗಣೆ ಮಾಡಲಾಗುತ್ತದೆ. ಭಾರತಕ್ಕೆ ಅಫ್ಗಾನಿಸ್ತಾನ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಮಾದಕವಸ್ತು ಕಳ್ಳಸಾಗಣೆ ಮಾಡಲಾಗುತ್ತದೆ. ಕಳೆದ ವಾರವಷ್ಟೇ ಗುಜರಾತ್‌ನ ಮುಂದ್ರಾ ಬಂದರಿನಲ್ಲಿ ಸುಮಾರು ₹21 ಸಾವಿರ ಕೋಟಿ ಮೌಲ್ಯದ ಹೆರಾಯಿನ್ ಅನ್ನು ವಶಕ್ಕೆ ಪಡೆಯಲಾಗಿತ್ತು. ಅಫ್ಗಾನಿಸ್ತಾನದಿಂದ ಇರಾನ್ ಮೂಲಕ ಅದನ್ನು ಭಾರತಕ್ಕೆ ಕಳ್ಳಸಾಗಣೆ ಮಾಡಲಾಗಿತ್ತು.

ಭಾರತದಲ್ಲಿ ಬಳಕೆಯಾಗುವ ಗಾಂಜಾಕ್ಕಿಂತ ಮೂರುಪಟ್ಟು ಹೆಚ್ಚು ಗಾಂಜಾವನ್ನು ವಿದೇಶಗಳಿಗೆ ಕಳ್ಳಸಾಗಣೆ ಮಾಡಲಾಗುತ್ತದೆ. ಉತ್ತರ ಅಮೆರಿಕ, ಯುರೋಪ್, ಆಗ್ನೇಯ ಏಷ್ಯಾದ ಹಲವು ರಾಷ್ಟ್ರಗಳಿಗೆ ಭಾರತದಿಂದ ವಿಪರೀತ ಪ್ರಮಾಣದ ಮಾದಕವಸ್ತು ಕಳ್ಳಸಾಗಣೆಯಾಗುತ್ತದೆ. ಈ ದೇಶಗಳಿಗೆ ನೇಪಾಳ ಮತ್ತು ಮ್ಯಾನ್ಮಾರ್ ಮೂಲಕ ಭಾರತದಿಂದ ಗಾಂಜಾವನ್ನು ಕಳ್ಳಸಾಗಣೆ ಮಾಡಲಾಗುತ್ತದೆ. ಮಧ್ಯಪ್ರಾಚ್ಯ ದೇಶಗಳೂ ಭಾರತದ ಗಾಂಜಾಗೆ ದೊಡ್ಡ ಮಾರುಕಟ್ಟೆಯಾಗಿವೆ ಎಂದು ಅಂತರರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಮಂಡಳಿಯ ವರದಿಯಲ್ಲಿ ವಿವರಿಸಲಾಗಿದೆ.

ಮಾದಕ ಪದಾರ್ಥ: ಏರುತ್ತಿದೆ ಪ್ರಕರಣಗಳ ಸಂಖ್ಯೆ

ದೇಶದಲ್ಲಿ ಮಾದಕ ಪದಾರ್ಥ ಬಳಕೆ ಬಗ್ಗೆ ರಾಷ್ಟ್ರೀಯ ಅಪರಾಧ ಬ್ಯೂರೊ (ಎನ್‌ಸಿಆರ್‌ಬಿ) ದತ್ತಾಂಶಗಳನ್ನು ಒದಗಿಸುತ್ತದೆ. ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಪದಾರ್ಥಗಳ ಕಾಯ್ದೆಯಡಿ (ಎನ್‌ಡಿಪಿಎಸ್) ಮಾದಕವಸ್ತು ಪ್ರಕರಣಗಳನ್ನು ದಾಖಲಿಸಲಾಗುತ್ತದೆ. ಅಂಕಿ ಅಂಶಗಳ ಪ್ರಕಾರ 2020ನ್ನು ಹೊರತುಪಡಿಸಿದರೆ, ಹಿಂದಿನ ಎಲ್ಲ ವರ್ಷಗಳಲ್ಲಿ ಈ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳು ಸತತವಾಗಿ ಏರಿಕೆ ಕಂಡಿವೆ.

2014ರಲ್ಲಿ 59,098 ಇದ್ದ ಪ್ರಕರಣಗಳ ಸಂಖ್ಯೆ 2019ರಲ್ಲಿ 72,779ಕ್ಕೆ ಏರಿಕೆಯಾಯಿತು. ಕೋವಿಡ್ ಕಾರಣದಿಂದ 2020ರಲ್ಲಿ ಇವುಗಳ ಸಂಖ್ಯೆ 59,806ಕ್ಕೆ ಇಳಿಕೆಯಾಗಿದೆ.

2020ರಲ್ಲಿ ದಾಖಲಾದ ಒಟ್ಟು 59,806 ಪ್ರಕರಣಗಳಲ್ಲಿ ಉತ್ತರ ಪ್ರದೇಶದಲ್ಲಿ ಹೆಚ್ಚು (10,852) ಪ್ರಕರಣ ಕಂಡುಬಂದಿವೆ. ನಂತರದ ಸ್ಥಾನದಲ್ಲಿ ಪಂಜಾಬ್ (6,909) ಹಾಗೂ ತಮಿಳುನಾಡು (5,403) ಇವೆ. ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ 4,054 ಪ್ರಕರಣಗಳು ವರದಿಯಾಗಿವೆ ಎಂದು ಎನ್‌ಸಿಆರ್‌ಬಿ ವರದಿ ತಿಳಿಸಿದೆ. 2019ರಲ್ಲಿ 11,536 ಪ್ರಕರಣ ವರದಿಯಾಗಿದ್ದ ಪಂಜಾಬ್‌ನಲ್ಲಿ ಈ ವರ್ಷ ಸುಮಾರು ಅರ್ಧದಷ್ಟು ಪ್ರಕರಣಗಳು ಕುಸಿತ ಕಂಡಿವೆ.



ಎನ್‌ಡಿಪಿಎಸ್ ಪ್ರಕರಣಗಳು 2020



ಎನ್‌ಡಿಪಿಎಸ್ ಪ್ರಕರಣಗಳು–ವರ್ಷವಾರು



ಕಾರ್ಯಾಚರಣೆ ಕರ್ನಾಟಕ ಮುಂದೆ

ಕರ್ನಾಟಕದಲ್ಲಿಯೂ ಡ್ರಗ್ಸ್ ಮಾರುವ ಜಾಲದ ಬೇರು ದಿನಕಳೆದಂತೆ ಬೆಳೆಯುತ್ತಲೇ ಇದೆ. ಪೊಲೀಸರು, ಸಿಸಿಬಿ, ಎನ್‌ಸಿಬಿ ಅಧಿಕಾರಿಗಳು ಮೇಲಿಂದ ಮೇಲೆ ಕಾರ್ಯಾಚರಣೆ ನಡೆಸಿದರೂ ಡ್ರಗ್ಸ್ ಜಾಲದ ಬೇರು ಕಿತ್ತೆಸೆಯಲು ಸಾಧ್ಯವಾಗುತ್ತಿಲ್ಲ. ಗಾಂಜಾ ಸಾಗಣೆ ಹಾಗೂ ಮಾರಾಟದ ಮೂಲಕ ಆರಂಭವಾದ ದಂಧೆ, ಸಿಂಥೆಟಿಕ್ ಡ್ರಗ್ಸ್‌ಗೆ ಬಂದು ನಿಂತಿದೆ. ಮಾತ್ರೆಗಳ ರೂಪದಲ್ಲಿ ಸಿಗುವ ಎಂಡಿಎಂಎ, ಕಾಗದ ರೂಪದಲ್ಲಿ ಸಿಗುವ ಎಲ್‌ಎಸ್‌ಡಿ, ಅಫೀಮು, ಹಶೀಷ್... ಹೀಗೆ ಡ್ರಗ್ಸ್‌ಗಳ ಪಟ್ಟಿ ದೊಡ್ಡದಾಗುತ್ತಲೇ ಹೋಗುತ್ತದೆ.

ವಿದ್ಯಾಭ್ಯಾಸ, ಉದ್ಯೋಗದ ಸೋಗಿನಲ್ಲಿ ರಾಜ್ಯಕ್ಕೆ ಬರುವ ವಿದೇಶಿಗರು, ಡ್ರಗ್ಸ್ ಜಾಲದಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನು, ಹಣ ಗಳಿಕೆಗಾಗಿ ನಮ್ಮವರು ಕೂಡ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದಾರೆ. ಸುಳಿವು ಸಿಗದ ಡಾರ್ಕ್‌ನೆಟ್ ಜಾಲತಾಣದ ಮೂಲಕ ಡ್ರಗ್ಸ್ ಮಾರಾಟ ಜೋರಾಗಿದ್ದು, ರಾಜ್ಯದಲ್ಲೂ ಅದರ ಬೇರುಗಳು ಇವೆ. ಇಂಥ ಜಾಲತಾಣಗಳ ಮೂಲಕ ವಿದೇಶಗಳಿಂದ ಕೊರಿಯರ್ ಮೂಲಕ ಡ್ರಗ್ಸ್ ತರಿಸಿಕೊಂಡು ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿದೆ.

ನಟ-ನಟಿಯರು, ಉದ್ಯಮಿಗಳು, ಗಣ್ಯರು, ಶ್ರೀಮಂತರ ಮಕ್ಕಳು ಡ್ರಗ್ಸ್ ಪಾರ್ಟಿ ನಡೆಸುತ್ತಿದ್ದ ಪ್ರಕರಣ ಭೇದಿಸಿದ್ದ ಬೆಂಗಳೂರಿನ ಸಿಸಿಬಿ, ಹಲವರನ್ನು ಬಂಧಿಸಿ ಜೈಲಿಗಟ್ಟಿತ್ತು. ಇದೀಗ ಅವರೆಲ್ಲರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದೆ. ಮಂಗಳೂರು ಸಿಸಿಬಿಯೂ ಕಡಲತೀರದ ಡ್ರಗ್ಸ್ ಜಾಲವನ್ನು ಬಯಲಿಗೆ ಎಳೆದಿತ್ತು.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಹೆಸರಿನಲ್ಲೂ ಡ್ರಗ್ಸ್ ಮಾರುತ್ತಿದ್ದ ಸಂಗತಿ ಎನ್‌ಸಿಬಿ ಅಧಿಕಾರಿಗಳು ಈಗಾಗಲೇ ಪತ್ತೆ ಹಚ್ಚಿದ್ದಾರೆ. ಸ್ವಿಗ್ಗಿ ಡೆಲಿವರಿ ಬಾಯ್‌ನನ್ನು ಬಂಧಿಸಿದ್ದಾರೆ. ಬಿಡದಿ ಬಳಿಯ ವಿಲ್ಲಾದಲ್ಲೇ ಹೈಬ್ರಿಡ್ ಗಾಂಜಾ ಬೆಳೆಯುತ್ತಿದ್ದ ಇರಾನ್ ಪ್ರಜೆಗಳಿಬ್ಬರನ್ನು ಇತ್ತೀಚೆಗಷ್ಟೇ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಎಂಬಿಎ ಕಲಿಯಲು ಬಂದಿದ್ದ ಪ್ರಜೆಗಳು, ಡ್ರಗ್ಸ್ ಮಾರಾಟಕ್ಕೆ ಇಳಿದು ಜಾಲ ವೃದ್ಧಿಸಿದ್ದರು. ಬೆಂಗಳೂರಿನಲ್ಲಿ ಇದ್ದರೆ, ಪೊಲೀಸರು ಬಂಧಿಸಬಹುದೆಂದು ತಿಳಿದು ತಮ್ಮ ವಾಸ್ತವ್ಯವನ್ನು ಹೊರವಲಯದ ಬಿಡದಿಗೆ ಬದಲಿಸಿದ್ದರು. ವಿಲ್ಲಾ ಮೇಲೆ ದಾಳಿಮಾಡಿದಾಗ, ಗಾಂಜಾ ಗಿಡ ಬೆಳೆಯುತ್ತಿದ್ದ ಪದ್ಧತಿ ನೋಡಿ ಪೊಲೀಸರೇ ಆಶ್ಚರ್ಯಗೊಂಡಿದ್ದರು.

ಇದರ ನಡುವೆಯೂ ರಾಜ್ಯದ ಬೆಂಗಳೂರು ಹಾಗೂ ಇತರೆ ನಗರಗಳಲ್ಲಿ ಡ್ರಗ್ಸ್ ಮಾರಾಟ ನಿರಂತರವಾಗಿದ್ದು, ತನಿಖಾ ಸಂಸ್ಥೆಗಳ ನಿದ್ದೆಗೆಡಿಸಿದೆ. ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವೇ ಮುಂದಿದೆ. ಬೆಂಗಳೂರು ಪೂರ್ವ ವಿಭಾಗದ ಗೋವಿಂದಪುರ ಪೊಲೀಸರು ಡ್ರಗ್ಸ್ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ಮಾಡುತ್ತಿದ್ದಾರೆ. ಕೆಂಪೇಗೌಡ ಸಿನಿಮಾ ನಿರ್ಮಾಪಕ ಶಂಕರಗೌಡ, ಮಹಿಳಾ ಉದ್ಯಮಿ ಸೋನಿಯಾ ಹಾಗೂ ಹಲವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಕೋಟಿಗಟ್ಟಲೇ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಬಾಲಿವುಡ್: ಬಿಡಲಾಗದ ನಂಟು

ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ನಂತರ, ಬಾಲಿವುಡ್ ಹಾಗೂ ಮನರಂಜನಾ ಕ್ಷೇತ್ರದ ಖ್ಯಾತನಾಮರಲ್ಲಿ ಹಲವರಿಗೆ ಡ್ರಗ್ ಮಾಫಿಯಾದ ಜತೆ ನಂಟಿದೆ ಎಂಬುದು ಆಗಾಗ ಬಹಿರಂಗವಾಗುತ್ತಲೇ ಇದೆ. ಇದೀಗ, ನಟ ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಡ್ರಗ್ಸ್ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದಾರೆ.

ಕಳೆದ ವರ್ಷ ಜೂನ್ 14ರಂದು, ಸುಶಾಂತ್‌ಸಿಂಗ್ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡರು. ಈ ಪ್ರಕರಣದ ತನಿಖೆಯನ್ನು ಸಿಬಿಐ, ಎನ್‌ಸಿಬಿ ಹಾಗೂ ಜಾರಿ ನಿರ್ದೇಶನಾಲಯ (ಇಡಿ) ನಡೆಸುತ್ತಿವೆ. ಈ ತನಿಖೆಯೇ ಬಾಲಿವುಡ್ ಮತ್ತು ಡ್ರಗ್ಸ್ ಮಾಫಿಯಾ ನಂಟಿನ ಹಲವು ಆಯಾಮಗಳನ್ನು ತೆರೆದಿಟ್ಟಿದೆ. ಮಾದಕ ವಸ್ತುಗಳ ಸೇವನೆ, ಡ್ರಗ್ಸ್ ಪೂರೈಸುವವರ ಜೊತೆಗಿನ ನಂಟು ಪ್ರಕರಣಗಳಲ್ಲಿ ಸಿನಿಮಾ ಕ್ಷೇತ್ರದ ಹೆಸರಾಂತ ಕಲಾವಿದರು- ನಿರ್ಮಾಪಕ-ನಿರ್ದೇಶಕರು ತನಿಖೆ ಎದುರಿಸುತ್ತಿದ್ದಾರೆ.

ಸುಶಾಂತ್ ಸಾವಿನ ಪ್ರಕರಣದಿಂದ ಬಾಲಿವುಡ್‌ನ ಡ್ರಗ್ ವ್ಯವಹಾರದ ತನಿಖೆ ಆರಂಭಿಸಿದ್ದ ಎನ್‌ಸಿಬಿ, ಸುಶಾಂತ್ ಪ್ರೇಯಸಿ ರಿಯಾ ಚಕ್ರವರ್ತಿ ಹಾಗೂ ಆಕೆಯ ಸಹೋದರ ಶೋವಿಕ್ ಚಕ್ರವರ್ತಿ ಹಾಗೂ ಸುಶಾಂತ್ ಕಚೇರಿಯ ಸಿಬ್ಬಂದಿಯಾದ ದೀಪೇಶ್ ಸಾವಂತ್ ಹಾಗೂ ಸಾಮ್ಯುವೆಲ್ ಮಿರಾಂಡಾ ಅವರನ್ನು ಬಂಧಿಸಿತ್ತು.

ರಿಯಾ ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಹೊರಬಂದಿದ್ದಾರೆ.

ವಿಚಾರಣೆ ಸಂದರ್ಭದಲ್ಲಿ , ದೀಪಿಕಾ ಪಡುಕೋಣೆ, ಸಾರಾ ಅಲಿಖಾನ್ ಹಾಗೂ ಶ್ರದ್ಧಾ ಕಪೂರ್ ಅವರ ಹೆಸರನ್ನು ರಿಯಾ ಹೇಳಿದ್ದರು.

ದೀಪಿಕಾ ಪಡುಕೋಣೆ, ರಕುಲ್ ಪ್ರೀತ್ ಸಿಂಗ್, ಸಾರಾ ಅಲಿ ಖಾನ್, ಶ್ರದ್ಧಾ ಕಪೂರ್, ಸ್ಯಾಮುವೆಲ್ ಮಿರಾಂಡಾ, ಶ್ರುತಿ ಮೋದಿ, ಜಯಾ ಶಾ, ದೀಪೇಶ್ ಸಾವಂತ್, ದಿಯಾ ಮಿರ್ಜಾ, ರಿಯಾ ಸ್ನೇಹಿತೆಯಾದ ಫ್ಯಾಷನ್ ಡಿಸೈನರ್ ಸೀಮನ್, ದೀಪಿಕಾ ಪಡುಕೋಣೆಯ ಮ್ಯಾನೇಜರ್ ಕರಿಷ್ಮಾ ಪ್ರಕಾಶ್, ‘ಕಲೆಕ್ಟಿವ್ ಆರ್ಟಿಸ್ಟ್’ನ ಸಹ ಸಂಸ್ಥಾಪಕ ಧ್ರುವ ಚಿಟಗೋಪೇಕರ್ ಹೀಗೆ ಒಂದೊಂದೇ ಹೆಸರುಗಳು ಮಾದಕ ದ್ರವ್ಯದ ಮಾರಾಟ ಜಾಲದೊಂದಿಗೆ ಕೇಳಿಬಂದಿದ್ದು, ಇವರೆಲ್ಲರೂ ಎನ್‌ಸಿಬಿ ವಿಚಾರಣೆ ಎದುರಿಸಿದ್ದಾರೆ.

ನಿರ್ಮಾಪಕ ಕರಣ್ ಜೋಹರ್, ಎರಡು ವರ್ಷಗಳ ಹಿಂದೆ ಆಯೋಜಿಸಿದ್ದ ಪಾರ್ಟಿಯಲ್ಲಿ ಮಾದಕ ವಸ್ತುಗಳ ಸೇವನೆ ನಡೆದಿತ್ತು ಎಂದು ಆರೋಪಿಸಲಾಗಿದ್ದು, ಅದರಲ್ಲಿ ಅರ್ಜುನ್ ಕಪೂರ್, ಶಾಹಿದ್ ಕಪೂರ್, ರಣಬೀರ್ ಕಪೂರ್, ದೀಪಿಕಾ ಪಡುಕೋಣೆ ಮುಂತಾದವರು ಭಾಗವಹಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆಯೂ ಎನ್‌ಸಿಬಿ ವಿಚಾರಣೆ ನಡೆಸುತ್ತಿದೆ.

ನಾಲ್ಕು ವರ್ಷಗಳ ಹಿಂದಿನ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಖ್ಯಾತ ನಟಿ ರಕುಲ್ ಪ್ರೀತ್ ಸಿಂಗ್, ಚಾರ್ಮಿ ಕೌರ್, ರಾಣಾ ದಗ್ಗುಬಾಟಿ ಸೇರಿದಂತೆ ಹಲವು ನಟರು ಹಾಗೂ ನಿರ್ದೇಶಕರು ಕಳೆದ ತಿಂಗಳು ಜಾರಿ ನಿರ್ದೇಶನಾಲಯದ ವಿಚಾರಣೆ ಎದುರಿಸಿದ್ದಾರೆ.

ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡ ಪ್ರಕರಣಗಳಲ್ಲಿ, ನಟರಾದ ಗೌರವ್ ದೀಕ್ಷಿತ್ ಹಾಗೂ ಅರ್ಮಾನ್ ಕೊಹ್ಲಿ ಅವರನ್ನು ತಿಂಗಳ ಹಿಂದಷ್ಟೇ ಎನ್‌ಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ.

ಸುಶಾಂತ್ ಮೃತಪಟ್ಟ ದಿನದಿಂದ ಕಾಣೆಯಾಗಿದ್ದ ಅವರ ಸ್ನೇಹಿತ, ಹೋಟೆಲ್ ಉದ್ಯಮಿ ಕುನಾಲ್ ಜಾನಿಯನ್ನು ಮೂರು ದಿನಗಳ ಹಿಂದಷ್ಟೇ ಎನ್‌ಸಿಬಿ ಬಂಧಿಸಿದೆ.

ಇದೀಗ ಮತ್ತೊಂದು ರೇವ್ ಪಾರ್ಟಿ ಮೇಲೆ ದಾಳಿ ನಡೆಸಿರುವ ಎನ್‌ಸಿಬಿ, ಆರ್ಯನ್ ಖಾನ್ ಸೇರಿದಂತೆ ಹಲವರನ್ನು ಬಂಧಿಸಿದೆ. ಇದರೊಂದಿಗೆ ಡ್ರಗ್ಸ್ ಮಾಫಿಯಾ ಜತೆ ನಂಟಿರುವ ಮನರಂಜನಾ ಕ್ಷೇತ್ರದ ಖ್ಯಾತನಾಮರ ಪಟ್ಟಿ ಇನ್ನಷ್ಟು ಉದ್ದವಾಗುವ ಸಾಧ್ಯತೆ ಇದೆ.



14 ರಾಜ್ಯಗಳ ಆಯ್ದ ರಸ್ತೆ, ಹೆದ್ದಾರಿಗಳಲ್ಲಿ ಅಳವಡಿಕೆ

ವೇಗ ಕಡಿವಾಣಕ್ಕೆ ವಿಶೇಷ ಸಾಧನ

ನವದೆಹಲಿ: ಅತಿವೇಗದಿಂದಾಗುವ ಅಪಘಾತಗಳಿಗೆ ಕಡಿವಾಣ ಹಾಕಲು ಆಯ್ದ ಕೆಲವು ರಾಜ್ಯಗಳಲ್ಲಿನ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ನಗರಗಳ ಪ್ರಮುಖ ರಸ್ತೆಗಳಲ್ಲಿ ವೇಗ ನಿರ್ವಹಣಾ ಸಾಧನಗಳನ್ನು (ಎಸ್‌ಎಂಡಿ) ಅಳವಡಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಪ್ರಸ್ತಾವ ಸಿದ್ಧಪಡಿಸಿದೆ.

ಅತಿಹೆಚ್ಚು ಅಪಘಾತಗಳು ಸಂಭವಿಸುವ ಮತ್ತು ಅಪಘಾತಗಳಿಂದ ಅತಿಹೆಚ್ಚು ಸಾವು ಸಂಭವಿಸುವ 14 ರಾಜ್ಯಗಳನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಎಸ್‌ಎಂಡಿಗಳು ವಾಹನಗಳ ವೇಗ, ನೋಂದಣಿ ಸಂಖ್ಯೆ, ವಾಹನದಲ್ಲಿರುವವರ ಮುಖವನ್ನು ದಾಖಲಿಸುವ ಸಾಮರ್ಥ್ಯ ಹೊಂದಿರಲಿವೆ. ಇವುಗಳನ್ನು ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ನಗರಗಳ ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ಅಳವಡಿಸಲಾಗುವುದು. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲೂ ಇವುಗಳನ್ನು ಅಳವಡಿಸಲಾಗುತ್ತದೆ.

ಈ ಸಾಧನಗಳು ದಾಖಲಿಸಿಕೊಂಡ ವಿವರಗಳನ್ನು ‘ಸಂಚಾರ ನಿರ್ದೇಶನ ಮತ್ತು ನಿಯಂತ್ರಣ ಕೊಠಡಿ’ಗೆ ರವಾನೆ ಮಾಡುತ್ತವೆ. ಇದರ ಆಧಾರದಲ್ಲಿ ಸಂಬಂಧಿತ ವಾಹನ ಮತ್ತು ಅದರ ಚಾಲಕರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವಾಲಯವು ತನ್ನ ಪ್ರಸ್ತಾವದಲ್ಲಿ ವಿವರಿಸಿದೆ.

ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ₹7,270 ಕೋಟಿ ಅನುದಾನ ನೀಡಲಿದೆ. ರಾಜ್ಯ ಸರ್ಕಾರಗಳೂ ಸ್ವಲ್ಪ ಪ್ರಮಾಣದ ವೆಚ್ಚವನ್ನು ಭರಿಸಬೇಕಾಗುತ್ತದೆ. 2027ರ ವೇಳೆಗೆ ರಸ್ತೆ ಅಪಘಾತಗಳಿಂದ ಸಂಭವಿಸುವ ಸಾವುಗಳ ಪ್ರಮಾಣದಲ್ಲಿ ಶೇ 30ರಷ್ಟು ಇಳಿಕೆ ಮಾಡಲು ಈ ಯೋಜನೆ ಸಿದ್ಧಪಡಿಸಲಾಗಿದೆ. ಈ ಯೋಜನೆ ಅಡಿ ರಸ್ತೆ ಅಪಘಾತ ದತ್ತಾಂಶವನ್ನು ಸಿದ್ಧಪಡಿಸಲಾಗುತ್ತದೆ. ಅದನ್ನು ಎಲ್ಲಾ ರಾಜ್ಯಗಳ ಜತೆ ಹಂಚಿಕೊಳ್ಳಲಾಗುತ್ತದೆ ಎಂದು ಸಚಿವಾಲಯವು ಹೇಳಿದೆ.

ಯೋಜನೆಗೆ ಆಯ್ಕೆಯಾದ ರಾಜ್ಯಗಳು

- ಉತ್ತರ ಪ್ರದೇಶ
- ಮಹಾರಾಷ್ಟ್ರ
- ಮಧ್ಯಪ್ರದೇಶ
- ರಾಜಸ್ಥಾನ
- ಕರ್ನಾಟಕ
- ತಮಿಳುನಾಡು
- ಆಂಧ್ರಪ್ರದೇಶ
- ಗುಜರಾತ್
- ಬಿಹಾರ
- ಪಶ್ಚಿಮ ಬಂಗಾಳ
- ತೆಲಂಗಾಣ
- ಒಡಿಶಾ
- ಹರಿಯಾಣ
- ಅಸ್ಸಾಂ

ಮುಖ್ಯಾಂಶಗಳು

- 2022-23ನೇ ಸಾಲಿನಿಂದ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ
- ಆರು ವರ್ಷಗಳ ಅವಧಿಗೆ ಈ ಯೋಜನೆ ಜಾರಿಯಲ್ಲಿರಲಿದೆ
- ಶಾಲಾ (6-9ನೇ ತರಗತಿ) ಮಕ್ಕಳಿಗೆ ರಸ್ತೆ ಸಂಚಾರ ನಿಯಮಗಳನ್ನು ಬೋಧಿಸಲಾಗುತ್ತದೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ದೇಶದಲ್ಲಿ ದೇವಸ್ಥಾನಗಳಿಗೆ ಮಾತ್ರ ತೆರಿಗೆ ಇದೆ ಎಂಬುದಾಗಿ ಯೂಟ್ಯೂಬರ್ ಎಲ್ವಿಸ್ ಯಾದವ್ ಅವರು ಸೆ.26ರಂದು ಟ್ವೀಟ್ ಮಾಡಿದ್ದರು. ಇವರ ಟ್ವೀಟ್ ಸಾಕಷ್ಟು ಚರ್ಚೆ ಹುಟ್ಟುಹಾಕಿದ್ದು, ಮಸೀದಿ, ಚರ್ಚ್‌ಗಳಿಗೆ ಏಕೆ ತೆರಿಗೆ ಇಲ್ಲ ಎಂದು ಹಲವರು ಪ್ರಶ್ನಿಸಿದ್ದಾರೆ. ಜಾತ್ಯತೀತ ದೇಶ ಎನಿಸಿಕೊಂಡಿರುವ ಭಾರತದಲ್ಲಿ ಎಲ್ಲರೂ ಧಾರ್ಮಿಕ ಸ್ವಾತಂತ್ರ್ಯ ಅನುಭವಿಸುತ್ತಿರುವಾಗ, ದೇವಸ್ಥಾನಗಳಿಗೆ ಮಾತ್ರ ಏಕೆ ಈ ನೀತಿ ಎಂದು ಹಲವರು ಪ್ರಶ್ನಿಸಿದ್ದಾರೆ.

2017ರಲ್ಲೇ ಬಿಜೆಪಿ ನಾಯಕ ಸುಬ್ರಮಣಿಯನ್‌ಸ್ವಾಮಿ ಅವರು ಈ ವಿಚಾರ ಪ್ರಸ್ತಾಪಿಸಿದ್ದರು. ಜಿಎಸ್‌ಟಿಯಿಂದ ಚರ್ಚ್‌ಗಳಿಗೆ ಏಕೆ ವಿನಾಯಿತಿ ಎಂದು ಪ್ರಶ್ನಿಸಿದ್ದರು. ಆದರೆ ಇದು ಸುಳ್ಳು ಮಾಹಿತಿ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿತ್ತು. ದೇವಸ್ಥಾನಗಳಿಗೆ ಮಾತ್ರ ಜಿಎಸ್‌ಟಿ ಎಂಬುದು ತಪ್ಪು ಮಾಹಿತಿ. ಧರ್ಮದ ಆಧಾರದಲ್ಲಿ ತೆರಿಗೆ ತಾರತಮ್ಯ ಇಲ್ಲ ಎಂದು ತಿಳಿಸಿತ್ತು. ಸರ್ಕಾರದ ನಿಯಮದಂತೆ ಟ್ರಸ್ಟ್ ಹೆಸರಿನಲ್ಲಿ ಜಿಎಸ್‌ಟಿ ಪ್ರಮಾಣಪತ್ರ ಪಡೆದಿದ್ದೇವೆ ಎಂದು ಅಹಮದಾಬಾದ್‌ನ ಸುನ್ನಿ ವಕ್ಫ್ ಮಂಡಳಿ ಅಧ್ಯಕ್ಷ ರಿಜ್ವಾನ್ ಖಾದ್ರಿ ಹೇಳಿದ್ದರು.

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿಗ್ರಹಾರಾಧನೆ

ಲಾವಣ್ಯವಾತ್ಮಗುಣವದರಿಂದೆ ಲೋಕಜನ |
ದೇವನನು ಕಮನೀಯ ವಿಗ್ರಹಂಗಳಲಿ ||
ಭಾವಿಸುತ ತಮ್ಮಿಷ್ಟಭೋಗಗಳನರ್ಪಿಸುವ |
ಸೇವೆಯಿಂ ನಲಿಯುವರು – ಮಂಕುತಿಮ್ಮ ||468||

ಪದ-ಅರ್ಥ: ಲಾವಣ್ಯವಾತ್ಮಗುಣವದರಿಂದೆ = ಲಾವಣ್ಯ + ಆತ್ಮಗುಣ + ಅದರಿಂದೆ, ಕಮನೀಯ = ಸುಂದರವಾದ, ತಮ್ಮಿಷ್ಟಭೋಗಗಳನರ್ಪಿಸುವ = ತಮ್ಮ + ಇಷ್ಟ + ಭೋಗಗಳನು + ಅರ್ಪಿಸುವ

ವಾಚ್ಯಾರ್ಥ: ಲಾವಣ್ಯವೆಂಬುದು ಆತ್ಮಗುಣ. ಆದ್ದರಿಂದ ಲೋಕದ ಜನರು ದೇವರನ್ನು ಅತ್ಯಂತ ಸುಂದರವಾದ ವಿಗ್ರಹಗಳಲ್ಲಿ ಕಾಣುತ್ತ, ತಮಗೆ ಇಷ್ಟವಾದ ಭೋಗಭಾಗ್ಯಗಳನ್ನು ಅವನಿಗೆ ಅರ್ಪಿಸುತ್ತ, ಸೇವೆ ಮಾಡಿ, ಸಂತೋಷಪಡುತ್ತಾರೆ.

ವಿವರಣೆ: ಭಗವಂತನ ಆಕಾರ ಯಾವುದು? ಶೃತಿ, ಸ್ಮೃತಿ, ಪುರಾಣಗಳು, ಭಗವಂತ ನಿರಾಕಾರ ಎನ್ನುತ್ತವೆ. ಅವನನ್ನು ಯಾವ ರೂಪದದಲ್ಲಿಯೂ ಹಿಡಿದಿಡಲು ಸಾಧ್ಯವಿಲ್ಲ, ಆದರೆ ನಾವು ದೇವರನ್ನು ವಿಗ್ರಹಗಳಲ್ಲಿ ಮತ್ತು ಚಿತ್ರಗಳಲ್ಲೇ ಕಂಡು ಪೂಜಿಸುವುದು ಏಕೆ? ಅದಕ್ಕೊಂದು ಮನಃಶಾಸ್ತ್ರದ ಕಾರಣವಿದೆ. ನಾವು ಕಣ್ಣಿಂದ ಕಂಡದ್ದನ್ನು ಮನಸ್ಸು ಯೋಚಿಸುತ್ತದೆ. ನಾವು ಕಾಣದೇ ಇರುವ ವಸ್ತುವಿನ ಬಗ್ಗೆ ಚಿಂತನೆ ಮಾಡುವುದು ಅಸಾಧ್ಯ. ಯಾಕೆಂದರೆ ಅದು ನಮ್ಮ ಬುದ್ಧಿಗೆ ಸಿಕ್ಕಲಾರದು, ಬುದ್ಧಿಯನ್ನು ಪ್ರಚೋದಿಸಲಾರದು. ನೀವು ನಿಮ್ಮ ತಾತನನ್ನು ಕಂಡಿದ್ದರೆ, ತಾತ ಎಂದೊಡನೆ ಅವರ ಚಿತ್ರ ಕಣ್ಣ ಮುಂದೆ ಕಟ್ಟುತ್ತದೆ. ಆದರೆ ನಿಮ್ಮ ತಾತನ ತಾತನನ್ನು ತಾವು ಕಂಡಿಲ್ಲ, ಬಹುಶಃ ಅವರ ಚಿತ್ರವೂ ನಿಮ್ಮ ಬಳಿ ಇರಲಿಕ್ಕಿಲ್ಲ. ಆಗ ಅವರನ್ನು ಕಲ್ಪಿಸಿಕೊಳ್ಳಲು ಹೋದಾಗ ಅವರ ಚಿತ್ರ ಮನದಲ್ಲಿ ಮೂಡೀತೇ? ಹಾಗೆಯೇ ನಿರಾಕಾರವಾದ ಭಗವಂತನನ್ನು ಕಲ್ಪಿಸಿಕೊಂಡು, ಅದರಲ್ಲೇ ಮನಸ್ಸನ್ನು ತೊಡಗಿಸಿ ಧ್ಯಾನ ಮಾಡುವುದು ಸಾಮಾನ್ಯರಿಗೆ ಬಲು ಕಷ್ಟ. ಅದಕ್ಕೇ ಮನುಷ್ಯ ತನ್ನ ಹಾಗೆಯೇ ಇರುವ, ಆದರೆ ಅನೇಕ ವಿಶೇಷತೆಗಳನ್ನು ಹೊಂದಿದ, ದೇವರ ವಿಗ್ರಹಗಳನ್ನು, ಚಿತ್ರಗಳನ್ನು ಸೃಷ್ಟಿಸಿಕೊಂಡ. ವಿಷ್ಣು ಎಂದರೆ ಹೀಗೆ, ಶಿವ ಎಂದರೆ ಇದೇ ಆಕಾರ, ಅಂತೆಯೇ ಅವರ ಹೆಂಡಂದಿರನ್ನೂ ಸೃಷ್ಟಿಸಿ ಅವರಿಗೊಂದು ರೂಪ ಕೊಟ್ಟ. ಈ ಆಗ ರೂಪ ಸಂಕೇತವಾಯಿತು. ಆ ಸಂಕೇತವನ್ನು ಮನದಲ್ಲಿ ಸ್ಥಿರವಾಗಿ ಉಳಿಸಿಕೊಂಡು ಧ್ಯಾನಕ್ಕೆ ಅಣಿಯಾದ.

ಹೀಗಾಗಿ ವಿಗ್ರಹ, ಸಾಧಕನ ಊರ್ಧ್ವಮುಖ ಸಾಧನೆಗೆ ಒಂದು ಏಣಿ ಇದ್ದ ಹಾಗೆ, ಮಹಾನ್ ಸಾಧಕರು ಈ ಏಣಿಯನ್ನು ಮೇಲೇರಿ ದಾಟಿ ನಿರಾಕಾರ ಭಗವಂತನನ್ನು ಧ್ಯಾನಿಸಬಲ್ಲರು. ಆದರೆ ಅದು ಎಲ್ಲರಿಗೂ ಸಾಧ್ಯವಿಲ್ಲದ್ದು. ನಮ್ಮಲ್ಲಿ ತುಂಬ ಆಕರ್ಷಕ ಮನುಷ್ಯರಿದ್ದಾರೆ. ಅಂದ ಮೇಲೆ ಭಗವಂತ ಇನ್ನು ಆಕರ್ಷಕವಾಗಿರಬೇಕಲ್ಲ? ನಮ್ಮ ನಡುವೆ ಎಷ್ಟೊಂದು ಚೆಂದದ ಹೆಣ್ಣುಮಕ್ಕಳಿಲ್ಲವೇ? ಆದ್ದರಿಂದ ಸ್ತ್ರೀ ದೇವಿಯರು ಅವರಿಗಿಂತ ಚೆಂದವಿರಬೇಕು ಎಂದೆಲ್ಲ ಯೋಚಿಸಿ ಅತ್ಯಂತ ಸುಂದರ, ಆಕರ್ಷಕವಾದ ವಿಗ್ರಹಗಳನ್ನು ಮಾಡಿ, ಅವರನ್ನೇ ಆರಾಧಿಸಿದ ಮನುಷ್ಯ. ಲಾವಣ್ಯವೆನ್ನುವುದು ಆತ್ಮದ ಗುಣ. ಅದು ಸುಂದರತೆಯನ್ನೇ ಬಯಸುತ್ತದೆ. ಅದಕ್ಕೇ ಮನುಷ್ಯರು ಅತ್ಯಂತ ಆಕರ್ಷಕವಾದ ದೇವ ದೇವಿಯರ ವಿಗ್ರಹಗಳನ್ನು ಮಾಡಿ, ತನ್ನಲ್ಲಿದ್ದ, ಸರ್ವ ಶ್ರೇಷ್ಠ ವಸ್ತುಗಳನ್ನು, ದೈವತ್ವವನ್ನು ಆವಾಹಿಸಿದ ಆ ವಿಗ್ರಹಗಳಿಗೆ ಅರ್ಪಿಸಿ, ಸೇವೆಯನ್ನು ಸಲ್ಲಿಸಿ, ಸಂತೋಷಪಡುತ್ತಾರೆ. ಅದು ಮೂಲತ: ಭಗವಂತ ಎಂಬ ತತ್ವದ ರೂಪವಾದ ಲಾವಣ್ಯದ ಪೂಜೆ. ❖

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಅಕ್ಟೋಬರ್ 4, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಹಸ್ತೆ ತ್ರಯೋದಶೀ ಗಂ. 32-4 (ರಾ. 7-04) ಸೋಮವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 49-28 (ರಾ. 2-02) ಶುಭ ನಾಮ ಯೋಗ ಗಂ. 19-55 ಗರಜ ಕರಣ ಗಂ. 2-35 ವಿಷ ಗಂ. 9-6 ಅಮೃತ ಗಂ 33-1 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-12 ಸೂರ್ಯಾಸ್ತ: 6-04 ಅದೃಷ್ಟ ಸಂಖ್ಯೆ 3

ಮೇಷ: ಆರೋಗ್ಯದಲ್ಲಿ ಕೊಂಚ ಏರುಪೇರು. ಆರ್ಥಿಕ ಸಬಲತೆಯನ್ನು ಕಾಣಬಹುದು. ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು ದಿನದ ಮಟ್ಟಿಗೆ ಬೇಡ. ಉತ್ತಮ ಗೆಳೆತನ /ಸಂಗಾತಿ ದೊರಕುವ ಸಾಧ್ಯತೆ.

ವೃಷಭ: ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಒತ್ತಡ ಹೆಚ್ಚಾಗಿ ಮಾನಸಿಕ ಚಂಚಲತೆ ಮತ್ತು ಆಯಾಸ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದಾಗಿ ಪ್ರತಿಕೂಲ ಪರಿಣಾಮ.

ಮಿಥುನ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸುವುದು ಸೂಕ್ತ. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಬೇಕಾದೀತು. ಉದ್ಯೋಗಾಕಾಂಕ್ಷಿಗಳಿಗೆ ಎಥಾಸ್ಥಿತಿ. ಅವಕಾಶ ಸದುಪಯೋಗ ಪಡಿಸಿಕೊಳ್ಳಿ.

ಕರ್ಕಾಟಕ: ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬದ ಸದಸ್ಯರಲ್ಲಿ ಅಸಹನೆ ಉಂಟಾಗಬಹುದು. ನಿರ್ಧಾರಗಳನ್ನು ಪದೇ ಪದೇ ಬದಲಿಸದಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಬಿಡುವಿಲ್ಲದ ಶ್ರಮ.

ಸಿಂಹ: ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಅಗತ್ಯ. ಧೈರ್ಯದಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು. ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ತೃಪ್ತಿಕರ ಜೀವನ.

ಕನ್ಯಾ: ಕುಟುಂಬ ಸದಸ್ಯರಲ್ಲಿ ಅಸಹನೆ. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕಡಿಮೆಯಾದರೂ ಗುರಿ ಸಾಧನೆಗೆ ತೊಡಕಾಗದು. ಸಣ್ಣಪುಟ್ಟ ವ್ಯಾಪಾರಿ ವರ್ಗದವರಲ್ಲಿ ನಿರೀಕ್ಷಿತ ಲಾಭ ಸಂಪಾದನೆ.

ತುಲಾ: ಆದಾಯ ಮತ್ತು ವೆಚ್ಚಗಳೆರಡೂ ಹೆಚ್ಚಾಗುವ ಸಾಧ್ಯತೆ. ನ್ಯಾಯಾಲಯದ ಕೆಲಸ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ಹೊಸ ಆದಾಯದ ಮೂಲಗಳು ಗೋಚರವಾಗಲಿದೆ.

ವೃಶ್ಚಿಕ: ವಿವಿಧ ಮೂಲಗಳಿಂದ ಧನಾಗಮನದಿಂದಾಗಿ ಕಾರ್ಯಾನುಕೂಲವಾಗಲಿದೆ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ದೊರಕುವ ಸಾಧ್ಯತೆ. ಅಸಹನೆಯ ಮನೋವೃತ್ತಿ ಅನಾವಶ್ಯಕ ತಪ್ಪು ಅಭಿಪ್ರಾಯಕ್ಕೆ ಹೇತುವಾದೀತು.

ಧನು: ಕೆಲಸ ಕಾರ್ಯಗಳಿಗೆ ವಿಘ್ನಗಳುಂಟಾದರೂ ಎದೆಗುಂದದೇ ಮುಂದುವರಿದು ಯಶಸ್ಸನ್ನು ಸಾಧಿಸಲಿದ್ದೀರಿ. ಸಹೋದ್ಯೋಗಿಗಳ ಸಹಕಾರದಿಂದಾಗಿ ನೆಮ್ಮದಿ ದೊರಕಲಿದೆ.

ಮಕರ: ನಿಮ್ಮ ಇಚ್ಛೆಗಳು ಸುಮವಾಗಿ ಈಡೇರುವವು. ಯೋಗ್ಯ ವಯಸ್ಕರಿಗೆ ಉತ್ತಮ ಅವಕಾಶಗಳಿಂದಾಗಿ ವೈವಾಹಿಕ ಭಾಗ್ಯ ದೊರಕಲಿದೆ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ.

ಕುಂಭ: ಉತ್ತಮ ಫಲನೀಡುವ ದಿನವಾಗಿದ್ದು ಸಣ್ಣ ಪುಟ್ಟ ಪ್ರಯಾಣ ಯೋಗ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಮರ್ಥ್ಯವನ್ನು ಅರಿತು ಕೆಲಸ ನಿರ್ವಹಿಸುವುದು ಉತ್ತಮ. ಮಿತ್ರವೃಂದದಿಂದ ಉಪಯುಕ್ತ ಸಲಹೆ.

ಮೀನ: ನೌಕರ ವರ್ಗದವರಿಗೆ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಬದಲಾವಣೆ ಕಾಣುವ ಸಾಧ್ಯತೆ. ಮಹಿಳೆಯರು ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 4-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಬದುಕಿನಲ್ಲಿ ಹೊಸ ತಿರುವು ತೆಗೆದುಕೊಳ್ಳಲಿದೆ. ಹೊಸ ಉದ್ಯೋಗವೊಂದರ ಹುಡುಕಾಟದಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಉದ್ಯಮಗಳು ಕೈಗೂಡುವುದರ ಜೊತೆಗೆ ಆರ್ಥಿಕವಾಗಿ ಬಲಗೊಳ್ಳಲಿದ್ದೀರಿ. ತಾಳ್ಮೆ ಕಳೆದುಕೊಳ್ಳದೆ ಮುಂದುವರಿಯುವುದರಿಂದ ಕಾರ್ಯ ಸಾಧನೆ ಮಾಡಲಿದ್ದೀರಿ.

ಪದಬಂಧ 4738

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಪಸ್ಸಿನ ಶಕ್ತಿಯಿದು (4)
5.ನನಗದು ಬೇಕು ಎಂದಾಗ ಕೈಯಲ್ಲಿರುವ ಹಣ! (3)
6. ಆನೆ ನಡೆಸುವಾತನಿದ್ದಾನಲ್ಲಾ? (4)
8.ಎಲ್ಲೆಯಿಂದ ಹೊರಹಾಕುವಿಕೆ (4)
12.ನಡುವೆ ಕೈಯಿರಿಸಿದಾಗಿನ ಘಟನೆ (4)
14.ಒಪ್ಪವಾಗಿ ಮಾಡಿದ ತರ್ಜುಮೆ (4)
15.ವರ್ತುಲಾಕಾರವಾಗಿರುವುದು (3)
16.ಮಾನವಿರುವ ವಸ್ತುಸ್ಥಿತಿಯಿದು (4)

ಮೇಲಿಂದ ಕೆಳಕ್ಕೆ
1.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
2.ದುಮುಗುಟ್ಟುತ್ತಾ ಬಂದಿರುವ ವರ! (4)
3.ಶಿರದಿಂದ ಮೂಡಿದ ಪೀಳಿಗೆ (4)
4.ವಂಗ ದೇಶದಿಂದ ತಂದಿರುವ ಸಾಂಬಾರ ದ್ರವ್ಯ (3)
7.ಅಡ್ಡಿಕೆಯನ್ನು ಹೀಗೂ ಹೇಳುವರು (2)
9.ಬಾಣಸಿಗ ಇಲ್ಲಿದ್ದಾನೆ (3)
10.ಮಂದಿಗೆಲ್ಲಾ ಈತನೇ ನಾಯಕ (5)
11.ಮಕರಂದ ನೀಡುವ ಕೀಟ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಕೆಟ್ಟ ಸ್ವಭಾವವು ಉಲ್ಟಾ ಕಾಣುತ್ತಿದೆಯಲ್ಲಾ? (4)
14.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)



4737ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ರಾಗ 5.ನಿಷ್ಪಕ್ಷಪಾತ 6.ಸಮೀಪ 7.ಗುಳಂಬ 8.ರಾಷ್ಟ್ರೀಕರಣ 9.ಸಮಾಧಿ 10.ಕಟಾಕ್ಷ 13.ದಂತಮಂಜನ 14.ಜಪ್ತಿ

ಮೇಲಿಂದ ಕೆಳಕ್ಕೆ: 1.ಮಂದಹಾಸ 2.ಸಾಕ್ಷರ 4.ಗಲ್ಲುಗಂಬ 5.ನಿರಪರಾಧಿ 7.ಗುಣಕಥನ 9.ಸತ್ಕುಲಜ 11.ಕ್ಷಪಣಕ 12.ಸಾಮಂತ

ಸುಡೊಕು 5124

				5		7		
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5				2			7	3
	3		9		5		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5123 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ನಿರ್ಮಲ ಶ್ರೀಕಂಠನ್
(ದಿವಂಗತ ಡಾ. ಎಸ್. ಶ್ರೀಕಂಠನ್‌ರವರ ಪತ್ನಿ)
ನಿಧನ: 4ನೇ ಅಕ್ಟೋಬರ್ 1996
ನಮ್ಮನಗಲಿದ ನಮ್ಮ ಪ್ರೀತಿಯ ತಾಯಿಯವರ ಸವಿನೆನಪಿನಲ್ಲಿರುವ
ಪುತ್ರ: ರಬೀಂದ್ರ ಶ್ರೀಕಂಠನ್ ಮತು ಕುಟುಂಬ
ಪುತ್ರಿ: ಗೀತಾ ಶ್ರೀಕಂಠನ್
ಇಮೇಲ್: r_srikantan@yahoo.com

ಪ್ರಥಮ ಪುಣ್ಯಸ್ಮರಣೆ
ದಿನಾಂಕ 4–10–2021

ಮರೆಯಲಾಗದ ಮಹಾನ್ ಚೇತನಕ್ಕೆ ಹೃದಯ ಪೂರ್ಣ ನಮನ
ಶ್ರೀಯುತ ಎಸ್. ಮಂಜುನಾಥ್, ಬಿ.ಇ, (ಐಎಂಇ)
ಜನನ: 6–12–1975 – ನಿಧನ: 4–10–2020
ನೀನು ನಮ್ಮನ್ನಗಲಿ ಒಂದು ವರ್ಷವಾಯಿತು
ನಿನ್ನ ಆದರ್ಶಮಯ ಜೀವನ ನಮಗೆ ದಾರಿ ದೀಪ
ನಿನ್ನ ನೆನಪು ಅವಿಸ್ಮರಣೀಯ.
ಇಂತಿ ದುಃಖತಪ್ತರು ನಿನ್ನ ತಂದೆ, ತಾಯಿ ಪತ್ನಿ, ಮಗ, ತಮ್ಮಂದಿರು ಮತ್ತು ಅವರ ಕುಟುಂಬ ಮತ್ತು ಅಪಾರ ಬಂಧು–ಮಿತ್ರರು.

ವೈಕುಂಠ ಸಮಾರಾಧನೆ

ಶ್ರೀ ಗೋಪಾಲಕೃಷ್ಣ ಎನ್.
ದರ್ಶನ್ ಗ್ರೂಪ್ಸ್ ಮಾಲೀಕರು
ಸಹೃದಯ, ಸರಳ, ಸಜ್ಜನಿಕೆಯ ವ್ಯಕ್ತಿತ್ವದಿಂದ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿ ನಮ್ಮ ಶ್ರೇಯೋಭಿವೃದ್ಧಿಗೆ ಕಾರಣೀಭೂತರಾಗಿದ್ದಿರಿ, ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿ ಹಾಗೂ ಸದ್ಗತಿಯನ್ನುಕರುಣಿಸಲಿ.
ಇವರು ದಿ: 25.09.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 05.10.2021 ಮಂಗಳವಾರ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 12.00ರವರೆಗೆ ನಡವತ್ತಿ ಗ್ರಾಮ, ಹೊಸಕೋಟೆ ತಾಲ್ಲೂಕು, ಬೆಂಗಳೂರು. ಇಲ್ಲಿ ನಡೆಸಲಾಗುವುದು. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ – ಶ್ರೀಮತಿ ಸರೋಜ, ಮಕ್ಕಳು, ತಮ್ಮಂದಿರು, ಅಳಿಯಂದಿರು ಮತ್ತು ಕುಟುಂಬದವರು ಹಾಗೂ ಬಂಧು–ಮಿತ್ರರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

ಉದ್ಯೋಗಾವಕಾಶ

Domestic Helpers / Housekeeping

JOIN NOW in India's Largest House Keeping Company and earn 30,000 to 40,000 per month. For more details give a missed call at this number: 08045686600

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

Hospital & Medical Jobs

WANTED PHARMACISTS to work all over Karnataka (with Diploma in Pharmacy Certificate) plz send the CV to email: raghu_sgr2@yahoo.co.in / poojyaya2005@gmail.com/ Or only WhatsApp : 9845996744 / 9341366744

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು -56 ಸಂಪರ್ಕಿಸಿ : 9606523337, 9606385001

ಭವಿಷ್ಯ

Astrology

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

"ವಶೀಕರಣಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜೀವ ವಿಮೆ: ಈ ವಿಚಾರ ನೆನಪಿರಲಿ

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಜೀವ ವಿಮೆ ಎನ್ನುವುದು ಕುಟುಂಬಕ್ಕೆ ಆರ್ಥಿಕ ಭದ್ರತೆ ಕೊಡುವ ಸಾಧನ. ಆದರೆ ಜೀವ ವಿಮೆ ಖರೀದಿಸುವಾಗ ಅನೇಕರು ಸರಿಯಾದ ಮಾಹಿತಿ ಸಿಗದೆ ಸೂಕ್ತವಲ್ಲದ ವಿಮೆ ಖರೀದಿಸುತ್ತಾರೆ. ಬನ್ನಿ, ಜೀವ ವಿಮೆ ಕೊಳ್ಳುವಾಗ ಪ್ರಮುಖವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕಾದ ಮೂರು ವಿಚಾರಗಳ ಬಗ್ಗೆ ತಿಳಿದುಕೊಳ್ಳೋಣ.

1. ಯಾವ ಜೀವ ವಿಮೆಯಿಂದ ಅನುಕೂಲ?: ಸಾಂಪ್ರದಾಯಿಕ ವಿಮಾ ಪಾಲಿಸಿಗಳಲ್ಲಿ ಅಂದರೆ ಎಂಡೋಮೆಂಟ್, ಮನಿಬ್ಯಾಕ್ ಪಾಲಿಸಿಗಳಲ್ಲಿ ಹೆಚ್ಚಿಗೆ ವಿಮಾ ಕವರೇಜ್ ಇರುವುದಿಲ್ಲ, ನೀವು ಕಟ್ಟುವ ಪ್ರೀಮಿಯಂ ಮೇಲೆ ಹೆಚ್ಚಿಗೆ ಲಾಭವೂ ಬರುವುದಿಲ್ಲ. ಉದಾಹರಣೆಗೆ, ನೀವು ₹ 10 ಲಕ್ಷ ವಿಮಾ ಕವರೇಜ್ ನೀಡುವ ಪಾಲಿಸಿಯನ್ನು ಪಡೆಯಬೇಕಾದರೆ 15 ವರ್ಷಗಳ ಅವಧಿಗೆ ವಾರ್ಷಿಕ ಸುಮಾರು ₹ 50 ಸಾವಿರ ಪಾವತಿಸಬೇಕು. ಇವತ್ತಿನ ಖರ್ಚು ಮತ್ತು ಭವಿಷ್ಯದ ಹಣದುಬ್ಬರದ ಲೆಕ್ಕ ಹಾಕಿದಾಗ ₹ 10 ಲಕ್ಷ ಕವರೇಜ್ ಯಾವುದಕ್ಕೂ ಸಾಲುವುದಿಲ್ಲ. ಅಷ್ಟೇ ಅಲ್ಲ ನೀವು ವಿಮೆಯಲ್ಲಿ 10 ವರ್ಷ ಅಥವಾ 15 ವರ್ಷ ಕಟ್ಟುವ ಪ್ರೀಮಿಯಂಗೆ ಶೇಕಡ 3ರಿಂದ ಶೇ 4ರಷ್ಟು ಬಡ್ಡಿ ಲಾಭ ಮಾತ್ರ ಸಿಗುತ್ತದೆ.

ಇತ್ತ ಕವರೇಜ್ ಕೂಡ ಹೆಚ್ಚಿಗೆ ಇಲ್ಲ, ಅತ್ತ ಬಡ್ಡಿ ಲಾಭವೂ ಇಲ್ಲ ಎನ್ನುವ ವಿಮೆಯಿಂದ ಪ್ರಯೋಜನವಾದರೂ ಏನು? ಜೀವ ವಿಮೆಯ ವಿಚಾರ ಬಂದಾಗ ಅವಧಿ ವಿಮೆ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ವ್ಯಕ್ತಿಯ ವಾರ್ಷಿಕ ಆದಾಯದ 10 ಪಟ್ಟು ಹೆಚ್ಚು ಅವಧಿ ವಿಮೆ ಕವರೇಜ್ ಇರಬೇಕು. ಅಂದರೆ, ಉದಾಹರಣೆಗೆ ನಿಮ್ಮ ವಾರ್ಷಿಕ ಆದಾಯ ₹ 10 ಲಕ್ಷ ಇದ್ದರೆ ನೀವು ಕನಿಷ್ಠ ₹ 1 ಕೋಟಿ ಕವರೇಜ್ ಇರುವ ಅವಧಿ ವಿಮೆ ಖರೀದಿಸುವುದು ಒಳಿತು.

₹ 1 ಕೋಟಿ ಮೊತ್ತದ ಕವರೇಜ್ ಇರುವ ಅವಧಿ ವಿಮೆ ಪಡೆಯಲು 30 ವರ್ಷ ವಯಸ್ಸಿನ ವ್ಯಕ್ತಿಗೆ ಸುಮಾರು ₹ 10 ಸಾವಿರದಿಂದ ₹ 12 ಸಾವಿರ ವಾರ್ಷಿಕ ಪ್ರೀಮಿಯಂ ಇರುತ್ತದೆ. ಅವಧಿ ವಿಮೆ ಪಡೆದಿರುವ ವ್ಯಕ್ತಿ ಅಕಾಲಿಕ ಮರಣಕ್ಕೆ ತುತ್ತಾದರೆ ಆತನ ಕುಟುಂಬಕ್ಕೆ ₹ 1 ಕೋಟಿ ವಿಮೆ ಮೊತ್ತ ಸಿಗುತ್ತದೆ. ಇದು ಅತ್ಯಂತ ಅಗ್ಗ ಮತ್ತು ಸುರಕ್ಷಿತ ಜೀವ ವಿಮೆ. ಆನ್‌ಲೈನ್ ಮೂಲಕ ಖರೀದಿಸಿದರೆ ಅತ್ಯಂತ ಸ್ಪರ್ಧಾತ್ಮಕ ಬೆಲೆಯಲ್ಲಿ ಒಳ್ಳೆಯ ವಿಮಾ ಪಾಲಿಗೆ ನಿಮಗೆ ಸಿಗುತ್ತದೆ.

2. ವಿಮಾದಾರರ ಪಾಲಿನ ರಕ್ಷಕ ಸೆಕ್ಷನ್ 45: ಜೀವ ವಿಮೆ ಪಾಲಿಸಿ ಖರೀದಿಸುವಾಗ, ವಿಮಾ ಕಂಪನಿಗಳು ಸಂಕಷ್ಟ ಕಾಲದಲ್ಲಿ ಕ್ಲೇಮ್ ನಿಜಕ್ಕೂ ನೀಡುತ್ತವೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಜೀವ ವಿಮೆ, ಅದರಲ್ಲೂ ಅವಧಿ ವಿಮೆ ಇದ್ದಲ್ಲಿ, ಕ್ಲೇಮ್ ಮೊತ್ತ ದೊಡ್ಡ ಪ್ರಮಾಣದಲ್ಲಿರುತ್ತದೆ. ಹಾಗಾಗಿ ಸಹಜವಾಗಿಯೇ ವಿಮಾ ಕಂಪನಿಗಳು ಕ್ಲೇಮ್ ನೀಡುತ್ತವೆಯೇ ಎಂಬ ಅನುಮಾನ ಜನರಲ್ಲಿ ಮೂಡುತ್ತದೆ. ಇದಕ್ಕೆ ಉತ್ತರ ವಿಮಾ ಕಾಯ್ದೆಯ ಸೆಕ್ಷನ್ 45.

ನಿಮ್ಮ ವಿಮೆ ಬಾಂಡ್‌ನ ಕೊನೆಯಲ್ಲಿ 1938ರ ವಿಮಾ ಕಾಯ್ದೆಯ ಬಗ್ಗೆ ಉಲ್ಲೇಖವಿರುತ್ತದೆ. ವಿಮೆ ಪಡೆದಿರುವ ಮತ್ತು ಪಡೆಯುವ ಪ್ರತಿ ವ್ಯಕ್ತಿಗೂ ಈ ಬಗ್ಗೆ ತಿಳಿದಿರಲೇಬೇಕು. ವಿಮಾ ಕಾಯ್ದೆಯ ಸೆಕ್ಷನ್ 45ರ ಪ್ರಕಾರ, ಪಾಲಿಸಿ ನೀಡಿದ ದಿನದಿಂದ ಮೂರು ವರ್ಷಗಳ ಬಳಿಕ ವಿಮಾ ಕಂಪನಿ ಯಾವುದೇ ಕಾರಣ ನೀಡಿ ಕ್ಲೇಮ್ ನಿರಾಕರಿಸುವಂತಿಲ್ಲ.

3. ಎಂಡಬ್ಲ್ಯುಪಿ ಕಾಯ್ದೆ ಅಡಿಯಲ್ಲಿ ಅವಧಿ ವಿಮೆ: ಒಂದು ಅವಧಿ ವಿಮೆ ತೆಗೆದುಕೊಂಡರೆ ಸಾಕು, ಜೀವಕ್ಕೆ ಏನಾದರೂ ತೊಂದರೆ ಆದರೂ ಮಡದಿ, ಮಕ್ಕಳ ಭವಿಷ್ಯ ಸುಭದ್ರವಾಗಿರುತ್ತದೆ ಎಂದು ನಾವೆಲ್ಲರೂ ಭಾವಿಸುತ್ತೇವೆ. ಆದರೆ ವಾಸ್ತವದಲ್ಲಿ ವಿಮೆ ಖರೀದಿಸಿದ ಮಾತ್ರಕ್ಕೆ ನಿಮ್ಮ ಅನುಪಸ್ಥಿತಿಯಲ್ಲಿ ಕುಟುಂಬಕ್ಕೆ ವಿಮೆ ಹಣ ಸಿಕ್ಕಿಬಿಡುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ನಾಮಿನಿ ಹೆಸರಿಸಿದ್ದರೂ ವಿಮೆ ಹಣವು ಸಾಲ ಕೊಟ್ಟಿರುವವರು ಅಥವಾ ಸಂಬಂಧಿಕರ ಪಾಲಾಗುವ ಸಾಧ್ಯತೆ ಇರುತ್ತದೆ.

ಇಂತಹ ಪರಿಸ್ಥಿತಿಯನ್ನು ತಡೆಯುವ ಮತ್ತು ವಿವಾಹಿತ ಮಹಿಳೆಗೆ ವಿಮೆಯ ಪೂರ್ಣ ಹಣ ಸಿಗುವಂತೆ ಮಾಡುವ ಕಾಯ್ದೆ ವಿವಾಹಿತ ಮಹಿಳೆ ಆಸ್ತಿ (ಎಂಡಬ್ಲ್ಯುಪಿ ಆ್ಯಕ್ಟ್) ಕಾಯ್ದೆ. ಅವಧಿ ವಿಮೆಯನ್ನು ಎಂಡಬ್ಲ್ಯುಪಿ ಅಡಿಯಲ್ಲಿ ಪಡೆದುಕೊಂಡರೆ ಮಡದಿ, ಮಕ್ಕಳು ಅಥವಾ ಸೂಚಿತ ಅವಲಂಬಿತರಿಗೆ ಮಾತ್ರ ಕ್ಲೇಮ್ ಹಣ ಸಿಗುತ್ತದೆ. ಯಾವುದೇ ಸಾಲಗಾರರು, ಸಂಬಂಧಿಕರು ಈ ಇನ್ಶೂರೆನ್ಸ್ ಹಣದ ಮೇಲೆ ಹಕ್ಕು ಸಾಧಿಸುವಂತಿಲ್ಲ. ಕೋರ್ಟ್‌ಗೆ ಅರ್ಜಿ ಸಲ್ಲಿಸಿ, ವಿಮೆಯಿಂದ ಬಂದಿರುವ ಹಣದಲ್ಲಿ ಸಾಲ ಪಾವತಿ ಮಾಡುವಂತೆ ಬ್ಯಾಂಕ್‌ಗಳೂ ಕೇಳುವಂತಿಲ್ಲ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ 5 ವಾರಗಳ ಗಳಿಕೆ ಬಳಿಕ ಈಗ ಇಳಿಕೆ!

ಸತತ ಐದು ವಾರಗಳ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಅಕ್ಟೋಬರ್ 1ಕ್ಕೆ ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ. 58,765 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಮತ್ತು 17,532 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ತಲಾ ಶೇ 2ರಷ್ಟು ಕುಸಿತ ಕಂಡಿವೆ. ಕಳೆದ ಐದು ತಿಂಗಳಲ್ಲಿ ವಾರದ ಅವಧಿಯಲ್ಲಾಗಿರುವ ಗರಿಷ್ಠ ಕುಸಿತ ಇದು.

ವಲಯವಾರು ಗಮನಿಸಿದಾಗ, ಮಿಡ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಗಳಿಕೆ ಕಂಡಿದ್ದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 6ರಷ್ಟು ಗಳಿಸಿಕೊಂಡಿದೆ. ಮತ್ತೊಂದೆಡೆ ಕಳೆದ ಎಂಟು ತಿಂಗಳಿಂದ ಏರುಗತಿಯಲ್ಲಿದ್ದ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 6ರಷ್ಟು ತಗ್ಗಿದೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಕೋಲ್ ಇಂಡಿಯಾ ಶೇ 14ರಷ್ಟು, ಎನ್‌ಟಿಪಿಸಿ ಶೇ 13ರಷ್ಟು, ಪವರ್ ಗ್ರಿಡ್ ಶೇ 9ರಷ್ಟು, ಐಒಸಿ ಶೇ 9ರಷ್ಟು ಮತ್ತು ಒಎನ್‌ಜಿಸಿ ಶೇ 7ರಷ್ಟು ಗಳಿಸಿವೆ. ಟೆಕ್ ಮಹೀಂದ್ರ ಶೇ 9ರಷ್ಟು, ಏರ್‌ಟೆಲ್ ಶೇ 9ರಷ್ಟು, ಏಷ್ಯನ್ ಪೇಂಟ್ಸ್ ಶೇ 8ರಷ್ಟು, ಬಜಾಜ್ ಫಿನ್‌ಸರ್ವ್ ಶೇ 7ರಷ್ಟು ಮತ್ತು ಎಚ್‌ಸಿಎಲ್ ಟೆಕ್ ಶೇ 6ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಜಾಗತಿಕವಾಗಿ ವಿವಿಧ ದೇಶಗಳ ಸೆಂಟ್ರಲ್ ಬ್ಯಾಂಕ್‌ಗಳು ಬಡ್ಡಿ ದರವನ್ನು ತಗ್ಗಿಸಿದ ಪರಿಣಾಮವಾಗಿ ಅರ್ಥ ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಾಗಿ ಷೇರುಪೇಟೆಯಲ್ಲಿ ಗೂಳಿ ಓಟ ಜೋರಾಗಿತ್ತು. ಇದೀಗ ಅಮೆರಿಕದ ಫೆಡರಲ್ ಬ್ಯಾಂಕ್ ಸೇರಿ ವಿವಿಧ ದೇಶಗಳ ಬ್ಯಾಂಕ್‌ಗಳು ನಿಧಾನವಾಗಿ ಬಡ್ಡಿ ದರ ಹೆಚ್ಚಿಸಲು ಮುಂದಾಗಿರುವ ಸೂಚನೆ ನೀಡಿರುವುದು ಮಾರುಕಟ್ಟೆಯಲ್ಲಿ ಒಂದಿಷ್ಟು ಹಿಂಜರಿಕೆ ಕಂಡುಬರಲು ಕಾರಣವಾಗಿದೆ. ಈ ನಡುವೆ ಎರಡನೆಯ ತ್ರೈಮಾಸಿಕ ಅವಧಿಯ ಫಲಿತಾಂಶಗಳ ಮೇಲೆ ಸಹ ಹೂಡಿಕೆದಾರರು ದೃಷ್ಟಿ ಹರಿಸಿದ್ದು ಕಂಪನಿಗಳ ಫಲಿತಾಂಶ ಸಕಾರಾತ್ಮಕವಾಗಿದೆಯೋ ನಕಾರಾತ್ಮಕವಾಗಿದೆಯೋ ಎನ್ನುವ ವಿಚಾರ ಸಹ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿದೆ. ಸದ್ಯದ ಮಟ್ಟಿಗೆ ಹೇಳುವುದಾದರೆ ಮಾರುಕಟ್ಟೆಯಲ್ಲಿ ಸ್ಥಿರತೆ ಕಡಿಮೆಯಾಗುವ ಸಾಧ್ಯತೆ ಹೆಚ್ಚಿದೆ.

ಜಾಗತಿಕ ಅಸ್ಥಿರತೆ ಪರಿಣಾಮ ತಗ್ಗಿಸುತ್ತಿರುವ ಕಂಪನಿಗಳು: ಕಾರ್ಯದರ್ಶಿ

ತೈಲ ಬೆಲೆ ಏರಿಕೆಯ ಹೊರೆ ಪೂರ್ತಿಯಾಗಿ ಆಗಿಲ್ಲ ವರ್ಗಾವಣೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ತೈಲ ಬೆಲೆ ಏರಿಕೆಯನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೂರ್ತಿಯಾಗಿ ದೇಶಿ ಗ್ರಾಹಕರ ಹೆಗಲಿಗೆ ವರ್ಗಾವಣೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ, ಬ್ರಿಟನ್ನಿನಲ್ಲಿ ಆಗಿರುವಂತೆ, ಪೆಟ್ರೋಲ್ ಬಂಕ್‌ಗಳಲ್ಲಿ ದಾಸ್ತಾನು ಖಾಲಿಯಾಗುವ ಪರಿಸ್ಥಿತಿ ಭಾರತದಲ್ಲಿ ಎಲ್ಲಿಯೂ ಸೃಷ್ಟಿಯಾಗದು ಎಂದು ಹೇಳಿದ್ದಾರೆ.

'ವೆಚ್ಚಕ್ಕೆ ಅನುಗುಣವಾಗಿ ತೈಲೋತ್ಪನ್ನಗಳ ದೇಶಿ ಮಾರಾಟ ದರ ಏಪ್ಪಿರಬೇಕು ಎಂಬ ವಿಚಾರವಾಗಿ ತೈಲ ಮಾರಾಟ ಕಂಪನಿಗಳು ತಮ್ಮದೇ ಆದ ತೀರ್ಮಾನ ಕೈಗೊಳ್ಳುತ್ತಿವೆ. ತೀವ್ರ ಏರಿಳಿತ ಉಂಟಾಗದಂತೆಯೂ ನೋಡಿಕೊಳ್ಳುತ್ತಿವೆ' ಎಂದು ಪೆಟ್ರೋಲಿಯಂ ಕಾರ್ಯದರ್ಶಿ ತರುಣ್ ಕಪೂರ್ ಹೇಳಿದ್ದಾರೆ.

'ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಅಸ್ಥಿರತೆಯು ದೇಶಿ ಮಾರುಕಟ್ಟೆಯಲ್ಲಿ ಹೆಚ್ಚಿನ ಪರಿಣಾಮ ಬೀರದಂತೆ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ. ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್‌ಗೆ 76.71 ಡಾಲರ್‌ಗೆ ತಲುಪಿದೆ.

ಜಾಗತಿಕ ಮಟ್ಟದಲ್ಲಿ ಉತ್ಪಾದನೆಯಲ್ಲಿ ಆದ ತೊಡಕುಗಳೇ ಈ ಬೆಲೆ ಹೆಚ್ಚಳಕ್ಕೆ ಕಾರಣ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಬೆಲೆ ಹೆಚ್ಚಳದ ಅಷ್ಟೂ ಹೊರೆಯನ್ನು ದೇಶಿ ಗ್ರಾಹಕರಿಗೆ ವರ್ಗಾವಣೆ ಮಾಡಿಲ್ಲ ಎಂದು ಇನ್ನೊಬ್ಬರು ಅಧಿಕಾರಿ ತಿಳಿಸಿದ್ದಾರೆ. 'ಎಲ್‌ಪಿಜಿ ದರವನ್ನೇ ಗಮನಿಸಿ. ಅವುಗಳ ಬೆಲೆಯು 665 ಡಾಲರ್ ಇದ್ದುದು 797 ಡಾಲರ್‌ಗೆ ಏರಿಕೆ ಆಗಿದೆ. ಆದರೆ, ಈ ಪ್ರಮಾಣದ ಏರಿಕೆಯನ್ನು ದೇಶಿ ಗ್ರಾಹಕರ ಹೆಗಲಿಗೆ ವರ್ಗಾವಣೆ ಮಾಡಿಲ್ಲ' ಎಂದು ಅವರು ಹೇಳಿದ್ದಾರೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಈ ಏರಿಕೆಯ ಹೊರೆಯನ್ನು ತಾವೇ ನಿಭಾಯಿಸುತ್ತಿವೆ ಎಂದಿದ್ದಾರೆ.

ನೈಸರ್ಗಿಕ ಅನಿಲ ಬೆಲೆಯಲ್ಲಿ ಆಗಿರುವ ಶೇ 62ರಷ್ಟು ಹೆಚ್ಚಳದ ಕಾರಣದಿಂದಾಗಿ ಸಿಎನ್‌ಜಿ ಬೆಲೆ ಕೂಡ ಹೆಚ್ಚಿಸಬೇಕಾಗಿದೆ. ಆದರೆ, ಸಿಎನ್‌ಜಿ ಬೆಲೆಯ ಹೆಚ್ಚಳ ನಿಯಂತ್ರಿತ ಪ್ರಮಾಣದಲ್ಲಿ ಆಗುತ್ತಿದೆ ಎಂದು ಅವರು ತಿಳಿಸಿದ್ದಾರೆ. 'ಬ್ರಿಟನ್ನಿನಂತಹ ಅಭಿವೃದ್ಧಿ ಹೊಂದಿರುವ ದೇಶಗಳ ಪೆಟ್ರೋಲ್ ಬಂಕ್‌ಗಳಲ್ಲಿ ದಾಸ್ತಾನು ಖಾಲಿಯಾಗಿದೆ. ಇಂತಹ ಸ್ಥಿತಿ ಭಾರತದಲ್ಲಿ ಎಲ್ಲಿಯೂ ಇಲ್ಲ. ದೇಶದ ತೈಲ ಮಾರಾಟ ಕಂಪನಿಗಳು ಬೆಲೆಯನ್ನು ನಿಯಂತ್ರಿಸುತ್ತಿರುವುದಷ್ಟೇ ಅಲ್ಲದೆ, ಪೂರೈಕೆಯು ಸ್ಥಿರವಾಗಿ ಇರುವಂತೆಯೂ ನೋಡಿಕೊಳ್ಳುತ್ತಿವೆ' ಎಂದು ಅಧಿಕಾರಿ ಹೇಳಿದ್ದಾರೆ.

ಎಸ್‌ಬಿಐನಿಂದ 'ಎನ್‌ಎವಿ–ಇಕ್ಯಾಷ್' ಕಾರ್ಡ್

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ 'ಎನ್‌ಎವಿ–ಇಕ್ಯಾಷ್' ಕಾರ್ಡ್‌ಅನ್ನು ಕಾರವಾರದಲ್ಲಿ, ನೌಕಾನೆಲೆಯ ವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯದಲ್ಲಿ ಈಚೆಗೆ ಬಿಡುಗಡೆ ಮಾಡಿತು.

ನೌಕಾದಳದ ಪಶ್ಚಿಮ ವಿಭಾಗದ ಮುಖ್ಯ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ ವೈಸ್ ಅಡ್ಮಿರಲ್ ಆರ್. ಹರಿಕುಮಾರ್ ಮತ್ತು ಎಸ್‌ಬಿಐನ ರಿಟೇಲ್ ಮತ್ತು ಡಿಜಿಟಲ್ ಬ್ಯಾಂಕಿಂಗ್‌ನ ವ್ಯವಸ್ಥಾಪಕ ನಿರ್ದೇಶಕ ಸಿ.ಎಸ್. ಶೆಟ್ಟಿ ಅವರು ಕಾರ್ಡ್ ಅನ್ನು ಬಿಡುಗಡೆ ಮಾಡಿದರು. ನೌಕೆಗಳಲ್ಲಿ ಇರುವ ಸಿಬ್ಬಂದಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ವಹಿವಾಟು ನಡೆಸಲು ಇದು ಉಪಯುಕ್ತವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹238-471
ದ್ವಿತಳಿ (ಬಿ.ವಿ) ₹289-556

ಎಲ್‌ಐಸಿ ಐಪಿಒ: ನವೆಂಬರ್‌ಗೆ 'ಸೆಬಿ'ಗೆ ದಾಖಲೆ ಪತ್ರ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ಷೇರುಗಳನ್ನು ಸಾರ್ವಜನಿಕರ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಪ್ರಕ್ರಿಯೆಯ ಭಾಗವಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ನವೆಂಬರ್‌ನಲ್ಲಿ ಪ್ರಾಥಮಿಕ ದಾಖಲೆ ಪತ್ರಗಳನ್ನು ಸಲ್ಲಿಸಲಿದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ಐಪಿಒ ಪ್ರಕ್ರಿಯೆ ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಐಪಿಒ ನಿರ್ವಹಣೆಗಾಗಿ ಕೇಂದ್ರ ಸರ್ಕಾರವು ಕಳೆದ ತಿಂಗಳು 10 ಮರ್ಚೆಂಟ್ ಬ್ಯಾಂಕ್‌ಗಳನ್ನು ನೇಮಕ ಮಾಡಿದೆ. ಒಮ್ಮೆ ದಾಖಲೆಪತ್ರ ಸಲ್ಲಿಕೆ ಆದರೆ, ಹೂಡಿಕೆದಾರರನ್ನು ಆಕರ್ಷಿಸಲು ಮರ್ಚೆಂಟ್ ಬ್ಯಾಂಕ್‌ಗಳು ಜನವರಿಯಲ್ಲಿ ಜಾಗತಿಕ ಮತ್ತು ದೇಶೀಯವಾಗಿ ರೋಡ್‌ಷೋ ನಡೆಸಲಿವೆ ಎಂದಿದ್ದಾರೆ.

ಬಡ್ಡಿದರ ಯಥಾಸ್ಥಿತಿ: ತಜ್ಞರ ಅಭಿಪ್ರಾಯ

ಮುಂಬೈ (ಪಿಟಿಐ): ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆ ಏರಿಕೆ ಆಗುತ್ತಿರುವುದು ಹಾಗೂ ದೇಶದಲ್ಲಿ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬಾರಿಯೂ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಕ್ಟೋಬರ್ 6ರಿಂದ ಮೂರು ದಿನಗಳವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆ ನಡೆಯಲಿದೆ. ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಆರ್ಥಿಕತೆಯಲ್ಲಿ ಬೇಡಿಕೆ ಸೃಷ್ಟಿಸುವ ಉದ್ದೇಶದಿಂದ ಆರ್‌ಬಿಐ 2020ರ ಮೇ ತಿಂಗಳಿನಲ್ಲಿ ರೆಪೊ ದರದಲ್ಲಿ ಶೇ 0.40ರಷ್ಟು ಕಡಿತ ಮಾಡಿತ್ತು. ಅದರಿಂದಾಗಿ ರೆಪೊ ದರವು ಶೇ 4ಕ್ಕೆ ಇಳಿಕೆ ಆಗಿತ್ತು. ಆ ಬಳಿಕ ಇಲ್ಲಿಯವರೆಗೆ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಬಡ್ಡಿ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದನ್ನು ಆರ್‌ಬಿಐ ಮುಂದುವರಿಸಲಿದ್ದು, ತನ್ನ ಹೊಂದಾಣಿಕೆಯ ನಿಲುವನ್ನು ಸಹ ಕಾಯ್ದುಕೊಳ್ಳುವ ನಿರೀಕ್ಷೆ ಇದೆ ಎಂದು ಮಾರ್ಗನ್ ಸ್ಟ್ಯಾನ್ಲಿಯ ತಜ್ಞರು ಹೇಳಿದ್ದಾರೆ.

'ಆರ್ಥಿಕತೆಯು ಈಗಷ್ಟೇ ಬೆಳವಣಿಗೆ ಹಾದಿಗೆ ಮರಳಿದೆ. ಹೀಗಾಗಿ, ದರವು ಮತ್ತೆ ಹೆಚ್ಚಾಗಲಾರದು. ಅಗತ್ಯ ವಸ್ತುಗಳ ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಯಿಂದಾಗಿ ಹಣದುಬ್ಬರವು ಉಂಟಾಗಿದೆ ಎನ್ನುವುದು ನನ್ನ ಭಾವನೆ. ಒಮ್ಮೆ ಈ ಅಡಚಣೆ ನಿವಾರಣೆ ಆದರೆ ಹಿಂದಿನ ಬಾರಿಯ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯ ಸಂದರ್ಭದಲ್ಲಿ ಕಂಡಷ್ಟು ಏರಿಕೆಯನ್ನು ಹಣದುಬ್ಬರವು ಕಾಣದೇ ಇರಬಹುದು' ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಖಾರಾ ಅವರು ಈಚೆಗಷ್ಟೇ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಲಿಬಿಯಾದ 65 ವಲಸಿಗರ ರಕ್ಷಣೆ

ಸೀಬರ್ಡ್ ಹಡಗಿನೊಳಗಿಂದ (ಎಪಿ): ಉತ್ತರ ಆಫ್ರಿಕಾದ ಲಿಬಿಯಾದಿಂದ ಯುರೋಪಿನತ್ತ ಮರದ ದೋಣಿಯಲ್ಲಿ ವಲಸೆ ಹೋಗುತ್ತಿದ್ದ ಮಕ್ಕಳು, ಮಹಿಳೆಯರು ಸೇರಿದಂತೆ 65 ಜನರನ್ನು ಇಟಲಿಯ ಹಡಗೊಂದು ಶನಿವಾರ ರಕ್ಷಿಸಿದೆ.

ಜನರಿಂದ ಕಿಕ್ಕಿರಿದಿದ್ದ ದೋಣಿಯ ಎಂಜಿನ್ ಸಮುದ್ರದ ಮಧ್ಯ ಭಾಗದಲ್ಲಿ ಕೆಟ್ಟು ಹೋಗಿತ್ತು. ಮೆಡಿಟರೇನಿಯನ್ ಸಮುದ್ರದ ಮಧ್ಯ ಭಾಗದಲ್ಲಿ ಗಸ್ತು ಪರಿಶೀಲನೆ ನಡೆಸುವ ಎನ್‌ಜಿಒ ವಿಮಾನವೊಂದು ಇದನ್ನು ಗುರುತಿಸಿತ್ತು. ದೋಣಿಯಲ್ಲಿ ಇದ್ದವರ ಬಳಿ ಯಾವುದೇ ರೀತಿಯ ಜೀವ ರಕ್ಷಕ ಜಾಕೆಟ್‌ಗಳು ಇರಲಿಲ್ಲ. ಕೂಡಲೇ ಸಮೀಪದ ಬೌರಿ ತೈಲನಿಕ್ಷೇಪದ ಬಳಿಯಿದ್ದ 'ಅಸೊವೆಂಟನೋವ್' ಹಡಗಿನವರಿಗೆ ಮನವಿ ಮಾಡಿಕೊಂಡಿತು. ಬಳಿಕ ದೋಣಿಯಲ್ಲಿ ಇದ್ದವರನ್ನು ರಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲಿಬಿಯಾದಿಂದ ದೋಣಿಯಲ್ಲಿ ಸಾಗುತ್ತಿದ್ದ 65 ವಲಸಿಗರನ್ನು ಮೆಡಿಟರೇನಿಯನ್ ಮಧ್ಯಭಾಗದಲ್ಲಿ ಇಟಲಿಯ ಹಡಗು ರಕ್ಷಣೆ ಮಾಡಿದೆ –ಎಪಿ ಚಿತ್ರ

ಈ ವರ್ಷ ಇಲ್ಲಿಯವರೆಗೆ ಸುಮಾರು 44,000 ಜನರು ಟುನೇಷಿಯಾ ಮತ್ತು ಲಿಬಿಯಾದಿಂದ ಮಧ್ಯ ಮೆಡಿಟರೇನಿಯನ್ ದಾಟುವ ಮೂಲಕ ಯುರೋಪ್ ಕಡಲ ತೀರವನ್ನು ತಲುಪಿದ್ದಾರೆ. ಕಳ್ಳಸಾಗಣೆದಾರರು ಇವರಲ್ಲಿ ಹಲವರನ್ನು ಅಪಾಯಕಾರಿ ದೋಣಿಗಳಲ್ಲಿ ಸಾಗಿಸಿದ್ದಾರೆ.

ಹೀಗೆ ವಲಸೆ ಬರುತ್ತಿರುವವರು ಉತ್ತರ ಆಫ್ರಿಕಾಕ್ಕೆ ಹತ್ತಿರುವಿರುವ ಇಟಲಿಯ ದ್ವೀಪವಾದ ಲ್ಯಾಂಪೆಡುಸಾದಲ್ಲಿ ಇಳಿಯುತ್ತಿದ್ದಾರೆ. ಒಂದೆಡೆ ವಲಸಿಗರ ಆಗಮನ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಮೆಡಿಟರೇನಿಯನ್ ಸಮುದ್ರದಲ್ಲಿ ಅವಘಡಗಳು ಸಂಭವಿಸುವುದೂ ಮುಂದುವರಿದಿವೆ. ಈ ವರ್ಷ ಇಂತಹ ದುರಂತಗಳಲ್ಲಿ 1,100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಅಮೆರಿಕ: ವಿವಿಧೆಡೆ ಗಾಂಧಿ ಜಯಂತಿ ಆಚರಣೆ

ವಾಷಿಂಗ್ಟನ್ (ಪಿಟಿಐ): ಅಹಿಂಸೆ, ಸಹಿಷ್ಣುತೆಯ ಮಹಾನ್ ಸಂದೇಶ ಸಾರಿದ ಮಹಾತ್ಮ ಗಾಂಧೀಜಿ ಅವರ ಜನ್ಮದಿನಾಚರಣೆಯನ್ನು ಅಮೆರಿಕದಾದ್ಯಂತ ಆಚರಿಸಲಾಯಿತು.

'ಗಾಂಧೀಜಿಯವರ 152ನೇ ಹುಟ್ಟುಹಬ್ಬವನ್ನು ಆಚರಿಸಲು ನಾವು ಭಾರತದ ನಮ್ಮ ಸ್ನೇಹಿತರೊಡನೆ ಸೇರಿಕೊಳ್ಳುತ್ತೇವೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಟೋನಿ ಬ್ಲಿಂಕನ್ ಶನಿವಾರ ಟ್ವೀಟ್ ಮಾಡಿದ್ದಾರೆ.

ಕಳೆದ ವಾರ ಶ್ವೇತ ಭವನದ ಓವಲ್ ಕಚೇರಿಯಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ಅಧ್ಯಕ್ಷ ಜೋ ಬೈಡನ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದ ಮಾತುಗಳನ್ನು ಅವರು ನೆನಪಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಕಾಬೂಲ್ ಮಸೀದಿಯಲ್ಲಿ ಬಾಂಬ್ ಸ್ಫೋಟ

ಕಾಬೂಲ್ (ಎಪಿ): ಅಫ್ಗಾನಿಸ್ತಾನ ರಾಜಧಾನಿ ಕಾಬೂಲ್‌ನಲ್ಲಿ ಮಸೀದಿಯೊಂದರ ಪ್ರವೇಶ ದ್ವಾರದಲ್ಲಿ ಭಾನುವಾರ ಬಾಂಬ್ ಸ್ಫೋಟಗೊಂಡಿದ್ದು, ಹಲವು ನಾಗರಿಕರು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ವಕ್ತಾರ ತಿಳಿಸಿದ್ದಾರೆ.

ತಾಲಿಬಾನ್ ವಕ್ತಾರ ಝಬೀಹುಲ್ಲಾ ಮುಜಾಹಿದ್ ತಾಯಿಯ ಪುಣ್ಯತಿಥಿ ಅಂಗವಾಗಿ ಈದ್ಗಾ ಮಸೀದಿಯಲ್ಲಿ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಬಾಂಬ್ ದಾಳಿ ನಡೆಸಲಾಗಿದೆ.

'ಘಟನೆಯಲ್ಲಿ ಗಾಯಗೊಂಡಿರುವ ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಇಟಲಿ ನೆರವಿನಿಂದ ಕಾರ್ಯ ನಿರ್ವಹಿಸುತ್ತಿರುವ ಇಲ್ಲಿನ 'ಎಮರ್ಜೆನ್ಸಿ ಎನ್‌ಜಿಒ' ಎಂಬ ಆಸ್ಪತ್ರೆ ತಿಳಿಸಿದೆ. ಮಸೀದಿ ಹಾಗೂ ಸುತ್ತಲಿನ ಸ್ಥಳದಲ್ಲಿ ತಾಲಿಬಾನ್ ಭಾರಿ ಬಂದೋಬಸ್ತ್ ಮಾಡಿದೆ. ದಾಳಿ ಹೊಣೆಯನ್ನು ಇದುವರೆಗೆ ಯಾರೂ ಹೊತ್ತುಕೊಂಡಿಲ್ಲ. ಅಫ್ಗಾನಿಸ್ತಾನದ ಮೇಲೆ ತಾಲಿಬಾನ್ ಹಿಡಿತ ಸಾಧಿಸಿದ ಬಳಿಕ ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ದಾಳಿಗಳು ಹೆಚ್ಚಿವೆ. ಉಭಯ ಉಗ್ರ ಸಂಘಟನೆಗಳ ನಡುವಿನ ಕಲಹ ದಾಳಿ ಹೆಚ್ಚಲು ಕಾರಣ ಎಂದು 'ಎಪಿ' ವರದಿ ಮಾಡಿದೆ.

ಯೆಮನ್: ಸಂಘರ್ಷ, 10 ಮಂದಿ ಸಾವು

ಸನಾ (ಯೆಮನ್) (ಎಪಿ): ಯುನೈಟೆಡ್ ಅರಬ್ ಎಮಿರೇಟ್ಸ್‌ನ ಬೆಂಬಲಿತ ಯೆಮನ್ ಪ್ರತ್ಯೇಕತಾವಾದಿಗಳು ಮತ್ತು ಏಡನ್‌ನ ಉದ್ರಿಕ್ತ ಗುಂಪಿನ ನಡುವೆ ಶನಿವಾರ ನಡೆದ ಸಂಘರ್ಷದಲ್ಲಿ ನಾಲ್ವರು ನಾಗರಿಕರು ಸೇರಿದಂತೆ ಕನಿಷ್ಠ 10 ಮಂದಿ ಮೃತಪಟ್ಟಿದ್ದಾರೆ ಎಂದು ಭದ್ರತಾ ಅಧಿಕಾರಿಗಳು ಹೇಳಿದ್ದಾರೆ.

ಅಧ್ಯಕ್ಷರ ಅರಮನೆ ಮತ್ತು ಇತರ ಸರ್ಕಾರಿ ಕಟ್ಟಡಗಳಿರುವ ಕ್ರೇಟರ್‌ನಲ್ಲಿಯ ಏಡನ್ ವಸತಿ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಒಂದು ಕಾಲದಲ್ಲಿ ಸರ್ಕಾರದ ಭಾಗವಾಗಿದ್ದ ಸಶಸ್ತ್ರ ಧಾರ್ಮಿಕ ಗುಂಪಿನ ವಿರುದ್ಧ ಪ್ರತ್ಯೇಕತಾವಾದಿಗಳು ದಾಳಿ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಮಯಂಕ್ ಅರ್ಧಶತಕ ವ್ಯರ್ಥ: ಪಂಜಾಬ್ ಕಿಂಗ್ಸ್‌ಗೆ ನಿರಾಸೆ; ಮಿಂಚಿದ ಚಾಹಲ್

ಮ್ಯಾಕ್ಸ್‌ವೆಲ್ 'ಹ್ಯಾಟ್ರಿಕ್'; ಪ್ಲೇಆಫ್‌ಗೆ ರಾಯಲ್ ಚಾಲೆಂಜರ್ಸ್

ಶಾರ್ಜಾ (ಪಿಟಿಐ): ಸತತ ಮೂರು ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿಯಿಂದಾಗಿ ಜಯಭೇರಿ ಬಾರಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ಲೇ ಆಫ್‌ಗೆ ಲಗ್ಗೆ ಹಾಕಿತು.

ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 6 ರನ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಗೆದ್ದಿತು. ಇದರಿಂದಾಗಿ ಕೆ.ಎಲ್. ರಾಹುಲ್ ನಾಯಕತ್ವದ ತಂಡದ ಪ್ಲೇ ಆಫ್ ಪ್ರವೇಶದ ಕನಸು ಬಹುತೇಕ ಕಮರಿದಂತಾಗಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 164 ರನ್ ಗಳಿಸಿತು. ನಾಯಕ ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ಜೋಡಿ ಉತ್ತಮ ಆರಂಭ ನೀಡಿದರು.

ಅದರ ಮೇಲೆ ಮ್ಯಾಕ್ಸ್‌ವೆಲ್ (57; 33ಎ) ಹೋರಾಟದ ಮೊತ್ತ ಪೇರಿಸಲು ನೆರವಾದರು. ಅವರು ಮುಂಬೈ ಇಂಡಿಯನ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯಗಳಲ್ಲಿಯೂ ಅರ್ಧಶತಕ ಗಳಿಸಿದ್ದರು. ಈ ಬಾರಿ ಆರ್‌ಸಿಬಿಯು ಅತಿ ಹೆಚ್ಚು ಮೌಲ್ಯ ನೀಡಿ ಮ್ಯಾಕ್ಸ್‌ವೆಲ್ ಅವರನ್ನು ಖರೀದಿಸಿತ್ತು.

ಗುರಿ ಬೆನ್ನಟಿದ್ದ ಪಂಜಾಬ್ ತಂಡಕ್ಕೆ ರಾಹುಲ್ (39 ರನ್) ಮತ್ತು ಅರ್ಧಶತಕ ಬಾರಿಸಿದ ಮಯಂಕ್ ಅಗರವಾಲ್ (57; 42 ಎಸೆತ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟಲದ್ಲಿ ಅವರು 91 ರನ್ ಸೇರಿಸಿದರು.

ಆದರೂ ಪಂಜಾಬ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 158 ರನ್ ಗಳಿಸಲಷ್ಟೇ ಶಕ್ತವಾಯಿತು. ಅದಕ್ಕೆ ಕಾರಣವಾಗಿದ್ದು ಯಜುವೇಂದ್ರ ಚಾಹಲ್ (29ಕ್ಕೆ3) ಸ್ಪಿನ್ ಮೋಡಿ. ನಿಕೋಲಸ್ ಪೂರನ್ (3) ಮತ್ತು ಸರ್ಫರಾಜ್ ಖಾನ್ ಅವರಿ ಬ್ಬರಿಗೂ ಪೆವಿಲಿಯನ್ ದಾರಿ ತೋರಿಸಿದ ಚಾಹಲ್, ಅರ್ಧಶತಕ ಗಳಿಸಿದ್ದ ಮಯಂಕ್ ಅಗರವಾಲ್ ಅವರ ವಿಕೆಟ್ ಅನ್ನೂ ಕಬಳಿಸಿದರು. ಇದರಿಂದಾಗಿ ತಂಡದ ಗೆಲುವು ಕೈಗೂಡಲಿಲ್ಲ.

ಪಂಜಾಬ್ ತಂಡದ ಬೌಲಿಂಗ್ ಚೆನ್ನಾಗಿತ್ತು. ಮೊಹಮ್ಮದ್ ಶಮಿ ಮತ್ತು ಮೊಯಿಸೆಸ್ ಹೆನ್ರಿಕ್ಸ್ ತಲಾ ಮೂರು ವಿಕೆಟ್ ಗಳಿಸಿದರು. ಆದರೆ, ಮಧ್ಯಮಕ್ರಮಾಂಕದ ಬ್ಯಾಟಿಂಗ್ ವೈಫಲ್ಯ ತಂಡವನ್ನು ಕಾಡಿತು.

12 ಪಂದ್ಯಗಳನ್ನಾಡಿರುವ ಆರ್‌ಸಿಬಿಯು 16 ಅಂಕಗಳನ್ನು ಗಳಿಸಿದೆ. ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಇನ್ನೂ ಎರಡು ಪಂದ್ಯಗಳನ್ನು ಆಡಲಿದೆ. 10 ಅಂಕ ಗಳಿಸಿರುವ ಪಂಜಾಬ್ ತಂಡವು ಇನ್ನೊಂದು ಪಂದ್ಯವನ್ನು ಆಡಬೇಕಿದೆ.

ಮುಖ್ಯಾಂಶಗಳು
- ಸತತ ಮೂರು ಪಂದ್ಯಗಳಲ್ಲಿ ಮ್ಯಾಕ್ಸ್‌ವೆಲ್ ಅರ್ಧಶತಕ
- ಯಜುವೇಂದ್ರ ಚಾಹಲ್‌ಗೆ ಮೂರು ವಿಕೆಟ್
- ಮಯಂಕ್ ಅಗರವಾಲ್ ಆಕರ್ಷಕ ಅರ್ಧಶತಕ

ಅರ್ಧಶತಕ ಗಳಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 7ಕ್ಕೆ 164 (20 ಓವರ್)
ಕೊಹ್ಲಿ ಬಿ ಹೆನ್ರಿಕ್ಸ್ 25 (24ಎ, 4X2, 6X1), ದೇವದತ್ತ ಸಿ ರಾಹುಲ್ ಬಿ ಹೆನ್ರಿಕ್ಸ್ 40 (38ಎ, 4X4, 6X2), ಕ್ರಿಸ್ಟಿಯನ್ ಸಿ ಖಾನ್ ಬಿ ಹೆನ್ರಿಕ್ಸ್ 0 (1ಎ), ಮ್ಯಾಕ್ಸ್‌ವೆಲ್ ಸಿ ಖಾನ್ ಬಿ ಶಮಿ 57 (33ಎ, 4X3, 6X4), ಡಿವಿಲಿಯರ್ಸ್ ರನೌಟ್ (ಖಾನ್) 23 (18ಎ, 4X1, 6X2), ಶಹಬಾಜ್ ಬಿ ಶಮಿ 8 (4ಎ, 6X1), ಭರತ್ ಔಟಾಗದೆ 0, ಗಾರ್ಟನ್ ಬಿ ಶಮಿ 0 (1ಎ), ಹರ್ಷಲ್ ಔಟಾಗದೆ 1 (1ಎ).
ಇತರೆ (ಲೆಗ್‌ಬೈ 5, ವೈಡ್ 5) 10
ವಿಕೆಟ್ ಪತನ: 1–68 (ವಿರಾಟ್ ಕೊಹ್ಲಿ, 9.4), 2–68 (ಡ್ಯಾನ್ ಕ್ರಿಸ್ಟಿಯನ್, 9.5), 3–73 (ದೇವದತ್ತ ಪಡಿಕ್ಕಲ್, 11.4), 4–146 (ಎಬಿ ಡಿವಿಲಿಯರ್ಸ್, 18.2), 5–117 (ಗ್ಲೆನ್ ಮ್ಯಾಕ್ಸ್‌ವೆಲ್, 19.2), 6–163 (ಶಹಬಾಜ್ ಅಹಮದ್, 19.4), 7–163 (ಜಾರ್ಜ್ ಗಾರ್ಟನ್, 19.5)
ಬೌಲಿಂಗ್: ಏಡನ್ ಮರ್ಕರಮ್ 1–0–5–0, ಮೊಹಮ್ಮದ್ ಶಮಿ 4–0–39–3, ಅರ್ಷದೀಪ್ ಸಿಂಗ್ 3–0–42–0, ರವಿ ಬಿಷ್ಣೋಯಿ 4–0–35–0, ಹರ್‌ಪ್ರೀತ್ ಬ್ರಾರ್ 4–0–26–0, ಮೊಯಿಸೆಸ್ ಹೆನ್ರಿಕ್ಸ್ 4–0–12–3.

ಪಂಜಾಬ್ ಕಿಂಗ್ಸ್ 6ಕ್ಕೆ 158 (20 ಓವರ್)
ರಾಹುಲ್ ಸಿ ಹರ್ಷಲ್ ಬಿ ಶಹಬಾಜ್ 39 (35ಎ, 4X1, 6X2), ಮಯಂಕ್ ಸಿ ಶಮಿ ಬಿ ಚಾಹಲ್ 57 (42ಎ, 4X6, 6X2), ಪೂರನ್ ಸಿ ದೇವದತ್ತ ಬಿ ಚಾಹಲ್ 3 (7ಎ), ಮರ್ಕರಮ್ ಸಿ ಕ್ರಿಸ್ಟಿಯನ್ ಬಿ ಗಾರ್ಟನ್ 20 (14ಎ, 4X2, 6X1), ಸರ್ಫರಾಜ್ ಖಾನ್ ಬಿ ಚಾಹಲ್ 0 (1ಎ), ಶಾರೂಕ್ ರನೌಟ್ (ಪಟೇಲ್) 16 (11ಎ, 4X1, 6X1), ಹೆನ್ರಿಕ್ಸ್ ಔಟಾಗದೆ 12 (9ಎ, 6X1), ಹರ್‌ಪ್ರೀತ್ ಔಟಾಗದೆ 3 (2ಎ).
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 5) 8
ವಿಕೆಟ್ ಪತನ: 1–91 (ಕೆ.ಎಲ್.ರಾಹುಲ್, 10.5), 2–99 (ನಿಕೋಲಸ್ ಪೂರನ್, 12.5), 3–114 (ಮಯಂಕ್ ಅಗರವಾಲ್, 15.2), 4–121 (ಸರ್ಫರಾಜ್ ಖಾನ್, 15.5), 5–127 (ಏಡನ್ ಮರ್ಕರಮ್, 16.5), 6–146 (ಶಾರೂಕ್ ಖಾನ್, 19.1)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–33–0, ಜಾರ್ಜ್ ಗಾರ್ಟನ್ 4–0–27–1, ಶಹಬಾಜ್ ಅಹಮದ್ 3–0–29–1, ಹರ್ಷಲ್ ಪಟೇಲ್ 4–0–27–0, ಯಜುವೇಂದ್ರ ಚಾಹಲ್ 4–0–29–3, ಡ್ಯಾನ್ ಕ್ರಿಸ್ಟಿಯನ್ 1–0–11–0

ಫಲಿತಾಂಶ: ರಾಯಲ್ ಚಾಲೆಂಜರ್ಸ್‌ಗೆ 6 ರನ್‌ಗಳ ಜಯ

ಕೋಲ್ಕತ್ತಕ್ಕೆ ಸುಲಭ ಜಯ

ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ 10ನೇ ಸೋಲು

ದುಬೈ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕಿದ ಕೋಲ್ಕತ್ತ ನೈಟ್ ರೈಡರ್ಸ್ ಸುಲಭ ಜಯ ಸಾಧಿಸಿತು.

ಭಾನುವಾರ ರಾತ್ರಿ 116 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತ ಇನ್ನೂ ಎರಡು ಎಸೆತ ಬಾಕಿ ಇರುವಾಗ ನಾಲ್ಕು ವಿಕೆಟ್ ಕಳೆದುಕೊಂಡು 119 ರನ್ ಗಳಿಸಿತು.

ಭರವಸೆಯ ಬ್ಯಾಟರ್‌ಗಳಾದ ವೆಂಕಟೇಶ ಅಯ್ಯರ್ ಮತ್ತು ರಾಹುಲ್ ತ್ರಿಪಾಠಿ ಬೇಗನೇ ಔಟಾಗಿದ್ದರು. ಆದರೆ ಶುಭಮನ್ ಗಿಲ್ ಅವರು ಅಮೋಘ ಆಟದ ಮೂಲಕ ಆಸರೆಯಾದರು. ನಿತೀಶ್ ರಾಣಾ ಕೂಡ ಉಪಯುಕ್ತ ಬ್ಯಾಟಿಂಗ್ ಮಾಡಿದರು.

ಸನ್‌ರೈಸರ್ಸ್‌ಗೆ ಇದು 10ನೇ ಸೋಲು. ಈ ವರೆಗೆ ಎರಡು ಪಂದ್ಯ ಗಳನ್ನು ಮಾತ್ರ ಈ ತಂಡ ಗೆದ್ದುಕೊಂಡಿದೆ.

ಕುಸಿದ ಹೈದರಾಬಾದ್: ಟಾಸ್ ಗೆದ್ದ ಸನ್‌ರೈಸರ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ತಂಡಕ್ಕೆ ಎಂಟು ವಿಕೆಟ್ ಕಳೆದುಕೊಂಡು 115 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಇನಿಂಗ್ಸ್‌ನ ಮೊದಲ ಓವರ್ ಬೌಲಿಂಗ್ ಮಾಡಿದ ಟಿಮ್ ಸೌಥಿಯ ಎರಡನೇ ಎಸೆತದಲ್ಲಿಯೇ ವೃದ್ಧಿಮಾನ್ ಸಹಾ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ನಾಲ್ಕನೇ ಓವರ್‌ನಲ್ಲಿ ಶಿವಂ ಮಾವಿ ಎಸೆತವನ್ನು ಬೌಂಡರಿ ದಾಟಿಸಲು ಪ್ರಯತ್ನಿಸಿದ ಜೇಸನ್ ರಾಯ್ ಕ್ಯಾಚ್ ಪಡೆದ ಸೌಥಿ ಸಂಭ್ರಮಿಸಿದರು.

ನಾಯಕ ಕೇನ್ ವಿಲಿಯಮ್ಸನ್ (26) ಮತ್ತು ಪ್ರಿಯಂ ಗರ್ಗ್ (21; 31ಎ) ತಾಳ್ಮೆಯಿಂದ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು.

ಆದರೆ, ಶಕೀಬ್ ಅಲ್ ಹಸನ್ ಚುರುಕಿನ ಫೀಲ್ಡಿಂಗ್ ನಿಂದಾಗಿ ವಿಲಿಯಮ್ಸನ್ ರನ್‌ಔಟ್ ಆದಾಗ ತಂಡದ ಮೊತ್ತ 40 ರನ್‌ಗಳ ಗಡಿ ಕೂಡ ಮುಟ್ಟಿರಲಿಲ್ಲ.

ಅಭಿಷೇಕ್ ಶರ್ಮಾ ಅವರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಆದರೆ, ಅಬ್ದುಲ್ ಸಮದ್ (25; 18ಎ, 3ಸಿಕ್ಸರ್) ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿದರು. ಅಮೋಘ ಡ್ರೈವ್ ಮತ್ತು ಪುಲ್ ಶಾಟ್‌ಗಳ ಮೂಲಕ ಮಿಂಚಿದ ಸಮದ್ ಅವರಿಂದಾಗಿ ತಂಡವು 100 ರನ್‌ಗಳ ಗಡಿ ದಾಟಲು ಸಾಧ್ಯವಾಯಿತು.

ಅರ್ಧಶತಕ ಗಳಿಸಿದ ಶುಭಮನ್ ಗಿಲ್ ಅವರನ್ನು ಸಹ ಆಟಗಾರ ನಿತೀಶ್ ರಾಣಾ ಅಭಿನಂದಿಸಿದರು –ಪಿಟಿಐ ಚಿತ್ರ

18ನೇ ಓವರ್‌ನಲ್ಲಿ ಸಮದ್ ವಿಕೆಟ್ ಗಳಿಸಿದ ಸೌಥಿ ಸನ್‌ರೈಸರ್ಸ್ ತಂಡದ ರನ್ ಗಳಿಕೆಗೆ ಅಡ್ಡಗಾಲು ಹಾಕಿದರು. ಇನ್ನೊಂದೆಡೆ ಚಕ್ರವರ್ತಿ ಬೌಲಿಂಗ್‌ನಲ್ಲಿ ಪ್ರಿಯಂ ಗರ್ಗ್ ಮತ್ತು ಜೇಸನ್ ಹೋಲ್ಡರ್ ನಿರ್ಗಮಿಸಿದರು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 115 (20 ಓವರ್)
ಜೇಸನ್ ರಾಯ್ ಸಿ ಸೌಥಿ ಬಿ ಮಾವಿ 10 (13ಎ, 4X2), ವೃದ್ಧಿಮಾನ್ ಎಲ್‌ಬಿಡಬ್ಲ್ಯು ಬಿ ಸೌಥಿ 0 (1ಎ), ವಿಲಿಯಮ್ಸನ್ ರನೌಟ್ (ಶಕೀಬ್) 26 (21ಎ, 4X1), ಪ್ರಿಯಂ ಸಿ ತ್ರಿಪಾಠಿ ಬಿ ವರುಣ್ 21 (31ಎ, 6X1), ಅಭಿಷೇಕ್ ಸ್ಟಂಪ್ಡ್ ಕಾರ್ತಿಕ್ ಬಿ ಶಕೀಬ್ 6 (10ಎ), ಸಮದ್ ಸಿ ಶುಭಮನ್ ಬಿ ಸೌಥಿ 25 (18ಎ, 6X3), ಹೋಲ್ಡರ್ ಸಿ ವೆಂಕಟೇಶ್ ಬಿ ವರುಣ್ 2 (9ಎ), ರಶೀದ್ ಸಿ ವೆಂಕಟೇಶ್ ಬಿ ಮಾವಿ 8 (6ಎ, 4X1) ಭುವನೇಶ್ವರ್ ಔಟಾಗದೆ 7 (7ಎ), ಸಿದ್ಧಾರ್ಥ್ ಔಟಾಗದೆ 7 (5ಎ, 4X1)
ಇತರೆ (ಲೆಗ್‌ಬೈ 2, ನೋಬಾಲ್ 1) 3
ವಿಕೆಟ್ ಪತನ: ವಿಕೆಟ್ ಪತನ: 1–1 (ವೃದ್ಧಿಮಾನ್ ಸಹಾ, 0.2), 2–16 (ಜೇಸನ್ ರಾಯ್, 3.4), 3–38 (ಕೇನ್ ವಿಲಿಯಮ್ಸನ್, 6.5), 4–51 (ಅಭಿಷೇಕ್ ಶರ್ಮಾ, 10.1), 5–70 (ಪ್ರಿಯಂ ಗರ್ಗ್, 14.2), 6–80 (ಜೇಸನ್ ಹೋಲ್ಡರ್, 16.1), 7–95 (ಅಬ್ದುಲ್ ಸಮದ್, 17.2), 8–103 (ರಶೀದ್ ಖಾನ್, 18.2)
ಬೌಲಿಂಗ್: ಟಿಮ್ ಸೌಥಿ 4–0–26–2, ಶಿವಂ ಮಾವಿ 4–0–29–2, ವರುಣ್ ಚಕ್ರವರ್ತಿ 4–0–26–2, ಶಕೀಬ್ ಅಲ್ ಹಸನ್ 4–0–20–1, ಸುನಿಲ್ ನಾರಾಯಣ್ 4–0–12–0

ಕೋಲ್ಕತ್ತ ನೈಟ್ ರೈಡರ್ಸ್ 4ಕ್ಕೆ 119 (19.4 ಓವರ್)
ಶುಭಮನ್ ಸಿ ಹೋಲ್ಡರ್ ಬಿ ಸಿದ್ಧಾರ್ಥ್ 57 (51ಎ, 4X10), ವೆಂಕಟೇಶ್ ಸಿ ವಿಲಿಯಮ್ಸನ್ ಬಿ ಹೋಲ್ಡರ್ 8 (14ಎ), ತ್ರಿಪಾಠಿ ಸಿ ಅಭಿಷೇಕ್ ಬಿ ರಶೀದ್ 7 (6ಎ, 4X1), ನಿತೀಶ್ ಸಿ ಸಹಾ ಬಿ ಹೋಲ್ಡರ್ 25 (33ಎ, 4X3), ಕಾರ್ತಿಕ್ ಔಟಾಗದೆ 18 (12ಎ, 4X3), ಇಯಾನ್ ಮಾರ್ಗನ್ ಔಟಾಗದೆ 2 (2ಎ).
ಇತರೆ (ವೈಡ್ 2) 2
ವಿಕೆಟ್ ಪತನ: 1–23 (ವೆಂಕಟೇಶ್ ಅಯ್ಯರ್, 4.4), 2–38 (ರಾಹುಲ್ ತ್ರಿಪಾಠಿ, 6.4), 3–93 (ಶುಭಮನ್ ಗಿಲ್, 16.3), 4–106 (ನಿತೀಶ್ ರಾಣಾ, 17.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–20–0, ಜೇಸನ್ ಹೋಲ್ಡರ್ 4–0–32–2, ಉಮ್ರಾನ್ ಮಲಿಕ್ 4–0–27–0, ರಶೀದ್ ಖಾನ್ 4–0–23–1, ಸಿದ್ಧಾರ್ಥ್ ಕೌಲ್ 3.4–0–17–1.

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 6 ವಿಕೆಟ್‌ಗಳ ಜಯ

ಆಸ್ಟ್ರೇಲಿಯಾ ಎದುರಿನ ಪಿಂಕ್ ಬಾಲ್ ಟೆಸ್ಟ್ ಪಂದ್ಯ

ಡ್ರಾ ಪಂದ್ಯದಲ್ಲಿ ಬೆಳಗಿದ ಭಾರತ

ಗೋಲ್ಡ್‌ಕೋಸ್ಟ್ (ಪಿಟಿಐ): ಭಾರತ ಹಾಗೂ ಆಸ್ಟ್ರೇಲಿಯಾ ಮಹಿಳೆಯರ ನಡುವಣ ಪಿಂಕ್‌ಬಾಲ್ ಟೆಸ್ಟ್ ನಿರೀಕ್ಷೆಯಂತೆ ಡ್ರಾನಲ್ಲಿ ಅಂತ್ಯವಾಯಿತು. ಆದರೆ ಪ್ರತಿಕೂಲ ಹವಾಮಾನ ಕಾಡಿದ ಪಂದ್ಯದುದ್ದಕ್ಕೂ ಭಾರತ ಪ್ರಾಬಲ್ಯ ಮೆರೆದದ್ದು ಸಾಬೀತಾಯಿತು.

ಶನಿವಾರ ಮೊದಲ ಇನಿಂಗ್ಸ್‌ನಲ್ಲಿ 143 ರನ್‌ಗೆ ಮೂರು ವಿಕೆಟ್‌ಗ ಕಳೆದುಕೊಂಡಿದ್ದ ಆಸ್ಟ್ರೇಲಿಯಾ ಆಟಗಾರ್ತಿಯರು ನಾಲ್ಕನೇ ಮತ್ತು ಪಂದ್ಯದ ಕೊನೆಯ ದಿನವಾದ ಭಾನುವಾರ ಆತ್ಮವಿಶ್ವಾಸದಿಂದಲೇ ಬ್ಯಾಟಿಂಗ್ ಆರಂಭಿಸಿದರು. ಎಲಿಸ್ ಪೆರಿ (ಔಟಾಗದೆ 68) ಹಾಗೂ ಆ್ಯಶ್ಲಿ ಗಾರ್ಡನರ್ (51) ಅವರಿಂದ 89 ರನ್‌ಗಳ ಜೊತೆಯಾಟ ಮೂಡಿಬಂತು. ಬಳಿಕ ಭಾರತದ ವೇಗಿಗಳು ಮಿಂಚಿದರು.

ದೀಪ್ತಿ ಶರ್ಮಾ (36ಕ್ಕೆ 2) ಹಾಗೂ ಮೇಘನಾ ಸಿಂಗ್ (54ಕ್ಕೆ 2) ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಕಾಡಿದರು. ಮೇಘನಾ ಅವರ ಔಟ್‌ಸ್ವಿಂಗರ್ ಎಸೆತಗಳು ಅದ್ಭುತವಾಗಿದ್ದವು.

208 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಸುಸ್ಥಿತಿಯಲ್ಲಿದ್ದ ಆತಿಥೇಯ ತಂಡ 241 ರನ್ ಆಗುವಷ್ಟರಲ್ಲಿ ಒಂಬತ್ತು ವಿಕೆಟ್‌ಗಳನ್ನು ಕೈಚೆಲ್ಲಿತು. ಈ ಹಂತದಲ್ಲಿ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಇನಿಂಗ್ಸ್ ಡಿಕ್ಲೇರ್ ಮಾಡಿಕೊಳ್ಳುವ ಅಚ್ಚರಿಯ ನಿರ್ಧಾರ ತಳೆದರು.

ಮೊದಲ ಇನಿಂಗ್ಸ್‌ನಲ್ಲಿ 377 ರನ್ ಗಳಿಸಿದ್ದ ಭಾರತ, ಎರಡನೇ ಇನಿಂಗ್ಸ್‌ನಲ್ಲಿ 35 ಓವರ್‌ಗಳನ್ನು ಆಡಿ 3 ವಿಕೆಟ್ 135 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಶಫಾಲಿ ವರ್ಮಾ 91 ಎಸೆತಗಳಲ್ಲಿ 52 ರನ್ ಗಳಿಸಿದರೆ, ಪೂನಂ 62 ಎಸೆತಗಳಲ್ಲಿ ಔಟಾಗದೆ 41 ರನ್ ಕಲೆಹಾಕಿದರು.

ಎರಡನೇ ಇನಿಂಗ್ಸ್‌ನಲ್ಲಿ ಚಹಾ ವಿರಾಮದ ವೇಳೆಗೆ ಭಾರತ 106ಕ್ಕೆ ಎರಡು ವಿಕೆಟ್ ಕಳೆದುಕೊಂಡಿತ್ತು. ಮಂದಾನ (31, 48 ಎಸೆತ) ಅವರು ಆ್ಯಶ್ಲಿ ಗಾರ್ಡನರ್ ಹಿಡಿತಕ್ಕೆ ಪಡೆದ ಸೊಗಸಾದ ಕ್ಯಾಚ್‌ಗೆ ವಿಕೆಟ್ ಒಪ್ಪಿಸಿದರು. ಯಸ್ತಿಕಾ ಭಾಟಿಯಾ ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದು ಬ್ಯಾಟಿಂಗ್‌ಗೆ ಬಂದರೂ ಮೂರು ರನ್ ಗಳಿಸುವಲ್ಲಿ ಮಾತ್ರ ಸಾಧ್ಯವಾಯಿತು.

ಆಸ್ಟ್ರೇಲಿಯಾಗೆ ಗೆಲುವು ಸಾಧಿಸಲು ಕೇವಲ 32 ಓವರ್‌ಗಳಲ್ಲಿ ಭಾರತ 272 ರನ್ ಗಳಿಸುವ ಸವಾಲೊಡ್ಡಿತು.

ಅಲಿಸಾ ಹೀಲಿ ಮತ್ತು ಬೇಥ್ ಮೂನಿಯನ್ನು ಬೇಗ ಕಳೆದುಕೊಂಡ ಆಸ್ಟ್ರೇಲಿಯಾಕ್ಕೆ ಗುರಿ ತಲುಪುವುದು ಕಷ್ಟಸಾಧ್ಯವಾಗಿತ್ತು. ಆಸ್ಟ್ರೇಲಿಯಾ 15 ಓವರ್‌ಗಳಲ್ಲಿ ಎರಡು ವಿಕೆಟ್ ಕಳೆದುಕೊಂಡು 36 ರನ್ ಗಳಿಸಿದ ವೇಳೆ ಉಭಯ ತಂಡಗಳು ಡ್ರಾಕ್ಕೆ ಸಮ್ಮತಿಸಿದವು.

ಬಹು ಮಾದರಿಯ ಸರಣಿಯ ನಿಯಮಗಳ ಪ್ರಕಾರ, ಎರಡೂ ತಂಡಗಳು ತಲಾ ಎರಡು ಅಂಕಗಳಿಗೆ ತೃಪ್ತಿಪಟ್ಟವು. ಪಂದ್ಯದ ಮೊದಲ ಎರಡು ದಿನಗಳಲ್ಲಿ ಪ್ರತಿಕೂಲ ಹವಾಮಾನದ ಕಾರಣ 80ಕ್ಕೂ ಹೆಚ್ಚು ಓವರ್‌ಗಳನ್ನು ಆಡಿಸಲಾಗಿರಲಿಲ್ಲ.

ಭಾರತದ ಸ್ಮೃತಿ ಮಂದಾನ ಶತಕ ದಾಖಲಿಸಿದ್ದು ಪಂದ್ಯದ ಅವಿಸ್ಮರಣೀಯ ಕ್ಷಣಗಳಲ್ಲಿ ಒಂದು. ಆಸ್ಟ್ರೇಲಿಯಾದ ವೇಗಿಗಳಿಗಿಂತ ಮಿಥಾಲಿ ರಾಜ್ ಬಳಗದವರು ಹೆಚ್ಚು ಪರಿಣಾಮಕಾರಿ ಎನಿಸಿದರು.

ಶಫಾಲಿ ವರ್ಮಾ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 8ಕ್ಕೆ 377 ಡಿಕ್ಲೇರ್ (145 ಓವರ್)
ಆಸ್ಟ್ರೇಲಿಯಾ (ಮೊದಲ ಇನಿಂಗ್ಸ್) 9ಕ್ಕೆ 241 ಡಿಕ್ಲೇರ್ (96.4 ಓವರ್)
(ಶನಿವಾರ 60 ಓವರ್‌ಗಳಲ್ಲಿ 4ಕ್ಕೆ 143)
ಪೆರಿ ಔಟಾಗದೆ 68 (203 ಎ, 4x9), ಆ್ಯಶ್ಲಿ ಸಿ ಮಿಥಾಲಿ ಬಿ ದೀಪ್ತಿ 51 (86 ಎ, 4x6), ಸೂಥರ್ಲೆಂಡ್ ಸಿ ತಾನಿಯಾ ಬಿ ಮೇಘನಾ 3 (20ಎ), ಸೋಫಿ ಎಲ್‌ಬಿಡಬ್ಲ್ಯು ಮೇಘನಾ 2 (14ಎ), ಜಾರ್ಜಿಯಾ ಸಿ ತಾನಿಯಾ ಬಿ ವಸ್ತ್ರಕಾರ್ 2 (11ಎ), ಡಾರ್ಸಿ ಎಲ್‌ಬಿಡಬ್ಲ್ಯು ದೀಪ್ತಿ 8 (18ಎ, 4X2), ಸ್ಟೆಲ್ಲಾ ಔಟಾಗದೆ 0 (1ಎ)
ಇತರೆ (ಲೆಗ್‌ಬೈ 6, ನೋಬಾಲ್ 1, ವೈಡ್ 1) 8
ವಿಕೆಟ್ ಪತನ: 5–208 (ಆ್ಯಶ್ಲಿ ಗಾರ್ಡನರ್, 78.3), 6–216 (ಅನ್ನಾಬೆಲ್ ಸೂಥರ್ಲೆಂಡ್ 83.5), 7–220 (ಸೋಫಿ ಮೊಲಿನೆಕ್ಸ್, 87.5), 8–223 (ಜಾರ್ಜಿಯಾ ವಾರೆಹಮ್, 90.5), 9–240 (ಡಾರ್ಸಿ ಬ್ರೌನ್, 95.6)
ಬೌಲಿಂಗ್: ಜೂಲನ್ ಗೋಸ್ವಾಮಿ 22–7–33–2, ಮೇಘನಾ ಸಿಂಗ್ 19–2–54–2, ಪೂಜಾ ವಸ್ತ್ರಕಾರ್ 21.4–6–49–3, ರಾಜೇಶ್ವರಿ ಗಾಯಕವಾಡ್ 18–1–63–0, ದೀಪ್ತಿ ಶರ್ಮಾ 16–6–32–2
ಭಾರತ (ಎರಡನೇ ಇನಿಂಗ್ಸ್) 3ಕ್ಕೆ 135 ಡಿಕ್ಲೇರ್ (37 ಓವರ್)
ಶಫಾಲಿ ಎಲ್‌ಬಿಡಬ್ಲ್ಯು ಬಿ ವಾರೆಹಮ್ 52 (91ಎ, 4X6), ಮಂದಾನ ಸಿ ಗಾರ್ಡನರ್ ಬಿ ಮೊಲಿನೆಕ್ಸ್ 31 (48ಎ, 4X6), ಯಸ್ತಿಕಾ ಬಿ ಆ್ಯಶ್ಲಿ 3 (12ಎ), ಪೂನಂ ಔಟಾಗದೆ 41 (62ಎ, 4X6), ದೀಪ್ತಿ ಔಟಾಗದೆ 3 (9ಎ)
ಇತರೆ (ಬೈ 5) 5
ವಿಕೆಟ್ ಪತನ: 1–70 (ಸ್ಮೃತಿ ಮಂದಾನ, 17.5), 2–74 (ಯಸ್ತಿಕಾ ಭಾಟಿಯಾ, 20.3), 3–122 (ಶಫಾಲಿ ವರ್ಮಾ, 33.2)
ಬೌಲಿಂಗ್: ಎಲಿಸ್ ಪೆರಿ 5–1–14–0, ಡಾರ್ಸಿ ಬ್ರೌನ್ 4–0–15–0, ಸ್ಟೆಲ್ಲಾ ಕ್ಯಾಂಪ್‌ಬೆಲ್ 4–1–19–0, ತಾಹಿಲಾ ಮೆಗ್ರಾ 2–0–6–0, ಅನ್ನಾಬೆಲ್ ಸೂಥರ್ಲೆಂಡ್ 2–0–10–0, ಸೋಫಿ ಮೊಲಿನೆಕ್ಸ್ 7–0–23–1, ಆ್ಯಶ್ಲಿ ಗಾರ್ಡನರ್ 10–1–31–1, ಜಾರ್ಜಿಯಾ ವಾರೆಹಮ್ 3–0–12–1
ಆಸ್ಟ್ರೇಲಿಯಾ (ಎರಡನೇ ಇನಿಂಗ್ಸ್) 2ಕ್ಕೆ 36 (15 ಓವರ್)
ಅಲೀಸಾ ಬಿ ಗೋಸ್ವಾಮಿ 6 (5ಎ, 4X1), ಮೂನಿ ಸಿ ಗಾಯಕವಾಡ್ ಬಿ ವಸ್ತ್ರಕಾರ್ 11 (28ಎ, 4X1), ಲ್ಯಾನಿಂಗ್ ಔಟಾಗದೆ 17 (43ಎ, 4X2), ಪೆರಿ ಔಟಾಗದೆ 1 (14ಎ)
ಇತರೆ (ಲೆಗ್‌ಬೈ 1) 1
ವಿಕೆಟ್ ಪತನ: 1–8 (ಅಲಿಸಾ ಹೀಲಿ, 2.3), 2–28 (ಬೇಥ್ ಮೂನಿ, 9.5).
ಬೌಲಿಂಗ್: ಜೂಲನ್ ಗೋಸ್ವಾಮಿ 6–2–8–1, ಮೇಘನಾ ಸಿಂಗ್ 2–0–12–0, ಪೂಜಾ ವಸ್ತ್ರಕಾರ್ 5–1–13–1, ರಾಜೇಶ್ವರಿ ಗಾಯಕವಾಡ್ 2–1–2–0.

ಫಲಿತಾಂಶ: ಪಂದ್ಯಡ್ರಾ; ಪಂದ್ಯಶ್ರೇಷ್ಠ ಆಟಗಾರ್ತಿ: ಸ್ಮೃತಿ

ಅಗ್ರಸ್ಥಾನಕ್ಕಾಗಿ 'ಗುರು–ಶಿಷ್ಯ' ಪೈಪೋಟಿ

ದುಬೈ (ಪಿಟಿಐ): ಮಹೇಂದ್ರಸಿಂಗ್ ಧೋನಿಯ ಮತ್ತು ಅವರ 'ಶಿಷ್ಯ' ರಿಷಭ್ ಪಂತ್ ಸೋಮವಾರ ಮುಖಾಮುಖಿಯಾಗಲಿದ್ದಾರೆ.

ಅವರಿಬ್ಬರ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಪಾಯಿಂಟ್ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ. ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವ ಉಭಯ ತಂಡಗಳಿಗೆ ಒತ್ತಡ ಇಲ್ಲ.

ಯುಎಇಯಲ್ಲಿ ನಡೆಯುತ್ತಿರುವ ಎರಡನೇ ಹಂತದ ಟೂರ್ನಿಯಲ್ಲಿ ಉಭಯ ತಂಡಗಳೂ ತಲಾ ಒಂದು ಪಂದ್ಯದಲ್ಲಿ ಸೋತಿವೆ. ಚೆನ್ನೈ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಋತುರಾಜ್ ಗಾಯಕವಾಡ್ ಶನಿವಾರದ ಪಂದ್ಯದಲ್ಲಿ ಅಜೇಯ ಶತಕ ಬಾರಿಸಿದ್ದರು. ಟೂರ್ನಿಯಲ್ಲಿ ಒಟ್ಟು 508 ರನ್ ಗಳಿಸಿ ಆರೆಂಜ್ ಕ್ಯಾಪ್ ಧರಿಸಿದ್ದಾರೆ. ಫಫ್ ಡುಪ್ಲೆಸಿ ಜೊತೆಗೆ ಉತ್ತಮ ಆರಂಭವನ್ನೂ ಋತುರಾಜ್ ನೀಡು ತ್ತಿದ್ದಾರೆ. ಮೋಯಿನ್ ಅಲಿ, ಅಂಬಟಿ ರಾಯುಡು ಮತ್ತು ರವೀಂದ್ರ ಜಡೇಜ ಮತ್ತು ಧೋನಿಯವರಿಂದಾಗಿ ಮಧ್ಯಮಕ್ರಮಾಂಕವು ಬಲಿಷ್ಠವಾಗಿದೆ.

ಬೌಲಿಂಗ್‌ನಲ್ಲಿ ಡ್ವೇನ್ ಬ್ರಾವೊ, ಶಾರ್ದೂಲ್ ಠಾಕೂರ್ ಮತ್ತು ಜಡೇಜ ಅವರು ಎದುರಾಳಿ ಬ್ಯಾಟಿಂಗ್ ಪಡೆಯನ್ನು ಕಾಡುವುದನ್ನು ಮುಂದು ವರಿಸಿದರೆ ಚೆನ್ನೈಗೆ ಜಯ ಸುಲಭವಾಗಬಹುದು. ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ಜಯಭೇರಿ ಬಾರಿಸಿರುವ ಡೆಲ್ಲಿ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ. ಹೋದ ವರ್ಷ ರನ್ನರ್ಸ್ ಅಪ್ ಆಗಿದ್ದ ಡೆಲ್ಲಿ ಈ ಬಾರಿ ಪ್ರಶಸ್ತಿ ಮೇಲೆ ಕಣ್ಣಿದೆ. ಅಗ್ರಕ್ರಮಾಂಕದಲ್ಲಿ ಶಿಖರ್ ಧವನ್, ಸ್ಟೀವ್ ಸ್ಮಿತ್ ಮತ್ತು ಪೃಥ್ವಿ ಶಾ ತಮ್ಮ ಲಯಕ್ಕೆ ಮರಳಿದರೆ ತಂಡ ಮತ್ತಷ್ಟು ಬಲಿಷ್ಠವಾಗುತ್ತದೆ.

ಕಳೆದ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಕೂಡ ಮಿಂಚಿದ್ದರು. ಅದರಿಂದಾಗಿ ರಿಷಭ್ ವಿಶ್ವಾಸ ಹೆಚ್ಚಿದೆ. ಬೌಲಿಂಗ್‌ನಲ್ಲಿ ಅಶ್ವಿನ್, ಅಕ್ಷರ್ ಪಟೇಲ್ ಮತ್ತು ಆವೇಶ್ ಖಾನ್ ಅಮೋಘ ಫಾರ್ಮ್‌ನಲ್ಲಿದ್ದಾರೆ. ಇದರಿಂದಾಗಿ ಎರಡೂ ತಂಡಗಳ ನಡುವೆ ತುರುಸಿನ ಪೈಪೋಟಿ ನಡೆಯುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7.30ರಿಂದ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	528
ಋತುರಾಜ್	ಚೆನ್ನೈ	508
ಸಂಜು ಸ್ಯಾಮ್ಸನ್	ರಾಜಸ್ಥಾನ	480

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	21
ಶಮಿ	ಪಂಜಾಬ್	18

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	12	9	3	00	00	18
ಡೆಲ್ಲಿ ಕ್ಯಾಪಿಟಲ್ಸ್	12	9	3	00	00	18
ಬೆಂಗಳೂರು	12	8	4	00	00	16
ಕೋಲ್ಕತ್ತ ನೈಟ್ ರೈಡರ್ಸ್	13	6	7	00	00	12
ಪಂಜಾಬ್	13	5	8	00	00	10
ರಾಜಸ್ಥಾನ	12	5	7	00	00	10
ಮುಂಬೈ ಇಂಡಿಯನ್ಸ್	12	5	7	00	00	10
ಹೈದರಾಬಾದ್	12	2	10	00	00	4

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತ್ರೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಚೆಸ್: ವಿವಾನ್, ಪಲ್ಲವಿಗೆ ಪ್ರಶಸ್ತಿ

ಬೆಂಗಳೂರು: ವಿವಾನ್ ಸಚ್‌ದೇವ್ ಮತ್ತು ಪಲ್ಲವಿ ರಾಜೀವ್ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ 16 ವರ್ಷದೊಳಗಿನವರು ಮತ್ತು 10 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ವಿವಾನ್ ಒಟ್ಟು 47 ಪಾಯಿಂಟ್ ಗಳಿಸಿ ಮೊದಲಿಗರಾದರು. ಅಭಿನವ್ ವಿ 36 ಪಾಯಿಂಟ್ ಗಳಿಸಿ ಎರಡನೇ ಸ್ಥಾನ ಗಳಿಸಿದರು. ರಿಷಿಲ್ ಶ್ರೀವತ್ಸ (24 ಪಾಯಿಂಟ್ಸ್) ಮೂರನೇ ಸ್ಥಾನ ಗಳಿಸಿದರು. ಆರ್ಯನ್ ಸೂರ್ಯ ಮತ್ತು ಕೀರ್ತನ್ ಪುರೋಹಿತ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು.

ಪಲ್ಲವಿ 33 ಪಾಯಿಂಟ್‌ಗಳೊಂದಿಗೆ 10 ವರ್ಷದೊಳಗಿನ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದರು. 32 ಪಾಯಿಂಟ್ ಗಳಿಸಿದ ಸೂರಜ್ ಸಾಯಿ ಮತ್ತು 29 ಪಾಯಿಂಟ್ ಕಲೆ ಹಾಕಿದ ಆರಭಿ ಮಧುಕರ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ನಾಲ್ಕನೇ ಸ್ಥಾನ ಪಾವನ ರಾಜೀವ್ ಪಾಲಾದರೆ ಅಬೆಲ್ ಜೂಡಾ ಐದನೇ ಸ್ಥಾನ ಗಳಿಸಿದರು.

ರವಿಂದರ್‌ಗೆ ನಿರಾಸೆ

ಒಸ್ಲೊ, ನಾರ್ವೆ (ಪಿಟಿಐ): ಭಾರತದ ರವಿಂದರ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ 61 ಕೆಜಿ ವಿಭಾಗದ ಕಂಚಿನ ಪದಕದ ಸುತ್ತಿನಲ್ಲಿ ನಿರಾಸೆ ಅನುಭವಿಸಿದ್ದಾರೆ.

ರಿಪೆಜ್ ಸುತ್ತಿನ ಬೌಟ್‌ನಲ್ಲಿ ಬಲ್ಗೇರಿಯಾದ ಜಾರ್ಜಿ ವ್ಯಾಲೆಂಟಿನೊವ್ ವಂಗೆಲೊವ್ ಅವರನ್ನು ಮಣಿಸಿದ್ದ ರವಿಂದರ್ ಭಾನುವಾರ ರಾತ್ರಿ ನಡೆದ ಕಂಚಿನ ಪದಕದ ಸುತ್ತಿನಲ್ಲಿ ಅರ್ಮೇನಿಯಾದ ಅರ್ಸೆನ್ ವಿರುದ್ಧ ಸೋತು ಅಭಿಯಾನ ಮುಕ್ತಾಯಗೊಳಿಸಿದರು.

ಸ್ಯಾಫ್: ಭಾರತಕ್ಕೆ ಬಾಂಗ್ಲಾ ಸವಾಲು

ಮಾಲಿ, ಮಾಲ್ಡೀವ್ಸ್ (ಪಿಟಿಐ): ಏಳು ಬಾರಿಯ ಚಾಂಪಿಯನ್ ಭಾರತ ತಂಡವು ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಬಾಂಗ್ಲಾದೇಶದ ಸವಾಲಿಗೆ ಸಜ್ಜಾಗಿದೆ.

ಈವರೆಗೆ 12 ಆವೃತ್ತಿಗಳು ನಡೆದಿದ್ದು, ಈ ಬಾರಿ ಮಾಲ್ಡೀವ್ಸ್ ಟೂರ್ನಿಗೆ ಆತಿಥ್ಯ ವಹಿಸಿದೆ.

2022ರ ವಿಶ್ವಕಪ್ ಅರ್ಹತೆಗಾಗಿ ಕೋಲ್ಕತ್ತದಲ್ಲಿ ನಡೆದಿದ್ದ ಟೂರ್ನಿಯ ಮೊದಲ ಲೆಗ್‌ನಲ್ಲಿ ಬಾಂಗ್ಲಾದೇಶ ತಂಡವು ಸುನಿಲ್ ಚೆಟ್ರಿ ನಾಯಕತ್ವದ ಭಾರತದ ಎದುರು 1–1ರ ಡ್ರಾ ಸಾಧಿಸಿತ್ತು. ಆದರೆ ಎರಡನೇ ಲೆಗ್‌ನಲ್ಲಿ ಭಾರತ 2–0ಯಿಂದ ಗೆದ್ದಿತ್ತು. ಹೀಗಾಗಿ ಎದುರಾಳಿ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

ನೇಪಾಳ ಮತ್ತು ಬಾಂಗ್ಲಾದೇಶ ತಂಡಗಳು ಈಗಾಗಲೇ ಕ್ರಮವಾಗಿ ಮಾಲ್ಡೀವ್ಸ್ ಮತ್ತು ಶ್ರೀಲಂಕಾ ತಂಡಗಳನ್ನು 1–0ಯಿಂದ ಮಣಿಸಿವೆ.

ಪಂದ್ಯ ಆರಂಭ: ಸಂಜೆ 4.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಯೂರೊ ಸ್ಪೋರ್ಟ್

ಡ್ರ್ಯಾಗ್ ರೇಸಿಂಗ್: ಹೇಮಂತ್ ದಾಖಲೆ

ಚೆನ್ನೈ (ಪಿಟಿಐ): ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಏಳು ಬಾರಿ ಚಿನ್ನ ಗೆದ್ದಿರುವ ಕೊಡಗಿನ ಹೇಮಂತ್ ಮುದ್ದಪ್ಪ ಇಲ್ಲಿ ನಡೆಯುತ್ತಿರುವ ಎಂಎಸ್‌ಎಸ್‌ಸಿ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಡ್ರ್ಯಾಗ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ದಾಖಲೆ ನಿರ್ಮಿಸಿದರು.

ಎರಡನೇ ಸುತ್ತಿನ ಸ್ಪರ್ಧೆಯಲ್ಲಿ ಅವರು ಎರಡು ಚಿನ್ನ ಗೆಲ್ಲುವುದರೊಂದಿಗೆ ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. 4 ಸ್ಟ್ರೋಕ್ 850ರಿಂದ 1050 ಸಿಸಿ ಸೂಪರ್ ಸ್ಪೋರ್ಟ್ ಕ್ಲಾಸ್‌ನಲ್ಲಿ 2019ರಲ್ಲಿ ಅವರು ದಾಖಲೆ ಬರೆದಿದ್ದರು. 1051 ಸಿಸಿಗೂ ಮೇಲಿನ ವಿಭಾಗದ ದಾಖಲೆಯೂ ಅವರ ಹೆಸರಿನಲ್ಲಿದೆ. ಬೆಂಗಳೂರಿನಲ್ಲಿ ನೆಲೆಸಿರುವ 31 ವರ್ಷದ ಹೇಮಂತ್ ಅವರು ಮದ್ರಾಸ್ ಮೋಟರ್ ರೇಸ್ ಟ್ರ್ಯಾಕ್‌ನಲ್ಲಿ ಅವರು ತಾಸಿಗೆ 230 ಕಿಮೀ ವೇಗದಲ್ಲಿ ವಾಹನ ಮುನ್ನುಗ್ಗಿಸಿದರು.

ಮಿಂಚಿದ ಮನು: ನಾಲ್ಕು ಚಿನ್ನ ಗೆದ್ದ ಭಾರತ

ಲಿಮಾ, ಪೆರು (ಪಿಟಿಐ): ಮನು ಬಾಕರ್ ಗಳಿಸಿದ ಎರಡು ಚಿನ್ನದ ಪದಕಗಳೊಂದಿಗೆ ಭಾರತ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮೆರೆಯಿತು. ಪದಕಪಟ್ಟಿಯಲ್ಲಿ ಅಮೆರಿಕವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿತು.

ಭಾನುವಾರ ನಾಲ್ಕು ಚಿನ್ನದ ಪದಕ ಭಾರತದ ಪಾಲಾದವು. ಎರಡು ಬೆಳ್ಳಿ ಪದಕಗಳನ್ನು ದೇಶದ ಶೂಟರ್‌ಗಳು ತಮ್ಮದಾಗಿಸಿಕೊಂಡರು. 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದ ಪದಕದ ಸುತ್ತುಗಳಲ್ಲಿ ಭಾರತದ ಶೂಟರ್‌ಗಳು ಪ್ರಾಬಲ್ಯ ಸಾಧಿಸಿದರು. ಮಿಶ್ರ, ಮಹಿಳಾ ಮತ್ತು ಪುರುಷರ ತಂಡಗಳು ಅಲ್ಲದೆ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಪುರುಷರು ಚಿನ್ನಕ್ಕೆ ಗುರಿಯಿಟ್ಟರು.

ಮನು ಭಾಕರ್

ಭಾರತದ ಬಳಿ ಸದ್ಯ ತಲಾ ಆರು ಚಿನ್ನ, ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳಿವೆ. ತಲಾ ನಾಲ್ಕು ಚಿನ್ನ, ಬೆಳ್ಳಿ ಮತ್ತು ಎರಡು ಕಂಚು ಗೆದ್ದಿರುವ ಅಮೆರಿಕ ಪದಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಐ ಲೀಗ್ ಫುಟ್‌ಬಾಲ್: ಅರ್ಹತಾ ಸುತ್ತಿನ ಪಂದ್ಯಗಳಿಗೆ ಬೆಂಗಳೂರು ಆತಿಥ್ಯ

ರಾಜಸ್ಥಾನ್ ಯುನೈಟೆಡ್‌ಗೆ ರಿಂಥಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದಾರ್ಪಣೆ ಪಂದ್ಯದಲ್ಲಿ ಗೆಲುವಿನ ಗುರಿಯೊಂದಿಗೆ ರಾಜಸ್ಥಾನ್ ಯುನೈಟೆಡ್ ಎಫ್‌ಸಿ (ಆರ್‌ಯುಎಫ್‌ಸಿ) ಮತ್ತು ರಿಂಥಿ ಸ್ಪೋರ್ಟ್ಸ್ ಕ್ಲಬ್ ತಂಡಗಳು ಐ–ಲೀಗ್ ಫುಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ಹಣಾಹಣಿಯಲ್ಲಿ ಸೋಮವಾರ ಮುಖಾಮುಖಿಯಾಗಲಿವೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಒಟ್ಟು ಒಂಬತ್ತು ತಂಡಗಳು ಪಾಲ್ಗೊಳ್ಳಲಿದ್ದು ಇವುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. 'ಬಿ' ಗುಂಪಿನಲ್ಲಿ ಐದು ತಂಡಗಳು ಇವೆ. ಎಫ್‌ಸಿ ಬೆಂಗಳೂರು ಯುನೈಟೆಡ್ 'ಎ' ಗುಂಪಿನಲ್ಲಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣ –ಪ್ರಜಾವಾಣಿ ಚಿತ್ರ

ರಾಜಸ್ಥಾನ್ ಮತ್ತು ರಿಂಥಿ ಇದೇ ಮೊದಲ ಬಾರಿ ಐ–ಲೀಗ್ ಅರ್ಹತಾ ಸುತ್ತಿನಲ್ಲಿ ಆಡುತ್ತಿವೆ. ರಾಜಸ್ಥಾನ್ ರಾಜ್ಯ ಲೀಗ್‌ನಲ್ಲಿ ಚಾಂಪಿಯನ್ ಆಗಿ ಅರ್ಹತಾ ಸುತ್ತಿಗೆ ಪ್ರವೇಶ ಗಿಟ್ಟಿಸಿಕೊಂಡಿರುವ ಆರ್‌ಯುಎಫ್‌ಸಿ ಮುಖ್ಯ ಸುತ್ತು ಪ್ರವೇಶಿಸಿದರೆ ಐ–ಲೀಗ್‌ನಲ್ಲಿ ಆಡುವ ಆ ರಾಜ್ಯದ ಮೊದಲ ತಂಡ ಎನಿಸಿಕೊಳ್ಳಲಿದೆ. ಈ ಹಾದಿಯಲ್ಲಿ ತಂಡಕ್ಕೆ ಮೊದಲ ಪಂದ್ಯ ಮಹತ್ವದ್ದಾಗಿದೆ.

ಮೇಘಾಲಯದ ರಿಂಥಿ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಯುವ ಆಟಗಾರರೇ ತುಂಬಿದ್ದಾರೆ. ಇತ್ತೀಚೆಗೆ ದೇಶಿ ಟೂರ್ನಿಗಳಲ್ಲಿ ಈ ತಂಡ ಅಮೋಘ ಸಾಮರ್ಥ್ಯ ಪ್ರದರ್ಶಿಸಿದೆ. 2019ರಲ್ಲಿ ರಾಣಿ ಮೋಟರ್ಸ್ ನಾಕೌಟ್ ಟೂರ್ನಿ, ಬೊಡೊಸಾ ಇಂಟರ್‌ನ್ಯಾಷನಲ್ ಕಪ್ ಮತ್ತು ಮೇಘಾಲಯದ ಮುಕ್ತ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಕಳೆದ ವರ್ಷ ಅಖಿಲ ಭಾರತ ಮುಖ್ಯಮಂತ್ರಿಗಳ ಕಪ್‌ನ ಚಾಂಪಿಯನ್ ಆಗಿರುವ ತಂಡ ಅಂಬೇಡ್ಕರ್ ಸ್ಮಾರಕ ಆಹ್ವಾನಿತ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದೆ.